ಒಳ್ಳೆಯ ಅವಕಾಶ ಇದೆ. ಪ್ರಾಮುಖ್ಯವಾಗಿ, ಎಸ್‌ಸಿ ದುರ್ಬಲವರ್ಗಕ್ಕೆ ಸೇರಿದಂಥ ಜನರನ್ನು, ಈ ದೇಶದ ಪ್ರಗತಿಯ ಮೂಲ ಪ್ರವಾಹಕ್ಕೆ, ರಾಜಕೀಯವಾಗಿ ಪರಿಣಾಮಕಾರಿಯಾದ ಪ್ರಾತಿನಿಧ್ಯವನ್ನು ಕೊಟ್ಟು, ಅವರ ಹಕ್ಕನ್ನು ಕಾಪಾಡತಕ್ಕ ಈ ತಿದ್ದುಪಡಿಯನ್ನು ಎಲ್ಲರೂ ಒಪ್ಪಿದ್ದಾರೆ; ಮನ್ನಣೆ ಮಾಡಿದ್ದಾರೆ ಈ ಬಗ್ಗೆ ಸಕ್ರಿಯವಾದ ಒಂದು ಚರ್ಚೆ ಈ ಸದನದಲ್ಲಿ ಆಗಿದೆ. ಆದ್ದರಿಂದ ನಾನು ಎಲ್ಲಾ ಸದಸ್ಯರಿಗೂ ಅಭಿನಂದನೆ ಸಲ್ಲಿಸಿ, ಈ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರ್ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಹೀಗಿದೆ, 'ಸಂಸತ್ತಿನ ಉಭಯ ಸದನಗಳಿಂದಲ್ಲೂ ಅಂಗೀಕೃತವಾದ ರೂಪದಲ್ಲಿರುವ ಸಂವಿಧಾನ ೩೬೮(೨)ನೇ (ಡಿ) ಅನುಚ್ಛೇದದ ಪರಿಚ್ಛೇದಕ್ಕೆ ಮಾಡಲು ಉದ್ದೇಶಿಸಿರುವ ೧೯೮೯ನೇ ಇಸವಿಯ ಸಂವಿಧಾನದ (೬೨ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ.''

(ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು)

ಈ ಸಭೆಯು ಅಂಗೀಕರಿಸಿದ ನಿರ್ಣಯವನ್ನು ಸಂಸತ್ತಿಗೆ ಕಳುಹಿಸಿಕೊಡಲಾಗುವುದು.

ಈಗ ಉಳಿದಿರತಕ್ಕಂಥ ಒಂದು ಗಂಟೆ ಕಾಲದಲ್ಲಿ ರೈತರ ಸಾಲವನ್ನು ವಸೂಲ್ಮಾಡುವ ಬಗ್ಗೆ ೬೯ನೇ ನಿಯಮದ ಮೇರೆಗೆ ಚರ್ಚೆಗೆ ತೆಗೆದುಕೊಳ್ಳೋಣ. ಅನಂತರ ನಾಳೆ ಬೆಳಿಗ್ಗೆ ೧೦ ಗಂಟೆಯಿಂದ ಮಾನ್ಯ ಮುಖ್ಯ ಮಂತ್ರಿಯವರು ಈ ಚರ್ಚೆಗೆ ಉತ್ತರ ಕೊಡುತ್ತಾರೆ. ಅನಂತರ, ಗಮನ ಸೆಳೆಯುವ ಸೂಚನೆಗಳು ಕೆಲವು ಇವೆ, ಮೈಸೂರು ದೇವರಾಜ ಮಾರ್ಕೆಟ್‌ನಲ್ಲಿ ಬೆಂಕಿ ದುರಂತ, ಬೆಂಗಳೂರು ರಾಜಾ ಮಿಲ್ಲಿನಲ್ಲಿ ನಡೆದ ಅಗ್ನಿ ದುರಂತ, ಚಾಮರಾಜನಗರ ಮತ್ತು ರಾಮಸಮುದ್ರದ ಕುಡಿಯುವ ನೀರಿನ ಅಭಾವದ ವಿಷಯ ಮತ್ತೆ ೬೯ನೇ ನಿಯಮದ ಪ್ರಕಾರ ಗುಲ್ಬರ್ಗಾ, ಶಹಾಬಾದ್, ಬಳ್ಳಾರಿ ಮುಂತಾದ ಕಡೆಗಳಲ್ಲಿ ಪೋಲೀಸ್ ಲಾಕಪ್ಪಿನಲ್ಲಿ ಆದ ಸಾವಿನ ಪ್ರಕರಣದ ಚರ್ಚೆಯನ್ನು ನಾಳೆ ತೆಗೆದುಕೊಳ್ಳೋಣ. ಈಗ ರೈತರ ಸಮಸ್ಯೆ ಬಗ್ಗೆ ಚರ್ಚೆ,

ಶ್ರೀ ಎಸ್. ಹೆಚ್. ಕೌಜಲಗಿ.— ನಾನು ಕರ್ನಾಟಕ ಗಡಿ ವಿಷಯದಲ್ಲಿ ಗಮನ ಸೆಳೆಯುವ ಸೂಚನೆ ಕಳುಹಿಸಿಕೊಟ್ಟಿದ್ದೇನೆ.

ನಿಯಮ ೬೯ರ ಮೇರೆಗೆ

ರೈತರ ಸಾಲವನ್ನು ಮನ್ನಾಮಾಡುವ ಬಗ್ಗೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೇ ಬೆಳಿಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ, ಇಂದಿನ ರಾಜ್ಯದ ರೈತರ ಸಮಸ್ಯೆ ಬಗ್ಗೆ ಎದಿರತಕ್ಕಂಥ ಸಾಲ ಮನ್ನಾ ಮತ್ತು ಹೊಸ ಸಾಲದ ವ್ಯವಸ್ಥೆ ಮಾಡುವುದಕ್ಕೆ ಇರತಕ್ಕಂಥ ಮುಖ್ಯವಾದ ಸಂಸ್ಥೆಗಳಾದ ಸಹಕಾರ ಸಂಘಗಳ ಸ್ಥಗಿತ. ಈ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದೆ. ತಾವು ಇದನ್ನು ಬೇರೆ ರೂಪದಲ್ಲಿ ಚರ್ಚೆಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮ್ಮನ್ನು ವಂದಿಸುತ್ತೇನೆ. ನಾನು ಪ್ರಸ್ತಾಪ ಮಾಡಿದ್ದು, ಸಾಲ ಮಜಾ ಮಾಡತಕ್ಕಂಥ ಜವಾಬ್ದಾರಿ ರಾಜ್ಯಾಂಗ ಬದ್ಧವಾಗಿ ಕೇಂದ್ರಕ್ಕೆ ಇಲ್ಲ, ಹಣಕಾಸಿನ ಆಯೋಗದ ಪರಿಮಿತಿಯ ಚೌಕಟ್ಟಿನಲ್ಲಿ ಕೂಡಾ ಇದಕ್ಕೆ ಅವಕಾಶ ಇಲ್ಲ. ತಮ್ಮ ಪಕ್ಷದ ರಾಜಕೀಯ ಪ್ರಣಾಳಿಕೆ ಮುಂದಿಟ್ಟು, ರಾಜ್ಯದ ಮುಖ್ಯಮಂತ್ರಿಗಳು ಇದು ಕೇಂದ್ರದ ಸರ್ಕಾರದ ಜವಾಬ್ದಾರಿ ಎಂದು ಹೇಳಿ ತಮ್ಮ ಹೆಗಲಮೇಲಿನ ಜವಾಬ್ದಾರಿಯನ್ನು ಕೇಂದ್ರ ಮೇಲೆ ಹಾಕತಕ್ಕಂಥ ಪ್ರಯತ್ನ ಮಾಡಿದ್ದಾರೆ. ಇದರ ಪರಿಣಾಮವಾಗಿ ಸಾಲದ ವಸೂಲಾತಿ ನಿಲುಗಡೆ ಆಗಿ ಈಗ ಪುನಃ ವಸೂಲಾತಿ ಕಾರ್ಯಕ್ರಮ ನಡೆದಿದೆ. ಸಾಲ ವಸೂಲಾತಿ ಆಗುತ್ತಿಲ್ಲವೆಂದರೆ, ಮತ್ತೆ ಸಾಲ ಕೊಡುವಂಥ ಸ್ಥಿತಿಯೂ ಇಲ್ಲವಾಗುತ್ತದೆ. ಹೀಗೆ ಒಟ್ಟು ಸಹಕಾರಿ ವ್ಯವಸ್ಥೆ ಸ್ಥಗಿತವಾಗಿದೆ. ಇಂದು ರೈತರ ಸಾಲ ಮಜಾ ಮಾಡಬಾರದು ಎಂದು ಯಾರೂ ಹೇಳುವುದಿಲ್ಲ. ಎಲ್ಲರೂ ಮಜಾ ಮಾಡಬೇಕೆಂದೇ ಹೇಳುತ್ತಾರೆ, ನಾವು ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ಸಹಕಾರ ಅಸ್ತಿತ್ವಕ್ಕೆ ಬಂದರೆ loans up to Rs. 10 000 given to the land les, labourers, artisans etc. as on October 2nd 1989 will be written off

ಎನ್ನತಕ್ಕಂಥ ಮಾತನ್ನು ಕೊಟ್ಟಿದ್ದೇವೆ. ಇದನ್ನು ಜಾರಿಗೆ ಕೊಡುವ ವಿಚಾರದಲ್ಲಿ ಕೇಂದ್ರ ಸರಕಾರದ ಆಲೋಚನೆಗಳು ಏನು ನಾವು ಹೇಳಿರತಕ್ಕಂಥ ಸ್ಮಾಲ್ ಫಾರ್ಮರ್ಸ್ ಎಂದರೆ ಯಾರು, ಮಾರ್ಜಿನಲ್ ಫಾರ್ಮರ್ಸ್ ಎಂದರೆ ಯಾರು. ಆರ್ಟಿಸಾನ್ಸ್ ಎಂದರೆ ಯಾರು ಹಾಗೂ ಈ ರೀತಿಯಲ್ಲಿ ಮೂರು ನಾಲ್ಕು ವರ್ಗಗಳನ್ನು ಏನು ಮಾಡಿದ್ದಾರೆ, ಆ ವರ್ಗಗಳ ವರ್ಗೀಕರಣ ಆಗಿದೆಯೋ ? ಆಗಿಲ್ಲದಿದ್ದರೆ ವರ್ಗೀಕರಣ ಮಾಡತಕ್ಕಂಥವರು ಯಾರು ? ಇದು ಮೂಲತ: ಇರತಕ್ಕಂತಹ ಪ್ರಶ್ನೆ. ಎರಡನೆಯದು ನಮ್ಮ ರಾಜ್ಯದಲ್ಲಿರತಕ್ಕಂಥ ಒಟ್ಟಾರೆ ಸಾಲ ಎಷ್ಟು ? ಹತ್ತು ಸಾವಿರ ರೂಪಾಯಿಗಳ ಒಳಗಡೆ ಇರತಕ್ಕಂಥ ಸಾಲ ಎಷ್ಟು ? ನಬಾರ್ಡ್ ಸಂಸ್ಥೆಯವರು ಇಷ್ಟು ಸಾಲ ಕೊಟ್ಟಿದ್ದಾರೆ, ನಬಾರ್ಡ್ ಸಂಸ್ಥೆಯವರಲ್ಲದೇ ಇರುವವರು ಎಷ್ಟು ಸಾಲ ಕೊಟ್ಟಿದ್ದಾರೆ. ೧೦ ಸಾವಿರದ ಒಳಗಡೆ ಎಂದು ಮಾತ್ರ ಕೇಂದ್ರ ಸರಕಾರ ಹಾಕಿರತಕ್ಕಂಥ ಮಿತಿ. ಈ ವ್ಯಾಪ್ತಿಯೊಳಗೆ ಯಾರು ಬರುತ್ತಾರೆ. ಎಷ್ಟು ಬರುತ್ತದೆ ಎಂಬುದು ಮುಖ್ಯವಾದ ಪ್ರಶ್ನೆ. ಮಾರ್ಜಿನಲ್ ಮತ್ತು ಸ್ಮಾಲ್ ಫಾರ್ಮರ್ಸ್ ಎಂದರೆ ಏನು ? ಈ ಬಗ್ಗೆ ನಬಾರ್ಡ್ ಸಂಸ್ಥೆಯವರದ್ದು ಒಂದು ರೀತಿ ವ್ಯಾಖ್ಯಾನ ಇದೆ. ಐಆರ್‌ಡಿಪಿ ಅವರದ್ದು ಮತ್ತೊಂದು ರೀತಿ ವ್ಯಾಖ್ಯಾನ ಇದೆ, ನಬಾರ್ಡ್ ಸಂಸ್ಥೆಯವರು ರಾಜ್ಯವನ್ನು ಐದು ಭಾಗವಾಗಿ ವಿಂಗಡಣೆ ಮಾಡಿ ತಮ್ಮದೇ ಆದ ರೀತಿಯ ವ್ಯಾಖ್ಯಾನ ಮಾಡಿದ್ದಾರೆ. ಇಂತಹ ವ್ಯಾಖ್ಯೆಯ ಕೆಳಗೆ ನನಗೆ ಗೊತ್ತಿರುವ ಹಾಗೆ ನನ್ನಲ್ಲಿರತಕ್ಕಂಥ ಮಾಹಿತಿಯ ಪ್ರಕಾರ ಸುಮಾರು ಎಷ್ಟು ಸಾಲದ ವ್ಯವಸ್ಥೆ ಆಗಿದೆ ಎಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಒಟ್ಟು ಕೊಟ್ಟಿರತಕ್ಕಂಥ ಸಾಲ ಸುಮಾರು ೬೧೧ ಕೋಟಿ ರೂಪಾಯಿಗಳು, ಇದರಲ್ಲಿ ಔಟ್‌ಸ್ಟ್ಯಾಂಡಿಂಗ್ ನವೆಂಬರ್ ೧೯೯೮ರಲ್ಲಿ ಇದ್ದಂತೆ ೩೩೨ ಕೋಟಿ ರೂ.ಗಳು. ಅವರ ಲೆಕ್ಕದಂತೆ ಹತ್ತು ಸಾವಿರದ ಒಳಗಡೆ ಇರತಕ್ಕಂಥ ಸಾಲದ ಮೊತ್ತ ಸುಮಾರು ೧೧೨.೩೦ ಕೋಟಿ ರೂ.ಗಳು. ಹಾಗಾಗಿ ನಾವು ಹೇಳತಕ್ಕಂಥ ಡೆಫಿನಿಷನ್ ಒಳಗೆ ಎಷ್ಟು ಜನ ಬರುತ್ತಾರೆ. ನಮ್ಮ ಡೆಫಿನಿಷನ್ ಒಳಗೆ ನಬಾರ್ಡ್‌ನವರು ಹೇಳಿರತಕ್ಕಂಥ ಸಣ್ಣ ರೈತರು ಮತ್ತು ಅತಿಸಣ್ಣ ರೈತರು ಇದರ ವ್ಯಾಪ್ತಿಗೆ ಬಂದರೆ ಅದು ಸುಮಾರು ೧೧೨ ಕೋಟಿ ಬರುತ್ತದೆ. ಐಆರ್‌ಡಿಪಿ ಡೆಫಿನಿಷನ್ ಅಳವಡಿಸಿದರೆ ಅದು ೩೦ ಕೋಟಿಗಿಂತ ಹೆಚ್ಚು ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಿ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದೋ ಅಥವಾ ಬ್ಯಾಂಕಿಕ್ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದೋ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಹಕಾರಿ ಪಿ.ಎಲ್.ಡಿ. ಬ್ಯಾಂಕ್‌ಗೆ ಸಂಬಂಧಪಟ್ಟಿದ್ದು. ಹಾಗೆ ಅಪೆಕ್ಸ್ ಬ್ಯಾಂಕ್‌ನವರು ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಅದು ೧೦ ಸಾವಿರ ರೂಪಾಯಿಗಳದು . ಸುಮಾರು ೨೩೦ ಕೋಟಿ ರೂಪಾಯಿಗಳಾಗಬಹುದೆಂದು ಹೇಳಿದ್ದಾರೆ. ಇದಕ್ಕೆ ಕ್ರೈಟೀರಿಯಾ ಏನು? ನಮಗೆ ಇದು ತಿಳಿಯುತ್ತಿಲ್ಲ ಹಿಂದಿನ ಸಭೆಯಲ್ಲಿ ಮಾತನಾಡುವುದಕ್ಕೆ ಮೊದಲು ನಾವು ಇದಕ್ಕೆ ಒಂದು ಕ್ರೈಟೀರಿಯಾ ಫಿಕ್ಸ್ ಮಾಡಿ ಈ ವ್ಯಾಪ್ತಿಯಲ್ಲಿ ಎಷ್ಟು ಒಟ್ಟು ಜನರು ಬರುತ್ತಾರೆ ಎಷ್ಟು ಹಣ ಆಗುತ್ತದೆ ನೋಡಿ ಎಂದು ಹೇಳಿದ್ದೆವು. ಇದನ್ನು ರಾಜ್ಯ ಸರ್ಕಾರದವರು ಮಾಡಬೇಕು. ಆದರೆ ಈ ಕೆಲಸ ಪ್ರಾರಂಭವಾಗಲೇ ಇಲ್ಲ. ಇದುವರೆವಿಗೂ ಪ್ರಾರಂಭವಾಗಲಿಲ್ಲ. ಮೊದಲು ನೀವು ಈ ಕೆಲಸವನ್ನು ಪ್ರಾರಂಭ ಮಾಡಿ. ಕೇಂದ್ರ ಸರ್ಕಾರಕ್ಕೆ ಇರತಕ್ಕಂಥ ಇತಿಮಿತಿಯಲ್ಲಿ ಮತ್ತು ಅವರ ವ್ಯಾಪ್ತಿಯಲ್ಲಿ ಎಷ್ಟು ಜನರು ಇಂತಹ ರೈತರು ಬರುತ್ತಾರೆ ಎನ್ನುವುದು ಗೊತ್ತಾಗುತ್ತದೆ. ನಿನ್ನೆಯು ಸಹ ಕೇಂದ್ರದ ಹಣಕಾಸಿನ ಸಚಿವರು ಒಂದು ಮಾತನ್ನು ಸ್ಪಷ್ಟವಾಗಿ ಈ ಬಗ್ಗೆ ಹೇಳಿದ್ದಾರೆ. ವಿಲ್‌ಫುಲ್ ಡಿಫಾಲ್ಟರ್ಸ್ ಯಾರ್‍ಯಾರು ಅವರು ಎಷ್ಟು ಜನ ಇದ್ದಾರೆ ಅವರ ಸಂಖ್ಯೆ ಎಷ್ಟು ಆ ಸಂಖ್ಯೆಗೆ ಬರತಕ್ಕಂಥ ಮೊತ್ತ ಎಷ್ಟು ? ಇವೆಲ್ಲಾ ಯಾರು ಗುರುತಿಸಬೇಕು ? ರಾಜ್ಯ ಸರ್ಕಾರ ಮಾಡಬೇಕು. ಈ ಕೆಲಸ ಆಗದಿದ್ದ ಕಾರಣ ಒಂದು ರೀತಿಯ ದ್ವಂದ್ವ ಪ್ರಾರಂಭವಾಯಿತು. ತಾವು ಹಿಂದಿನ ಸಭೆಯಲ್ಲಿ ಸಾಲ ವಸೂಲಾತಿಯನ್ನು ಮುಂದಕ್ಕೆ ಹಾಕುತ್ತೇವೆಂದು ಹೇಳಿದಿರಿ. ಎಷ್ಟು ದಿವಸವೆಂದೂ ಸಹ ಹೇಳಲಿಲ್ಲ. ತಾತ್ಕಾಲಿಕವಾಗಿ ಎಂದು ಹೇಳಿದಿರಿ. ನನ್ನ ವ್ಯಾಖ್ಯಾನ ಆ ಬಗ್ಗೆ ಏನಿತ್ತು ಎಂದರೆ, ಕೇಂದ್ರ ಸರ್ಕಾರದ ಮುಂಗಡ ಪತ್ರ ಬರುವವರೆವಿಗೂ ನೀವು ಕಾಯುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆಗ ಕೇಂದ್ರ ಸರ್ಕಾರ ಕೊಡತಕ್ಕಂಥ ಒಂದು ರಿಯಾಯಿತಿಯ ಲಾಭವನ್ನು ತಾವು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಾನು ಭಾವಿಸಿದ್ದೆ. ಈ ಸಂದರ್ಭದಲ್ಲಿ ಒಂದು ರಾಷ್ಟ್ರೀಯ ವಿಚಾರ ಸಂಕಿರ್ಣ ನಡೆಸುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅದು ನನ್ನ ದೃಷ್ಟಿಯಲ್ಲಿ ಬರೀ ಭ್ರಮೆಯಾಗಿ ಉಳಿಯಿತು. ತಾವು ಮಾಡಿದ ಕೆಲಸವೇನೆಂದರೆ ಎಂಟು ಜನ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಸಾಲ ಮಜಾ ಮಾಡಬೇಕೆಂದು ಕೇಳಿದ್ದು. ಈ ರೀತಿ ಕೇಳಿದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ತಾವು ಹೇಳಬೇಕಾದ್ದನ್ನು ಹೇಳಿದಿರಿ. ಹಾಗೆ ಹೇಳುವಾಗ ಎಂಟು ಜನ ಕಾಂಗ್ರೆಸ್ ಮುಖ್ಯಮಂತ್ರಿಗಳು ನೀವು ಪ್ರಧಾನ ಮಂತ್ರಿಗಳಿಗೆ ಹೇಳತಕ್ಕಂಥ ಪ್ರಯತ್ನ ಮಾಡಿ ಈ ಬಗ್ಗೆ ರಾಷ್ಟ್ರೀಯ ಚರ್ಚೆ ಆಗಬೇಕೆಂದು ಹೇಳುವ

ಬದಲು ಅದನ್ನು ತಾವು ರಾಜಕೀಯಂ ಚರ್ಚೆಗೆ ಪರಿವರ್ತನೆ ಮಾಡಿದಿರಿ ಎನ್ನುವುದೇ ನನ್ನ ಆಪಾದನೆ. ಕನ್ನಡದಲ್ಲಿ ಒಂದು ಗಾದೆ ಇದೆ. ಅದೇನೆಂದರೆ ಇಲ್ಲಪ್ಪ ಗುಂಡಪ್ಪ ಸೇರಿ ವೆಂಕಪ್ಪ ಪುಡಿಯಾದ ಎಂದ ಹಾಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ರೈತ ಕಷ್ಟಕ್ಕೆ ಸಿಕ್ಕಿಹಾಕಿಕೊಂಡ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಕೊಡತಕ್ಕಂಥ ಲಾಭವನ್ನು ಪಡೆದುಕೊಂಡು ನೀವು ಎಷ್ಟು ದೂರ ಹೋಗಿದ್ದೀರಿ ಎಂದು ಹೇಳುವುದಕ್ಕೆ ತಾವು ಸಿದ್ಧವಾಗಿಲ್ಲ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ತಾವು ಸಿದ್ಧವಾಗಿಲ್ಲ. ಆರ್ಥಿಕವಾಗಿ ನಿಮಗೆ ಬಲ ಇಲ್ಲ. ರೈತರ ಸಾಲ ಮನ್ನಾ ಮಾಡತಕ್ಕಂಥಾದ್ದಕ್ಕೆ ಶಕ್ತಿ ಇಲ್ಲವೆಂದು ಪದೇ ಪದೇ ಹೇಳಿದ್ದೀರಿ. ಆ ಒಂದು ವಿವಾದಕ್ಕೆ ನಾನು ಹೋಗುವುದಿಲ್ಲ. ಆದರೆ ನಾವು ಕಳೆದ ೬ ವರ್ಷಗಳ ಕಾಲ ಅಧಿಕಾರ ನಡೆಸಿದ್ದೇವೆ. ಆ ಸಂದರ್ಭದಲ್ಲಿ ರೈತರ ಬಡ್ಡಿ ವಜಾ ಮಾಡತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡೆವು. ಆಗ ಕೇಂದ್ರ ಸರ್ಕಾರವನ್ನು ಕೇಳಲಿಲ್ಲ. ಸುಮಾರು ೧೫೦ ಕೋಟಿ ರೂಪಾಯಿಗಳ ಬಡ್ಡಿಯನ್ನು ಹಿಂದಿನ ಸರ್ಕಾರ ವಜಾ ಮಾಡಿರತಕ್ಕಂಥಾದ್ದರ ಬಗ್ಗೆ ನಿಮ್ಮ ಕಡತಗಳನ್ನು ನೋಡಿದರೆ ವಿವರಗಳು ಸಿಗುತ್ತದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಹಣವನ್ನು ಹಿಂದಿನ ಸರ್ಕಾರ ಕೊಡುವುದಕ್ಕೆ ಸಾಧ್ಯವಿದೆ ಆದರೆ ನೀವು ಕೇಂದ್ರ ಸರ್ಕಾರದ ಕಡೆ ಕೈ ತೋರಿಸುತ್ತಿದ್ದೀರಿ. ಆದರೆ ನಿಮ್ಮ ಪರಿಸ್ಥಿತಿ ಏನು ಕೇಂದ್ರ ಸರ್ಕಾರವು ಕೂಡ ರಾಜ್ಯಾಂಗ ಬದ್ಧವಾಗಿ ಸಾಲ ವಜಾ ಮಾಡಲು ಸಾಧ್ಯವಿಲ್ಲ. ಅಥವಾ ಫೈನಾನ್ಸ್ ಕಮಿಷನ್ ಚೌಕಟ್ಟಿನ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರ ಸಾಲ ವಜಾ ಮಾಡುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ರಾಜಕೀಯ ಕಾರಣಕ್ಕಾಗಿ ಚುನಾವಣೆ ಪ್ರಣಾಳಿಕೆಯಲ್ಲಿರುವಂತೆ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹಾಕುತ್ತಿದ್ದೀರಿ. ಆದರೆ ಇದು ಒಂದು ರಾಜ್ಯಾಂಗಬದ್ಧವಾದ ಶಾಸನಬದ್ಧವಾದ ವಿಧಿ ವಿಧಾನಗಳಿಗೆ ಅನುಸಾರವಾದ ಶಾಸನ ಸಭೆ ಮತ್ತು ಸರ್ಕಾರ.

ಸಹಕಾರ ಸಂಘ ಅಥವಾ ಸಹಕಾರ ಸಂಸ್ಥೆಗಳು ರಾಜ್ಯಕ್ಕೆ ಸೇರಿದಂಥ ಸಂಸ್ಥೆಗಳು. ಇದು ರಾಷ್ಟ್ರೀಯ ಸಂಸ್ಥೆಯಲ್ಲ ಇಲ್ಲಿ ನಡೆಯತಕ್ಕಂಥ ಪೂರ್ಣ ಜವಾಬ್ದಾರಿ ಮತ್ತು ಆಗು ಹೋಗುಗಳು ರಾಜ್ಯ ಸರ್ಕಾರಕ್ಕೆ ಸೇರಿದ್ದು ಸೇವಾ ಸಹಕಾರ ಸಂಘಗಳಿಗೆ ಮತ್ತು ಸಹಕಾರ ಸಂಸ್ಥೆಗಳಿಗೆ ಕೊಟ್ಟಿರುವ ಸಾಲದ ಜವಾಬ್ದಾರಿ ರಾಜ್ಯದ್ದಾಗಿರುತ್ತದೆ. ಈ ಹೊಣೆಗಾರಿಕೆಯಿಂದ ನೀವು ತಪ್ಪಿಸಿಕೊಳ್ಳುವುದಕ್ಕಾಗುವದಿಲ್ಲ. ಆದ್ದರಿಂದ ಇದಕ್ಕೆ ನಿಮ್ಮ ಸ್ಪಷ್ಟವಾದ ನಿಲುವು ಏನು ನಾವು ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದ ಮೇಲೆ ೧೯೮೭–೮೮ರಲ್ಲಿ ಸುಮಾರು ೩೦ ಕೋಟಿ ೧೪ ಲಕ್ಷ ರೂಪಾಯಿಗಳನ್ನು ಭೂ ಅಭಿವೃದ್ಧಿ ಬ್ಯಾಂಕ್ ಒಂದಕ್ಕೆ ಕೊಟ್ಟಿದ್ದೇವೆ. ನಾನು ಬರೀ ಭೂ ಅಭಿವೃದ್ಧಿ ಬ್ಯಾಂಕ್‌ನ ಲೆಕ್ಕವನ್ನು ಮಾತ್ರ ಹೇಳುತ್ತಿದ್ದೇನೆ. ೧೯೮೪–೮೫ ರಲ್ಲಿ ಮತ್ತು ೧೯೮೬–೮೭ ರಲ್ಲಿ ಯಾರು ಪ್ರಾಮಾಣಿಕವಾಗಿ ಸಾಲವನ್ನು ಕೊಡುತ್ತಾರೋ ಅಂಥವರಿಗೆ ಶೇಕಡಾ ೭ ರಷ್ಟು ಬಡ್ಡಿಯಲ್ಲಿ ಮರು ಸಾಲ ಕೊಡತಕ್ಕಂಥ ವ್ಯವಸ್ಥೆ ಇತ್ತು. ಶೇಕಡಾ ೭ ರಲ್ಲಿ ಬಡ್ಡಿ ವಸೂಲು ಮಾಡತಕ್ಕಂಥ ಕಾರ್ಯಕ್ರಮ ಇತ್ತು ತಾವು ಅದನ್ನು ವಾಪಸ್ ಪಡೆದು ಕೊಂಡಿದ್ದೀರಿ, ಆ ಕಾರಣಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗಲೇ ೩೦ ಕೋಟಿ ರೂಪಾಯಿಗಳು ಎಂದು ಹೇಳಿದರಲ್ಲ ಅದು ಎಲ್ಲಿ ಹೋಯಿತು?

ಶ್ರೀ ಬಿ. ಡಿ. ಚಂದ್ರೇಗೌಡ.—ಅಲ್ಲಿಗೇ ಬರುತ್ತೇನೆ. ಮೊದಲು ನಬಾರ್ಡ್ ಸಂಸ್ಥೆಯವರು ಶೇಕಡಾ ೭ ರ ಬಡ್ಡಿಯಲ್ಲಿ ಅಪೆಕ್ಸ್ ಬ್ಯಾಂಕ್‌ಗೆ ಸಾಲ ಕೊಡುತ್ತಿದ್ದರು. ಇತ್ತೀಚೆಗೆ ಸುಮಾರು ಒಂದೂವರೆ ವರ್ಷಗಳಿಂದ ಒಂದು ರಿವರ್ಸ್ ರೇಟ್ ಆಫ್ ಇಂಟರೆಸ್ಟ್ ಅಂತ ಹೊಸ ಸ್ಟ್ರಕ್ಚರ್ ಮಾಡಿದ್ದಾರೆ. ಮೊದಲು ಶೇಕಡಾ ೩. ೪. ಮತ್ತು ೫ ರ ಬಡ್ಡಿ ಮೇಲೆ ಅಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್ ಸಂಸ್ಥೆಯವರು ಸಾಲ ಕೊಡುತ್ತಿದ್ದರು. ಆದರೆ, ನಾವು ಇವತ್ತು ವಸೂಲಿ ಮಾಡುತ್ತಿರುವುದು ಶೇಕಡಾ ೧೨ ರಷ್ಟನ್ನು ಮೀರಿದೆ. ಇದು ಕನಿಷ್ಟ ಯಾವ ಯಾವ ಪ್ರಮಾಣದಲ್ಲಿ ಇದೆ ಎನ್ನುವ ವಿವರಕ್ಕೆ ನಾನು ಹೋಗುವುದಿಲ್ಲ ಇನ್ನೂ ಅನೇಕ ಜನ ಮಾತನಾಡುವವರಿದ್ದಾರೆ. ಆದರೆ, ಈಗ ಉದಾಹರಣೆಗೆ ಪುನಃ, ೧೯೮೭–೮೮ ನೇ ಇಸವಿಯಲ್ಲಿ ಫುಲ್ ವೇವರ್ ಆಫ್ ದಿ ಟೋಟಲ್ ಇಂಟರೆಸ್ಟ್ ಸುಮಾರು ೮೫ ಕೋಟಿ ಆಷ್ಟಾಯಿತ್ತು. ಒಟ್ಟು ೧೫೦ ಕೋಟಿ ರೂಪಾಯಿ ಮೀರಿದಂತೆ ಬಡ್ಡಿ ರಿಯಾಯಿತಿಯನ್ನು ನಾವು ಕಳೆದ ೫–೬ ವರ್ಷಗಳಲ್ಲಿ ನಮ್ಮ ಸರ್ಕಾರ ರೈತರುಗಳಿಗೆ ಕೊಟ್ಟಿದೆ. ಈ ಭೂ ಅಭಿವೃದ್ಧಿ ಬ್ಯಾಂಕ್‌ಗೆ ನಬಾರ್ಡ್ ಸಂಸ್ಥೆಯವರು ಕೊಡತಕ್ಕಂಥ ಸಾಲದ ಪೆಂಡಿಂಗ್ ರೇಟ್ ಆಫ್ ಇಂಟರೆಸ್ಟ್ ಶೇಕಡಾ ಆರೂವರೆಯಿಂದ ಎಂಟೂವರೆಯ ವರೆಗೆ ಇದೆ. ಆದರೆ, ಬಾರೋಯರ್ಸ್‌ಗೆ ಅವರು ಏನು ಕೊಡುತ್ತಾರೆ ? ಅದು ಸುಮಾರು ೧೦ ರಿಂದ ೧೨ ಪರ್ಸೆಂಟ್ ಇದೆ. ಅಂದರೆ, ೩.೫ ಅಥವಾ ೪.೫ ರ ವರೆಗೆ ಹೆಚ್ಚಿಗೆ ವಸೂಲು ಮಾಡುತ್ತಾರೆ: ಅವರಲ್ಲಿ

ಎಸ್. ಎಲ್. ಡಿ. ಬಿ., ಯವರು ೧.೭೫ ವಸೂಲು ಮಾಡುತ್ತಾರೆ, ಪಿ. ಎಲ್. ಡಿ. ಬಿ., ಯವರು ೨.೨೫ ವಸೂಲು ಮಾಡುತ್ತಾರೆ. ಇವತ್ತು ಶೇಕಡಾ ೪೦ ರಷ್ಟು ದೀರ್ಘಾವಧಿ ಸಾಲವನ್ನು ಭೂ ಅಭಿವೃದ್ಧಿ ಬ್ಯಾಂಕ್‌ನವರು ಕೊಡುತ್ತಿದ್ದಾರೆ. ಉಳಿದ ಶೇಕಡಾ ೬೦ ರಷ್ಟನ್ನು ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು, ಕಮರ್ಷಿಯಲ್ ಬ್ಯಾಂಕ್‌ನವರು ಹಾಗೂ ನ್ಯಾಷನಲೈಸ್ಡ್ ಬ್ಯಾಂಕ್‌ನವರು ಕೊಡುತ್ತಿದ್ದಾರೆ. ಒಟ್ಟಿನಲ್ಲಿ ನಮ್ಮ ದ್ವಂದ್ವ ನೀತಿಯಿಂದಾಗಿ ಈಗ ಹೊಸ ಸಾಲ ಕೊಡುವ ಸ್ಥಿತಿಯಲ್ಲಿ ಇಲ್ಲ. ಹಳೇ ಸಾಲ ವಸೂಲಾಗುತ್ತಿಲ್ಲ.

೪.೩೦ ಪಿ. ಎಂ.

ಆದ್ದರಿಂದ ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನನ್ನು ಮುಚ್ಚುವಂಥಾ ಇಲ್ಲವೇ ಸ್ಥಗಿತಗೊಳಿಸುವ ಒಂದು ಸ್ಥಿತಿಗೆ ಅದು ತಲುಪಿದೆ ಎಂದು ನಾನು ವಿರೋಧ ಪಕ್ಷದ ನಾಯಕನಾಗಿ ಹೇಳುತ್ತಿದ್ದೇನೆ. ಒಟ್ಟಾರೆ ಎಲ್ಲರೂ ಈ ಪರಿಸ್ಥಿತಿಯನ್ನು ಒಪ್ಪಿಕೊಳ್ಳಬಹುದು. ಮತ್ತೆ ಶಾರ್ಟ್ ಟರ್ಮ್ ಸಾಲವನ್ನು ಆದಷ್ಟು ಬೇಗ ಕೊಡುತ್ತೇವೆ ಎನ್ನುತ್ತೀರಿ. ಇವೂ ಕೂಡ ವಸೂಲಾತಿಗೆ ಯಾರೂ ಯಾವ ಬ್ಯಾಂಕಿನ ನೌಕರರೂ ಗ್ರಾಮೀಣ ಪ್ರದೇಶಕ್ಕೆ ಪ್ರವೇಶ ಮಾಡಲಾರದಂತಹ ಸ್ಥಿತಿ ಇದೆ. ಬಹುಶಃ ವಸೂಲಿಗಾಗಿ ಅವರು ಹೋದರೆ ರೈತರು ಅವರ ಮೇಲೆ ಬೇರೆ ಕ್ರಮ ತೆಗೆದುಕೊಳ್ಳುವ ಸ್ಥಿತಿಗೆ ಹೋಗಿದ್ದಾರೆ. ಹೇಗೆ ಈ ದ್ವಂದ್ವವನ್ನು ಬಿಡಿಸುವುದು. ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು ಒಂದು ಹೇಳಿಕೆಯನ್ನು ಮಾಡುತ್ತಾರೆ, ಆ ಹೇಳಿಕೆಗೆ ಹಣಕಾಸಿನ ಕಾರ್ಯದರ್ಶಿಗಳು ಉತ್ತರ ಹೇಳುತ್ತಾರೆ. ಜನತಂತ್ರದಲ್ಲಿ ಇದಕ್ಕಿಂತ ದೊಡ್ಡ ದುರಂತ ಇಲ್ಲವೆಂದು ನಾನು ಭಾವನೆ ಮಾಡುತ್ತೇನೆ. ರಾಜ್ಯದ ಶೇಕಡ ೪೦ ರಷ್ಟು ಜನರ ಜವಾಬ್ದಾರಿಯನ್ನು ಹೊತ್ತ ಚುನಾಯಿತ ಪ್ರತಿನಿಧಿಯೊಬ್ಬರು ಪರಿಸ್ಥಿತಿಯೊಂದನ್ನು ವಿವರಿಸಿ ಜನತೆಗೆ ಹೇಳಿದರೆ ಸರ್ಕಾರೀ ಅಧಿಕಾರಿ ಉತ್ತರ ಹೇಳುತ್ತಾರೆ. ಹೀಗೆ ಹೇಳುವಾಗ ಅವರು ಹಿಂದೆ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು ಆಗಿದ್ದರು ಆದ್ದರಿಂದ ಅದರ ಎಲ್ಲ ಜವಾಬ್ದಾರಿ ಆಗು ಹೋಗುಗಳು ಅವರಿಗೆ ತಿಳಿದರೆ, ಲೆಕ್ಕ ಗೊತ್ತಿದೆ. ಗೊತ್ತಿದ್ದೂ ಕೂಡ ಅವರು ಹೇಳಿದ್ದು ಸರಿಯೋ ತಪ್ಪೋ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳೋ ಮಂತ್ರಿಗಳೋ ಹೇಳಬೇಕಾಗಿತ್ತು. ಆ ಕಾರಣದಿಂದ ನಾವು ಇದನ್ನು ಹೆಚ್ಚು ಹೆಚ್ಚು ಗೊಂದಲಕ್ಕೆ ಒಯ್ಯುತ್ತಿದ್ದೇವೆ. ನಿರ್ವಿವಾದವಾದಂತಹ ಒಂದು ಅಂಶವೇನೆಂದರೆ ರೈತರ ಸಾಲ ಮನ್ನಾ ಆಗಬೇಕು. ೧೦ ಸಾವಿರದ ಒಳಗಡೆ ಇರುವ ಸಾಲ ಮನ್ನಾ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಏನು ತೀರ್ಮಾನ ಮಾಡಿದೆ, ಆ ನಿರ್ಣಯದ ವ್ಯಾಪ್ತಿಯೊಳಗೆ ಬರುವವರನ್ನು ಗುರುತಿಸುವ ಕೆಲಸವಾಗಬೇಕು, ಕನಿಷ್ಟ ಹಿಂದಿನ ಪದ್ಧತಿ ಏನಿತ್ತು. ಶೇಕಡ ೭ ರಷ್ಟು ಬಡ್ಡಿಯಲ್ಲಿ ಸಾಲ ಕೊಡುತ್ತೇವೆ. ಪ್ರಾಮಾಣಿಕವಾಗಿ ಕೊಡತಕ್ಕಂಥವನಿಗೆ ಶೇಕಡ ೭ ರಂತೆ ಪುನಃ ಸಾಲ ಕೊಡುತ್ತೇವೆ ಎಂದಾದರೂ ಹೇಳಬಹುದಾಗಿತ್ತು. ಇಲ್ಲವೇ

(ಶ್ರೀ ಗುರುಪಾದಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಕ್ಟೋಬರ್ ೨, ೧೯೮೯ಕ್ಕೆ ಸಾಲ ಮನ್ನಾ ಮಾಡುತ್ತೇವೆಂದು ಕೇಂದ್ರ ಏನು ಹೇಳಿಕೆ ನೀಡದೆ ಆ ರೀತಿ ಆದರೆ ನಿಮಗೆ ಅದನ್ನು ತುಂಬಿಕೊಡುತ್ತೇವೆ ಎಂದು ಹೇಳುವ ಆಶ್ವಾಸನೆ ಆದರೂ ಬೇಡವೇ? ಒಂದು ವೇಳೆ ನೀವು ಮರು ಪಾವತಿ ಮಾಡದಿದ್ದರೆ ನಾವು ಯಾವ ಸಹಕಾರ ಸಂಸ್ಥೆಗಳನ್ನು ನಡೆಸಬೇಕೋ ಅವು ಸ್ಥಗಿತಕ್ಕೆ ಬರುತ್ತವೆ, ಆದ್ದರಿಂದ ನೀವು ಕೊಟ್ಟರೆ ಕೇಂದ್ರ ಸರ್ಕಾರದ ವ್ಯಾಪ್ತಿಯೊಳಗೆ ಅದು ಬಂದಿದ್ದರೆ ಇದನ್ನು ಮರುಪಾವತಿ ಮಾಡುವ ಜವಾಬ್ದಾರಿ ತೆಗೆದುಕೊಳ್ಳುತ್ತೇವೆಂದು ಹೇಳುವ ಸ್ಥಿತಿಯಾದರೂ ಬರಬೇಕು. ಶೇಕಡ ೭ ರ ಬಡ್ಡಿಯಲ್ಲಿ ಸಾಲ ಸಿಗುತ್ತದೆನ್ನುವ ಧೈರ್ಯವನ್ನಾದರೂ ನೀವು ರೈತರಿಗೆ ತುಂಬಬೇಕು. ಆತ ಕೊಟ್ಟರೆ ಪುನಃ ಸಿಗುವುದಿಲ್ಲ ಎಂಬ ಪರಿಣಾಮದಿಂದ ನಾವು ಬಡ ರೈತರನ್ನು ಖಾಸಗಿ ಸಾಲಗಾರನ ಮಡಿಲಿಗೆ ಪುನಃ ಹಾಕುತ್ತಿದ್ದೇವೆ. ಆತ ಸಾಲ ವಜಾ ಮಾಡಿ ಎಂದು ಕೇಳುವುದಕ್ಕಾಗುವುದಿಲ್ಲ ಸಾಲ ಇಲ್ಲದೆ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ರೈತ ಈ ದೇಶದ ಬೆನ್ನೆಲುಬು ರೈತನ ಆರ್ಥಿಕ ಸ್ಥಿತಿ ಸುಧಾರಣೆಯಾದರೆ ರಾಷ್ಟ್ರದ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತದೆ, ಇಲ್ಲದಿದ್ದರೆ ಆರ್ಥಿಕ ಅಸಮತೋಲತೆಯನ್ನು ಕಾಣಬೇಕಾಗುತ್ತದೆ ಎನ್ನುವುದೆಲ್ಲ ನಿಜ ಹಾಗೆಯೇ ರಾಷ್ಟ್ರದಲ್ಲಿರುವ ವಿದೇಶಿ ಸಾಲದ ಹೊರೆ ಎಷ್ಟು ಆಂತರಿಕ ಸಾಲದ ಹೊರೆ ಎಷ್ಟು ಇದಕ್ಕೆ ಹೊಣೆ ಯಾರು ? ಈ ಸಾಲದ ಮೇಲಿನ ಬಡ್ಡಿ ಎಷ್ಟು ಕೊಡುತ್ತಿದ್ದೀರಿ ಅವನೆಲ್ಲ ಗಮನದಲ್ಲಿಟ್ಟುಕೊಂಡು ಕೇಂದ್ರ ಅವರ ವ್ಯಾಪ್ತಿಯೊಳಗೆ [illegible] ಪೂರ್ಣ ಪ್ರಮಾಣದ ಚರ್ಚೆ ಇದುವರೆಗೂ ಆಗಲಿಲ್ಲ ಈಗ ನಿಮ್ಮ ಜೊತೆಯಲ್ಲಿ ಕೇಂದ್ರದೊಡನೆ ನನ್ನ ಸಹಾಯ ನನ್ನ ಪಕ್ಷದ ಸಹಕಾರ ಅಗತ್ಯವೆಂದು ಬಂದರೆ ನಾವು ಅದಕ್ಕೆ ಸಿದ್ಧವಾಗಿದ್ದೇವೆ ಆದರೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಈ ಬಗ್ಗೆ

ದಯವಿಟ್ಟು ನಿಮ್ಮ ನಿರ್ದಿಷ್ಟ ನಿಲುವನ್ನು ಹೇಳಿ ಹೊಣೆಗಾರಿಕೆಯಿಂದ ಜಾರಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಡಿ. ಜನ ಏನೋ ಭರವಸೆಯಿಟ್ಟುಕೊಂಡು ೧೭೭ ರಷ್ಟು ಸಂಖ್ಯೆಯನ್ನು ನಿಮಗೆ ಕೊಟ್ಟಿರುವುದನ್ನು ವ್ಯರ್ಥ ಮಾಡಕೊಳ್ಳಬೇಡಿ. ನನ್ನ ಮುಂದೆ ತಾವು ಹೊರಡಿಸಿರುವ ರಾಜ್ಯ ಅಧೀನ ಸಂಸ್ಥೆಗಳ ಆರ್ಥಿಕ ಸ್ಥಿತಿಯ ಕಾಪೇರೆಟೀವ್ ಪುಸ್ತಕ ಇದೆ. ಅದರ ಪ್ರಕಾರ ಕೆ ಎಸ್ ಎಫ್ ಸಿ, ಕೆ ಎಸ್ ಐ ಐ ಡಿ ಸಿ ಗಳಿಂದ ೨೭೭ ಕೋಟಿ ೮೭ ನೇ ಮಾರ್ಚ್‌ಗೆ ಬಾಕಿ ಇದೆ. ಇದರ ವಸೂಲಾತಿಗೆ ಏಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ? ರೈತರ ಸಾಲ ವಸೂಲಾತಿಗೇ ಇಷ್ಟೊಂದು ಕಾಳಜಿ ಏಕೆ ? ಬಹುಶಃ ನಾವು ರೈತ ಪ್ರತಿನಿಧಿಗಳೆಂದು ಹೇಳಿಕೊಂಡು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸದನದಲ್ಲಿ ಕೂತು ಅದರ ಬಗ್ಗೆ ಆಲೋಚನೆ ಮಾಡುವಾಗ ನಮ್ಮ ಆರ್ಥಿಕ ಇತಿಮಿತಿಗಳನ್ನು ಆರ್ಥಿಕ ತೊಂದರೆಗಳನ್ನು ರಾಜ್ಯದ ಪರಿಸ್ಥಿತಿಯನ್ನ ಹೇಳಿ ಸಮಾಧಾನ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿವು ನಿರ್ಧಾರ ಮಾಡಿ ಧೈರ್ಯ ತೋರಿದರೆ ನಮ್ಮ ಸಹಾಯ ಸಹಕಾರ ನಿಮಗಿದೆ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಬೇರೆ ರಾಜ್ಯಕ್ಕಿಂತ ಒಂದು ಹೆಜ್ಜೆ ಮುಂದಿದ್ದೇವೆ. ಎಂದು ಹೇಳಿ. ಕೇಂದ್ರ ಸರ್ಕಾರದ ಸಾಲ ಮನ್ನಾ ಮಾಡುವ ವಿಧಾನದಲ್ಲಿ ನನ್ನ ಲೆಕ್ಕದಂತೆ ನಿಮಗೆ ೩೦ ಕೋಟಿಗಿಂತ ಜಾಸ್ತಿ ಸಿಗುವುದಿಲ್ಲ. ಉಳಿದ ರೈತರ ಗತಿಯೇನು ? ಆದ್ದರಿಂದ ಧೈರ್ಯ ಮಾಡಿ ಸಾಲ ವಜಾ ಮಾಡುತ್ತೇವೆಂದು ಹೇಳಿ. ಇದರಿಂದ ನಿಮ ಸಾಮ್ರಾಜ್ಯ ಏನೋ ಹೋಗುವುದಿಲ್ಲ. ಜನತಂತ್ರದ ಮೂಲ ಉದ್ದೇಶ ಬಹು ಜನರಿಗೆ ತೃಪ್ತಿ ಆಗುವುದಾದರೆ ಬೇರೆ ಜನರು ತ್ಯಾಗಕ್ಕೆ ಸಿದ್ಧವಾಗಬೇಕು. ಯಾವ್ಯಾವ ಮೂಲಗಳಿಂದ ಇದನ್ನು ಕ್ರೋಢೀಕರಿಸಬಹುದೋ ಅದನ್ನು ಒಟ್ಟಿಗೇ ಕೂತು ಚರ್ಚೆ ಮಾಡೋಣ. ಎಲ್ಲರಿಗೂ ಸಾಲ ವಜಾ ಮಾಡಿ ಎಂದು ಹೇಳುವುದಿಲ್ಲ. ೧೦ ಸಾವಿರ ಎಂದು ಮಿತಿ ಹಾಕಿಕೊಂಡಿದ್ದೀರಲ್ಲ, ಆ ಪ್ರಕಾರ ಸಣ್ಣ ರೈತ, ಅತಿ ಸಣ್ಣ ರೈತ. ಕುಶಲ ಕಾರ್ಮಿಕರ ಮತ್ತು ರೈತ ಕಾರ್ಮಿಕರ ಹೀಗೆ ನಾಲ್ಕು ಪದಗಳನ್ನು ಬಳಸಿದ್ದೀರಿ. ಇಷ್ಟಕಾದರೂ ಒಂದು ಲೆಕ್ಕ ಮಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ೬ ವರ್ಷಗಳ ಲೆಕ್ಕ ಇಟ್ಟುಕೊಂಡಿದ್ದೀರಲ್ಲ, ಏನು ಮಾಡಿದಿರಿ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಕೈಗೇ ಲೆಕ್ಕ ಕೊಟ್ಟಿದ್ದೇವಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ಮೂಲತಃ ಸಾಲ ವಜಾ ಮಾಡುತ್ತೇವೆಂದು ನಾವು ಹೇಳಲಿಲ್ಲ. ಬಡ್ಡಿಯನ್ನು ವಜಾ ಮಾಡುತ್ತೇವೆಂದು ಹೇಳಿದ್ದೆವು. ಹಾಗೆಯೇ ಶೇಕಡಾ ೭ ರಷ್ಟು ಬಡ್ಡಿಯಲ್ಲಿ ಸಾಲ ಕೊಡುತ್ತೇವೆಂದು ಹೇಳಿದ್ದೆವು ಅದನ್ನು ಕೊಟ್ಟಿದ್ದೇವೆ. ಪಿಎಲ್‌ಡಿ ಬ್ಯಾಂಕಿಗೆ ಬಡ್ಡಿ ಕೊಡದೇ ಇದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಏನು ಉತ್ತರ ಹೇಳುತ್ತಾರೆಂದು ಗೊತ್ತು. ಲೆಕ್ಕದಲ್ಲಿ ಪಿಎಲ್‌ಡಿ ಬ್ಯಾಂಕಿಗಾಗಲೀ ಅಪೆಕ್ಸ್ ಬ್ಯಾಂಕಿಗಾಗಲೀ ಈ ಒಂದು ಸಬ್ಸಿಡಿ ಇಂಟರೆಸ್ಟ್ ಏನಿದೆ ಅದರ ಒಂದು ರೂಪಾಯಿ ಅನ್ನು ಕೊಡಬೇಕಾಗಿಲ್ಲ. ಮುಂದೆ ಇದನ್ನು ಏನು ಮಾಡಿದಿರಿ ಎಂದರೆ ನಬಾರ್ಡ್ ಸಂಸ್ಥೆಯನ್ನು ಸಮಾಧಾನ ಮಾಡುವುದಕ್ಕಾಗಿ ಟ್ರೆಜರಿಯಲ್ಲಿ ಹಣ ಇಟ್ಟಿದ್ದೇವೆಂದು ಹೇಳಿದಿರಿ. ಆದರೆ ಅಪೆಕ್ಸ್ ಬ್ಯಾಂಕಾಗಲಿ, ಭೂ ಅಭಿವೃದ್ಧಿ ಬ್ಯಾಂಕಾಗಲೀ ಒಂದು ರೂ ಆಗಲೀ ಟ್ರೆಜರಿಯಲ್ಲಿ ಇಟ್ಟಿದ್ದನ್ನು ತೆಗೆಯುವುದಕ್ಕೆ ಅವಕಾಶವಾಗಿಲ್ಲ. ಇದು ಮುಖ್ಯವಾದಂಥ ಅಂಶ. ಹಿಂದೆ ಕೊಟ್ಟಿಲ್ಲ ಎಂದು ಹೇಳಬೇಡಿ. ಅದನ್ನು ತೆಗೆದುನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೊಟ್ಟಿದ್ದೇವೆ ಎಂದು ಹೇಳುತ್ತಾ ಹೋಗಿ.

ಶ್ರೀ ಡಿ. ಬಿ. ಚಂದ್ರೇಗೌಡ.— ನಾವು ೧೫೦ ಕೋಟಿ ರೂಪಾಯಿಗೂ ಮಿಕ್ಕಿ ಕೊಟ್ಟಿದ್ದೇವೆ. ಅದರಲ್ಲಿ ಭೂ ಅಭಿವೃದ್ಧಿ ಬ್ಯಾಂಕಿಗೆ ಕೊಡಬೇಕಾಗಿರತಕ್ಕಂಥದ್ದು ಎಷ್ಟು? ಅಲ್ಲಿನ ಅಧ್ಯಕ್ಷರು ಏನು ಹೇಳಿದರು ಎಂದರೆ ನೀವು ಐದು ಕೋಟಿ ರೂಪಾಯಿ ಕೊಡಿ. ನಾವು ಮರು ಸಾಲದ ವ್ಯವಸ್ಥೆಯನ್ನು ಮಾಡುತ್ತೇವೆಂದು ನಮಗೆ ಹೇಳಿದರು. ಆಗ ನಾವು ಐದು ಕೋಟಿ ರೂಪಾಯಿ ಕೊಟ್ಟಿದ್ದೇವೆ. ಅದು ಎಲ್ಲಿ ಹೋಯಿತು? ಅದನ್ನು ಟ್ರೆಜರಿಯಲ್ಲಿ ಕೊಟ್ಟಿದ್ದೇವೆ ಎಂದು ಲೆಕ್ಕ ತೋರಿಸಿದ್ದೀರಿ. ನಬಾರ್ಡ್ ಸಂಸ್ಥೆಯವರಿಗೆ ಸಮಾಧಾನ ಮಾಡುವುದಕ್ಕೆ ಆ ರೀತಿ ಹೇಳಿದ್ದೀರಿ. ಅಂದರೆ ಭೂ ಅಭಿವೃದ್ಧಿ ಬ್ಯಾಂಕ್‌ನವರು ಹಣವನ್ನು ಡ್ರಾ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆದುದರಿಂದಾಗಿ ಇವತ್ತಿ ಒಟ್ಟು ಸಹಕಾರಿ ಸಂಸ್ಥೆಯ ವ್ಯವಹಾರ ಸ್ಥಗಿತವಾಗಿದೆ. ನಮ್ಮ ಅಧಿಕಾರದಲ್ಲಿ ಎಂದೂ ಸಹಕಾರಿ ಕೆಲಸ ನಿಂತಿರಲಿಲ್ಲ.

ಒಬ್ಬ ಮಾನ್ಯ ಸದಸ್ಯರು.— ಸಹಕಾರಿ ಕೆಲಸ ಎಂದೂ ನಡೆಯಲೇ ಇಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.— ತಾವು ಹೊಸದಾಗಿ ಬಂದಿದ್ದೀರಿ. ಪೂರಾ ತಿಳಿದುಕೊಂಡು ಮಾತನಾಡಿ. ಲಘುವಾಗಿ ಶಾಸನ ಸಭೆಯಲ್ಲಿ ಏನೂ ನಡೆಯಲೇ ಇಲ್ಲ ಎಂದು ಹೇಳುವುದು ಸುಲಭ. ಆದರೆ ಅದನ್ನು ಜೀರ್ಣಿಸಿಕೊಳ್ಳುವುದು ಕಷ್ಟ.

ಶ್ರೀ ಎಂ. ರಾಮಪ್ಪ — ನೀವು ಕೂಡಾ ಅನೇಕ ವಿಚಾರಗಳನ್ನು ಹೇಳುತ್ತಿದ್ದೀರಿ. ಜೀರ್ಣ ಮಾಡಿಕೊಳ್ಳಬೇಕಾದರೆ ಕಷ್ಟ ಇದೆ. ಆದ್ದರಿಂದ ಹುಷಾರಾಗಿ ಮಾತನಾಡಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಇನ್ನು ಉಳಿದ ದೀರ್ಘವಾದಂಥ ಫಿಗರ್ಸ್‌ನ್ನು split ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಸಹಕಾರಿ ಸಂಸ್ಥೆಯಲ್ಲಿ ಸಾಕಾದಷ್ಟು ಕಾಲ ದುಡಿದು ಅದನ್ನು ಪೂರ್ಣವಾಗಿ ಅರಗಿಸಿಕೊಂಡಿರತಕ್ಕಂಥ ಮಾನ್ಯ ಹಿರಿಯ ಶಾಸಕರು ಹಾಗೂ ಮಂತ್ರಿಗಳಾಗಿದ್ದಂಥ ದೇಶಪಾಂಡೆಯವರು ಈ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ನನ್ನ ಸಲಹೆಯನ್ನು ಹೇಳಿದೆ. ನನ್ನ ಸಲಹೆ ಏನು ಹೇಳಿದೆ ಎಂದರೆ ಕನಿಷ್ಟ ಈ ಬಗ್ಗೆ ಒಂದು ಲೆಕ್ಕವನ್ನಾದರೂ ಮಾಡಿಸಿ. ಆ ಲೆಕ್ಕ ಬರುವವರಿಗೆ ನೀವು ವಸೂಲಾತಿ ಕ್ರಮವನ್ನು ಏನು ಮಾಡುತ್ತಿದ್ದೀರಿ ಆ ಲೆಕ್ಕವನ್ನು ಕೇಂದ್ರ ಸರ್ಕಾರದವರು ಕೊಟ್ಟರೆ ಅದನ್ನು ನಾವು ತುಂಬಿಸಿಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನಾದರೂ ರೈತರಿಗೆ ಕೊಡಿ. ಜೊತೆಗೆ ಕೇಂದ್ರ ಸರ್ಕಾರದಿಂದ ತುಂಬಿಸಿಕೊಂಡ ಹಣಕ್ಕೆ ಸಮಾನವಾದ ಮೊತ್ತವನ್ನು ತುಂಬಿಸಿ ಅವರು ಹತ್ತು ಜನರಿಗೆ ಕೊಟ್ಟರೆ ನಾವು ೨೦ ಜನರಿಗೆ ಕೊಡುತ್ತೇವೆ ಎಂದು ಕನಿಷ್ಟ ಇಷ್ಟನ್ನಾದರೂ ನೀವು ಹೇಳಬೇಡವೇ? ಅದು ಬಿಟ್ಟು ಕೇಂದ್ರ ಸರ್ಕಾರ ಕೇಂದ್ರ ಸರ್ಕಾರ ಎಂದು ಎತ್ತಿ ಹಾಕಿಬಿಟ್ಟರೆ ಹೇಗೆ? ತಮ್ಮ ನಿಲುವನ್ನು ಸ್ಪಷ್ಟಪಡಿಸಿ ಎಂದು ಕೇಳುತ್ತೇನೆ. ಇವತ್ತು ಅಥವಾ ನಾಳೆಯೋ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ಎಂದು ಕೇಳಿದ್ದೇನೆ. ನಾನು ಅವರಿಂದ ಸಹಕಾರಿ ಸಂಸ್ಥೆಯ ಸ್ಥಗಿತತೆಯನ್ನು ಸರಿಪಡಿಸಬೇಕೆಂದು ಹೇಳಿ ಅವರು ರೈತರ ಬೆನ್ನೆಲುಬು ಆಗಿ ನಿಲ್ಲಲಿಕ್ಕೆ ಪ್ರಯತ್ನ ಮಾಡುತ್ತಾರೆ, ರೈತರ ಒಟ್ಟು ಸಾಲವನ್ನು ವಜಾ ಮಾಡುತ್ತಾರೆ ಎನ್ನುವ ವಿಶ್ವಾಸದೊಂದಿಗೆ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ್).— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಿ ಪಕ್ಷದ ನಾಯಕರು ಹೇಳಿದಂಥ ವಿಚಾರವನ್ನು ಸಮರ್ಥಿಸಿ ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಿಜವಾಗಿ ಬಹಳ ಆಶ್ಚರ್ಯವಾಗುತ್ತಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಯವರು ರೈತ ಕುಟುಂಬದಲ್ಲಿ ಹುಟ್ಟಿ ಅಧಿಕಾರಕ್ಕೆ ಬಂದು ಇವತ್ತು ಎರಡು ತಿಂಗಳು ಕೂಡಾ ಆಗಿಲ್ಲ, ಈಗಾಗಲೇ ಎರಡು ದೊಡ್ಡ ಗದಾ ಪ್ರಹಾರವನ್ನು ರೈತರ ಮೇಲೆ ಮಾಡಿದ್ದಾರೆ. ಮತ್ತು ಈ ದೇಶದ ಜನತೆಗೆ, ಕನ್ನಡ ನಾಡಿನ ಜನತೆಗೆ ಸ್ಪಷ್ಟವಾಗಿ ನಾನು ರೈತರ ಪ್ರತಿನಿಧಿ ಅಲ್ಲ ಎಂದು ಹೇಳಿದ್ದಾರೆ. ಇವರ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆ ಎಂದರೆ ಸಾಲವನ್ನು ಮನ್ನಾ ಮಾಡಿ ಎಂದು ವಿನಂತಿಸಿಕೊಳ್ಳುತ್ತೇನೆ ಎಂದು ಈ ಬಗ್ಗೆ ಪ್ರಧಾನಿಗೆ ಬರೆದಿದ್ದಾರೆ ನಿಜ. ಅವರು ಬಹಳ ಜಾಣರು. ಆದರೆ ಅರ್ಜಿ ಹಾಕುತ್ತೇವೆ ಎಂದರೆ ಮತ್ತು ಅರ್ಜಿಯನ್ನು ಹಾಕಬೇಕಾದರೆ ಒಂದು ನಿರ್ಣಯಕ್ಕೆ ಬಂದಿದ್ದಾರೆ. ಏನೆಂದರೆ ಸಾಲವನ್ನು ಮನ್ನಾ ಮಾಡಬೇಕು ಎಂದು. ಸಾಲವನ್ನು ಮನ್ನಾ ಮಾಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು - ಅರ್ಜಿಯನ್ನು ಹಾಕುವುದಕ್ಕೆ ಒಪ್ಪಿಕೊಂಡಿದ್ದು. ಆದರೆ ಈಗ ಏನಾಗಿದೆ ಎಂದರೆ ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹಾಕಿ ಕೇಂದ್ರ ಸರ್ಕಾರ ಸಾಲವನ್ನು ವಜಾ ಮಾಡಲಿ ಎಂದು ಹೇಳಿ ಇವತ್ತು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ, ಇದು ಸರಿಯಲ್ಲ. ಇದು ಒಂದು ರೈತ ವಿರೋಧಿ ಕ್ರಮವೆಂದು ನಾನು ಬಹಳ ವಿನಯದಿಂದ ಹೇಳುತ್ತಿದ್ದೇನೆ. ನಮ್ಮ ಸರ್ಕಾರ ಇದ್ದಾಗ ನಾವು ಏನು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಮಾತು ಕೊಟ್ಟಿದ್ದೇವೆ, ಅದನ್ನು ಈಡೇರಿಸಿದ್ದೇವೆ. ಬಡ್ಡಿ ಮನ್ನಾ ಮಾಡಿರಬಹುದು. ಒಂದು ವರ್ಷ ಇಡೀ ಬಡ್ಡಿ ಮನ್ನಾ ಮಾಡಿರಬಹುದು ಮತ್ತು ಕೆಲವು ಸಾಲ ಮನ್ನಾ ಮಾಡಿದ್ದೇವೆ. ತಕಾವಿ ಸಾಲ ಮನ್ನಾ ಮಾಡಿದ್ದೇವೆ. ಅದೇ ಪ್ರಕಾರ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿದ್ದ ರೈತರ ಸಾಲಗಳನ್ನು ಮನ್ನಾ ಮಾಡಿದ್ದೇವೆ. ಇಷ್ಟೇ ಅಲ್ಲ, ರೈತರಿಗೆ ಸುಲಭ ದರದಲ್ಲಿ ಅಂದರೆ ಸಮಯಕ್ಕೆ ಸರಿಯಾಗಿ ಸಾಲ ಮರು ಪಾವತಿ ಮಾಡಿದರೆ ಶೇಕಡಾ ೭ ರೂಪಾಯಿ ಬಡ್ಡಿಯಂತೆ ಸಾಲ ಕೊಟ್ಟಿದ್ದೇವೆ. ಇವೊತ್ತು ನೀವು ಸಾಲ ಮನ್ನಾ ಮಾಡುವುದಿಲ್ಲ. ಮತ್ತೊಂದು ಹೆಜ್ಜೆ ಮುಂದೆ ಹೋಗಿದ್ದೀರಿ. ೭ ರೂಪಾಯಿನಂತೆ ಬಡ್ಡಿ ರಿಯಾಯಿತಿ ಸಿಗುತ್ತಿತ್ತಲ್ಲ, ಅದನ್ನು ಹಿಂದೆ ಕೊಟ್ಟಿದ್ದೀರಿ. ರೆಟ್ರಸ್ಪೆಕ್ಟೀವ್ ಎಫೆಕ್ಟ್‌ನಿಂದ ಕೊಟ್ಟಿದ್ದೀರಿ. ಮಾರ್ಚ್ ಏಪ್ರಿಲ್ ೧ರಿಂದ ಕೊಟ್ಟಿದ್ದೀರಿ. ಈ ಆಜ್ಞೆ ಪ್ರಕಾರ ಯಾವ ರೈತ ಸರಿ ಸಮಯದಲ್ಲಿ ಸಾಲ ಮರು ಪಾವತಿ ಮಾಡಿದ್ದಾನೆ, ಆ ರೈತ ಪುನಃ ೫ ಪರ್ಸೆಂಟ್ ಡಿಫರೆನ್ಸ್ ಬಡ್ಡಿ ತುಂಬಿ ಕೊಡಬೇಕು. ಇವೊತ್ತು ಯಾವ ಪ್ರಕಾರದ ನೀತಿಯನ್ನು ರೈತರ ಪರವಾಗಿ ಸರ್ಕಾರ ಅನುಸರಿಸುತ್ತಿದೆ ಎಂಬುದನ್ನು ಅಲ್ಲಿ ಕುಳಿತಿರುವ ಸದಸ್ಯರು ವಿಚಾರ ಮಾಡಬೇಕು.

ಯಾಕೆಂದರೆ ರೈತರ ಸಮಸ್ಯೆ ಬಂದಾಗ ನಾವು ಎಲ್ಲರೂ ಹೇಳುತ್ತೇವೆ. ರೈತರು ದೇಶದ ಬೆನ್ನೆಲುಬು. ನಮ್ಮ ಪಕ್ಷ ರೈತರ ಪಕ್ಷ ಎಂದು ಹೇಳುತ್ತೇವೆ. ಆದರೆ ಅದು ಕೇವಲ ನಿಮ್ಮ ಪಕ್ಷ ಅಥವಾ ನಮ್ಮ ಪಕ್ಷಕ್ಕೆ ಸೀಮಿತವಾದ ಪ್ರಶ್ನೆ ಅಲ್ಲ. ಇದರ ಬಗ್ಗೆ ಎಲ್ಲರೂ ವಿಚಾರ ಮಾಡಬೇಕಾಗಿದೆ. ಇವೊತ್ತು ಕೈಗಾರಿಕೆ ಶುರು ಮಾಡಲಿಕ್ಕೆ ಸಾಕಷ್ಟು ಸಬ್ಸಿಡಿ ಕೊಡುತ್ತೇವೆ, ಡೆವಲಪ್‌ಮೆಂಟ್ ಲೋನ್ ಕೊಡುತ್ತೇವೆ, ಕೈಗಾರಿಕೆಗಳು ಅನಾರೋಗ್ಯ ಆದಾಗ ಏನು ಮಾಡುತ್ತೇವೆ? ಸಾಕಷ್ಟು ಹೊಸ ಆಸ್ಪೆಕ್ಟ್‌ನಿಂದ ಸಾಲ ಕೊಡುತ್ತೇವೆ ಹಾಗಾದರೆ ರೈತರಿಗೆ ಸಾಲ ಮನ್ನಾ ಮಾಡಬೇಕಾದರೆ ಏನು ತೊಂದರೆ. ಇದರ ಬಗ್ಗೆ ಏನು ಸಮಸ್ಯೆ ನಿರ್ಮಾಣ ಆಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಯದಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಅವರು ರೈತರ ಸಾಲ ಮನ್ನಾ ಮಾಡುವುದಿಲ್ಲ ಎಂದು ಏನು ನಿರ್ಣಯ ತೆಗೆದುಕೊಂಡಿದ್ದಾರೆ, ಅದು ಸರಿಯಿಲ್ಲ, ಅದನ್ನು ಪುನರ್ ಪರಿಶೀಲನೆ ಮಾಡಬೇಕು. ಯಾಕೆಂದರೆ ಚುನಾವಣೆ ಸಮಯದಲ್ಲಿ ತಾವು ಪಕ್ಷದ ಅಧ್ಯಕ್ಷರಾಗಿದ್ದವರು. ತಾವು ಚುನಾವಣಾ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ತಮ್ಮ ಪಕ್ಷದ ಹಲವಾರು ಮುಖಂಡರುಗಳು ಕೂಡ ಇದನ್ನೇ ಹೇಳಿದ್ದಾರೆ. ತಾವು ಚುನಾವಣಾ ಪ್ರಚಾರಕ್ಕೆ ಹೋದಾಗ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದೀರಿ. ನೀವು ಹೇಳಲಿಲ್ಲ ಎಂದರೆ ಬಿಡಿ. ನಿಮ್ಮ ಪತ್ರಿಕಾ ಸ್ಟೇಟ್‌ಮೆಂಟ್ ಪ್ರಕಾರ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಹೇಳಿದ ಪತ್ರಿಕಾ ಹೇಳಿಕೆಗಳು, ಚುನಾವಣಾ ಸಮಯದಲ್ಲಿ ನೀಡಿದಂತಹ ಹೇಳಿಕೆಗಳು ಅವರು ನೀಡಿದ ಭರವಸೆಗಳು ಇತ್ಯಾದಿಗಳನ್ನು ನಿಮ್ಮ ಕಡೆ ಕಳಿಸುತ್ತೇನೆ. ನೀವು ಅಧಿಕಾರಕ್ಕೆ ಬಂದರೆ ಸಾಲ ಮನ್ನಾ ಮಾಡುತ್ತೇವೆಂದು ಜನರಿಗೆ ಹೇಳಿ ಇವೊತ್ತು ೧೭೭ ಜನ ಸದಸ್ಯರು ಆರಿಸಿ ಬಂದಿದ್ದೀರಿ. ಈ ಸದನದ ಇತಿಹಾಸದಲ್ಲಿಯೇ ಇಷ್ಟೊಂದು ಬಹುಮತ ಯಾವ ಪಕ್ಷಕ್ಕೂ ನಮ್ಮ ಕನ್ನಡ ನಾಡಿನ ಜನತೆ ಯಾವಾಗಲೂ ಕೊಟ್ಟಿಲ್ಲ. ಇದರಿಂದ ನಿಮಗೆ ಕಷ್ಟವಾಗಿದೆ. ನಮಗೆ ಸಂತೋಷವಾಗಿದೆ. ಆದರೆ ಇವೊತ್ತು ಈ ಒಂದು ಬಹುಮತವನ್ನು ಸರಿಯಾಗಿ ಉಪಯೋಗ ಮಾಡಿ ಎಂದು ಹೇಳುತ್ತಿದ್ದೇನೆ. ಇವೊತ್ತು ಆರ್ಥಿಕ ಪರಿಸ್ಥಿತಿ ಬಹಳ ಚೆನ್ನಾಗಿ ಇದೆ. ನಮ್ಮ ಸರ್ಕಾರ ಇದ್ದಾಗ ಸರಿಯಾಗಿ ಇದ್ದಿಲ್ಲ. ರಾಷ್ಟ್ರಪತಿ ಆಡಳಿತದಲ್ಲಿ ಬಹಳ ಸುಧಾರಣೆ ಆಗಿದೆ ಎಂದು ಬಹಳಷ್ಟು ಪತ್ರಿಕಾ ಹೇಳಿಕೆಗಳನ್ನು ನಾವು ಆ ಸಮಯದಲ್ಲಿ ಕೇಳಿದ್ದೇವೆ, ಹಾಗಾದರೆ ಇವೊತ್ತು ಹಣ ಬಿಡುಗಡೆ ಮಾಡಲಿಕ್ಕೆ ಏನು ತೊಂದರೆ ಇದೆ. ನಮ್ಮ ಕಾಲದಲ್ಲಿ ತೊಂದರೆ ಇತ್ತು. ನಾವು ಬಿಡುಗಡೆ ಮಾಡಲಿಲ್ಲ. These are facts I cannot deny. ಆದರೆ ಐದು ವರ್ಷಗಳು ನಮ್ಮ ರಾಜ್ಯದಲ್ಲಿ ಸತತ ಭೀಕರ ಬರಗಾಲ ಇತ್ತು. ಕೈಗಾರಿಕೆಗಳಿಂದಾಗಲೀ ಅಥವ ಕೃಷಿಯಿಂದ ಬರುವಂತಹ ಉತ್ಪಾದನೆ ಆಗಲಿ ಕಡಿಮೆ ಆಗಿ ರಾಜ್ಯದ ಹಣಕಾಸಿನ ಪರಿಸ್ಥಿತಿ ಮೇಲೆ ಸಾಕಷ್ಟು ಪರಿಣಾಮ ಬೀರಿತ್ತು. ನಾವು ಅಧಿಕಾರಕ್ಕೆ ಬಂದಾಗ ನೌಕರರ ಸಂಬಳ ೩೫೦ ಕೋಟಿ ರೂಪಾಯಿ ಇದ್ದುದು, ನಾವು ಅಧಿಕಾರ ಬಿಡುವ ವೇಳೆಗೆ ೧೦೫೦ ಕೋಟಿ ರೂಪಾಯಿ ಆಗಿತ್ತು. ನಾವು ಸಾಕಷ್ಟು ತೊಂದರೆಯಲ್ಲಿ ಇದ್ದರೂ ಸಹ ರೈತರಿಗೆ ರಿಯಾಯಿತಿ ಕೊಟ್ಟಿದ್ದೇವೆ. ಸಾಕಷ್ಟು ಹಣವನ್ನು ಸಮಯದಲ್ಲಿ ಬಿಡುಗಡೆ ಮಾಡಿದ್ದೇವೆ. ರಾಷ್ಟ್ರಪತಿ ಆಡಳಿತದಲ್ಲಿ ಹಣದ ಪರಿಸ್ಥಿತಿ ಸುಧಾರಣೆ ಆಗಿದೆ. ಹಾಗಾದರೆ ಹಣವನ್ನು ಯಾಕೆ ಬಿಡುಗಡೆ ಮಾಡಲಿಲ್ಲ. ಬಿಡುಗಡೆ ಮಾಡಲಿಕ್ಕೆ ಹಣ ಇದೆಯೋ ಅಥವಾ ಇದ್ದರೂ ಬಿಡುಗಡೆ ಮಾಡಲಿಲ್ಲವೋ? ಇದರಿಂದ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲ ಎಂದು ಅರ್ಥವಾಗುತ್ತದೆ. ಇವೊತ್ತು ನೀವು ಅಪೆಕ್ಸ್ ಬ್ಯಾಂಕ್‌ಗೆ ಮತ್ತು ಲ್ಯಾಂಡ್ ಬ್ಯಾಂಕ್‌ಗೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ ಬಿಡುಗಡೆ ಮಾಡಿದ್ದು ಟ್ರೆಜರಿಯಲ್ಲಿದೆ. ಅಪೆಕ್ಸ್ ಬ್ಯಾಂಕ್‌ಗೆ ಹಣ ಬಿಡುಗಡೆ ಆಗಿಲ್ಲ. ಅಪೆಕ್ಸ್ ಬ್ಯಾಂಕ್‌ಗೆ ಇನ್ನೂ ೨೮ ಕೋಟಿ ರೂಪಾಯಿ ಹಣ ಬಿಡುಗಡೆ ಆಗಬೇಕು. ಮೊನ್ನೆ ೪-೫ ದಿವಸದ ಹಿಂದೆ ಲ್ಯಾಂಡ್ ಬ್ಯಾಂಕ್‌ಗೆ ೧೫ ಕೋಟಿ ೮೧ ಲಕ್ಷ ಬಿಡುಗಡೆ ಆಗಿದೆ ಎಂದು ತಿಳಿದುಕೊಂಡಿದ್ದೇವೆ. ಅದು ಟ್ರೆಜರಿಯಲ್ಲಿದೆ. ಇದಕ್ಕೂ ಮುಂಚೆ ಬಿಡುಗಡೆ ಆದ ಹಣ ಕೂಡ ಟ್ರೆಜರಿಯಲ್ಲಿದೆ. ಇವೊತ್ತು ಲ್ಯಾಂಡ್ ಬ್ಯಾಂಕಿನಿಂದ ಸಾಧಾರಣ ೨೮ರಿಂದ ೩೦ ಕೋಟಿ ರೂಪಾಯಿ ಟ್ರೆಜರಿಯಲ್ಲಿದೆ. ಲ್ಯಾಂಡ್ ಬ್ಯಾಂಕ್‌ನಿಂದ ಆದೇಶ ಇದೆ. ಏನೆಂದರೆ ಹಣವನ್ನು ಕೈ ಹಚ್ಚಬಾರದು ಎಂದು.

ಇದರ ಪರಿಣಾಮ ಏನಾಗಿದೆಯೆಂದರೆ, ಅಪೆಕ್ಸ್ ಬ್ಯಾಂಕಿನಿಂದ ನಬಾರ್ಡ್‌ಗೆ ರೀಫೈನಾನ್ಸ್ ಬರುತ್ತಾ ಇಲ್ಲ, ಇದರಿಂದ ರೈತರಿಗೆ ಸಾಲ ಸಿಗುತ್ತಾ ಇಲ್ಲ. ಲ್ಯಾಂಡ್ ಬ್ಯಾಂಕ್‌ನಿಂದ ೧೫ನೇ ಜನವರಿಯಿಂದ ಟೋಟಲ್ ಫೈನಾನ್ಸ್ ಬಂದ್ ಆಗಿದೆ. ಲ್ಯಾಂಡ್ ಬ್ಯಾಂಕ್‌ನವರು ನೇರವಾಗಿ ಸಾಲ ಬಂದ್ ಮಾಡಿರಿ ಎಂದು ಲಿಖಿತ ಮೂಲಕ ತಿಳಿಸಿಲ್ಲ, ಆದರೆ ಓರಲ್ ಕನ್‌ಸ್ಟ್ರಕ್ಷನ್ಸ್ ಹೋಗಿದೆ. ಪ್ರತಿಯೊಂದು ಜಿಲ್ಲೆಯ ಶಾಖೆಗೆ ಆಸ್ ಪರ್ ದಿ ಇನ್‌ಸ್ಟ್ರಕ್ಷನ್ಸ್ ಆಫ್ ದಿ ಗವರ್ನಮೆಂಟ್ ಓರಲ್ ಇನ್‌ಸ್ಟ್ರಕ್ಷನ್ಸ್ ಹೋಗಿದೆ. ಏನೂ ಸಾಲ ಮಂಜೂರು ಮಾಡಬೇಡಿ, ಹಣ ಇಲ್ಲ ಎಂದು ಇನ್‌ಸ್ಟ್ರಕ್ಷನ್ಸ್

ಹೋಗಿದೆ. ನಾನು ಸುಮ್ಮನೆ ಮಾತನಾಡುವವನಲ್ಲ, ನಿಜವಾದ ಪರಿಸ್ಥಿತಿಯನ್ನು ಹೇಳುತ್ತಾ ಇದ್ದೇನೆ. ಆದ್ದರಿಂದ ಇವತ್ತು ಟ್ರೆಜರಿಯಲ್ಲಿ ಏನು ಹಣ ಇದೆ, ಆ ಹಣವನ್ನು ದಯಮಾಡಿ ತಾವು ಲ್ಯಾಂಡ್ ಬ್ಯಾಂಕ್‌ಗೆ ಕೊಟ್ಟರೆ ಒಳ್ಳೆಯದು. ಆ ಹಣ ಕೇವಲ ರಾಜ್ಯಮಟ್ಟದಲ್ಲಿದ್ದ ಕೃಷಿ ಗ್ರಾಮೀಣ ಬ್ಯಾಂಕ್‌ನ ಹಣವಲ್ಲ, ರಾಜ್ಯದಲ್ಲಿ ೧೭೬ ಪಿಎಲ್‌ಡಿ ಬ್ಯಾಂಕುಗಳು ಏನಿವೆ ಆ ಪಿಎಲ್‌ಡಿ ಬ್ಯಾಂಕ್‌ಗಳ ಹಣ ಅದು. ಆ ಹಣ ಅಲ್ಲಿ ಜಮಾ ಆದರೆ ಲ್ಯಾಂಡ್ ಬ್ಯಾಂಕ್‌ಗೆ ಹಣ ಸಿಕ್ಕರೆ ಮುಂದಿನ ಕೆಲಸ ಮಾಡಲಿಕ್ಕೆ ಸಾಧ್ಯವಾಗಬಹುದು. ರೈತರಿಗೆ ಸಹಾಯ ಮಾಡಲೂ ಸಾಧ್ಯವಾಗಬಹುದು. ಅಷ್ಟೇ ಅಲ್ಲ, ಇವತ್ತು ಡಿಬೆಂಚರ್ ಫ್ಲೋಟೇಷನ್ ಬಂದ್ ಆಗಿದೆ. ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಹೇಳಿದ್ದೆ. ಮುಖ್ಯಮಂತ್ರಿಗಳೇ, ನಬಾರ್ಡ್ ಸಂಸ್ಥೆ ಸರ್ಕಾರದವರು ಅಪೆಕ್ಸ್ ಬ್ಯಾಂಕ್ ಲ್ಯಾಂಡ್ ಬ್ಯಾಂಕ್‌ಗೆ ಅಂಡರ್ ಟೇಕಿಂಗ್ ಕೊಟ್ಟಿದ್ದಾರೆ, ದಿನಾಂಕ ೩೧-೧೨-೧೯೯೮ರ ಒಳಗಾಗಿ ಸಬ್ಸಿಡಿ ರಿಲೀಸ್ ಆಗಲಿಲ್ಲ ಅಂದರೆ ರೀಫೈನಾನ್ಸ್ ಸ್ಟಾಪ್ ಆಗುತ್ತದೆ. ದಯಮಾಡಿ ಹಣ ಬಿಡುಗಡೆ ಮಾಡಿ, ಹಣದ ತೊಂದರೆಯಿದ್ದರೆ ನಬಾರ್ಡ್ ಸಂಸ್ಥೆ ಜೊತೆಯಲ್ಲಿ ಮಾತನಾಡಿ ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳಿ ಎಂದು ನಾನು ಹೇಳಿದಾಗ ಆ ಸಮಯದಲ್ಲಿ ಯಾರು ಬೆಲೆ ಕೊಟ್ಟಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಇವತ್ತು ಟೋಟಲ್ ಡಿಬೆಂಚರ್ ಫ್ಲೋಟೇಷನ್ ಬಂದ್ ಆಗಿದೆ ಎಂದು ಹೇಳಿದ್ದೆ. ಮಾನ್ಯ ಅರ್ಥ ಸಚಿವರು ಬಂದರು, ಅವರು ನಮಗೆ ಉತ್ತರ ಕೊಡಬೇಕು. ಏಕೆಂದರೆ, ಲ್ಯಾಂಡ್ ಬ್ಯಾಂಕ್‌ನವರು ಅವರಿಗೂ ಅಪ್ರೋಚ್ ಆಗಿದ್ದರು. ಬಡ್ಜೆಟ್‌ನಲ್ಲಿ ೨ ಕೋಟಿ ೩೦ ಲಕ್ಷ ರೂಪಾಯಿ ಪ್ರಾವಿಜನ್ ಇತ್ತು. ಹೋದವರ್ಷ ನಾವು ಅಧಿಕಾರದಲ್ಲಿದ್ದಾಗ ಲ್ಯಾಂಡ್ ಬ್ಯಾಂಕ್‌ನ ಪ್ರೋಗ್ರಾಮ್ಸ್ the provision was for Rs. 64 crore but because of Government's help, they have advanced Rs.1.0 crore It was a record. ಆದರೆ ಈ ವರ್ಷದ ಪರಿಸ್ಥಿತಿ ಏನಾಗಿದೆ? ಲ್ಯಾಂಡ್ ಬ್ಯಾಂಕ್‌ನ ೨೦-೨೨ ಕೋಟಿ ಇವತ್ತಿನವರೆಗೆ ಲೆಂಡಿಂಗ್ ಆಗಿಲ್ಲ. ಡಿಬೆಂಚರ್ ಫ್ಲೋಟ್ ಆಗುತ್ತಾ ಇಲ್ಲ. ಏಕೆಂದರೆ ಗವರ್ನಮೆಂಟ್ ಕಾಂಟ್ರಿಬ್ಯೂಷನ್ ಹೋಗಿಲ್ಲ ಸರ್ಕಾರದಿಂದ ಕಾಂಟ್ರಿಬ್ಯೂಷನ್ ಹೋಗಬೇಕು, ಸರ್ಕಾರ ಕಾಂಟ್ರಿಬ್ಯೂಷನ್ ಮಾಡಬೇಕು. ಬಡ್ಜೆಟ್‌ನಲ್ಲಿ ಪ್ರೊವಿಜನ್ ಎಷ್ಟು ಇತ್ತು ಆ ಹಣವನ್ನು ಕೊಟ್ಟಿದ್ದೇವೆ, ಹೆಚ್ಚಿನ ಹಣ ಕೊಡಲಿಕ್ಕೆ ನಮ್ಮಲ್ಲಿ ಹಣ ಇಲ್ಲ ಎಂದು ಸರ್ಕಾರದವರು ಹೇಳುತ್ತಾ ಇದ್ದಾರೆ. ಆದುದರಿಂದ ದಯಮಾಡಿ ಕೂಡಲೇ ಡಿಬೆಂಚರ್ ಫ್ಲೋಟ್ ಆಗಬೇಕು, ಡಿಬೆಂಚರ್ ಫ್ಲೋಟ್ ಆಗಿಲ್ಲ ಅಂದರೆ ರೈತರಿಗೆ ಸಾಲ ಸಿಗುವುದಿಲ್ಲ, ಇಡೀ ರಾಜ್ಯದಲ್ಲಿ ರಾಜ್ಯದ ಇತಿಹಾಸದಲ್ಲಿ, ಸಹಕಾರ ಸಂಘಗಳ ಇತಿಹಾಸದಲ್ಲಿ ಮೊದಲನೆ ಬಾರಿ ಇವತ್ತು ಟೋಟಲ್ loaning has come to a standstill...ನಾವು ಅಧಿಕಾರದಲ್ಲಿದ್ದಾಗಲೂ ನಬಾರ್ಡ್ ಸಂಸ್ಥೆಗೆ ತೊಂದರೆಯಿತ್ತು. ಯಾವಾಗಲೂ ನಬಾರ್ಡ್ ಸಂಸ್ಥೆಯವರು ರೈತರಿಗೆ ಸಾಲ ಕೊಡಿರಿ ಎಂದು ಒಪ್ಪಿಕೊಂಡಿಲ್ಲ ಯಾವಾಗಲೂ ನಬಾರ್ಡ್ ಸಂಸ್ಥೆಯವರು ರೈತರಿಗೆ ರಿಯಾಯಿತಿ ಕೊಡಿರಿ ಎಂದು ಒಪ್ಪಿಕೊಂಡಿಲ್ಲ. ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಮಾನ್ಯ ಶರದ್‌ಪವಾರವರು ಸಾಕಷ್ಟು ಪ್ರಯತ್ನ ಮಾಡಿದರು. ಆದರೆ ಅವರಿಗೂ ಸಹಕರಿಸಲಿಲ್ಲ. ನಿಮ್ಮ ಪಕ್ಷದ ಸರ್ಕಾರ ಕೇಂದ್ರದಲ್ಲಿದ್ದಾಗಲೂ ಇದೇ ನಬಾರ್ಡ್‌ನ ಆಟಿಟ್ಯೂಡ್ ಆಗಿತ್ತು. ಇವತ್ತು ಇದಕ್ಕೆ ನಬಾರ್ಡ್ ಅಡ್ಡಿ ಬರುತ್ತಾ ಇದೆ. ರೈತರಿಗೆ ೭ ರೂಪಾಯಿಯಂತೆ ಬಡ್ಡಿಗೆ ಕೊಟ್ಟರೆ ನಬಾರ್ಡ್‌ನವರು ರೀಫೈನಾನ್ಸ್ ಸ್ಟಾಪ್ ಮಾಡುತ್ತಾರೆ. ಈ ಒಂದು ಕಾರಣ ಕೊಟ್ಟು ರೈತರಿಗೆ ೭ ರೂಪಾಯಿ ಬಡ್ಡಿ ಸಾಲದ ರಿಯಾಯಿತಿ ಸವಲತ್ತು ಕೊಟ್ಟಿದ್ದನ್ನು ವಾಪಸ್ ತೆಗೆದುಕೊಂಡಿದ್ದೀರಿ ಇದು ನಿಜವಾಗಲೂ ರೈತರ ಮೇಲೆ ಗದಾಪ್ರಹಾರ ಮಾಡಿದ ಹಾಗೆ ಆಗಿದೆ. ಇವತ್ತಿನ ದಿವಸ ಕೈಗಾರಿಕೆಗೆ ರಿಯಾಯಿತಿ ದರದಲ್ಲಿ ಸಾಲ ಕೊಡುತ್ತಾ ಇಲ್ಲವೇ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ ನಾವು ಕನ್ಸೇಷನ್ ರೇಟಿನಲ್ಲಿ ಸಾಲ ಕೊಡುತ್ತಾ ಇಲ್ಲವೇ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗೆ ನಾವು ಸಹಾಯ ಮಾಡುತ್ತಾ ಇಲ್ಲವೇ, ಆದರೆ ರೈತರಿಗೆ ಸಹಾಯ ಮಾಡುವ ಸಮಸ್ಯೆ ಬಂದಾಗ ಈ ಪ್ರಶ್ನೆ ಏಕೆ ಬರುತ್ತದೆ ಎಂದು ನಾನು ವಿನಯದಿಂದ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಇವತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ನಿಮ್ಮ ಸಲಹೆ ಏನು ಎಂದು ಕೇಳಿದರು. ಒಂದು ಕೈಗಾರಿಕೆ ಅನಾರೋಗ್ಯ ಇದ್ದಾಗ ಬ್ಯಾಂಕ್‌ನವರು ಹಣ ಬ್ಲಾಕ್ ಮಾಡುತ್ತಾರೆ, ಲೋನ್ ಬ್ಲಾಕ್ ಮಾಡುತ್ತಾರೆ. ಲೋನ್ ಬ್ಲಾಕ್ ಮಾಡಿ ಅವರ ಮೇಲೆ ಇಂಟರೆಸ್ಟ್ ಚಾರ್ಜ್ ಮಾಡುವುದಿಲ್ಲ ಆ ಕೈಗಾರಿಕೆಗೆ ಫ್ರೆಷ್ ಲೋನ್ ಕೊಡುತ್ತಾರೆ ಟು ರಿವೈವ್ ಇಟ್. ಅದೇ ಪ್ರಕಾರ ಇವತ್ತು ಕೇಂದ್ರ ಸರ್ಕಾರ ನಿರ್ಣಯ ಮಾಡಿದೆ, ಹತ್ತು ಸಾವಿರ ರೂಪಾಯಿವರೆಗಿನ ಸಣ್ಣ ರೈತರ, ಅತಿ ಸಣ್ಣ ರೈತರ, ಅಗ್ರಿಕಲ್ಚರಲ್ ಲೇಬರರ್ಸ್‌ನ, ಕುಶಲ ಕರ್ಮಿಗಳ ಸಾಲವನ್ನು as on ಅಕ್ಟೋಬರ್ ೧೯೯೮ ನಾವು ಮನ್ನಾ ಮಾಡುತ್ತೇವೆ ೨ನೇ ಅಕ್ಟೋಬರ್ ೧೯೯೮ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಸೂಲಾತಿಯನ್ನು ನಿಲ್ಲಿಸುತ್ತೇವೆಂದು ಹೇಳಿದರು. ಅದೇ ದಿನ ಆಜ್ಞೆ ಮಾಡಿ, ಡೆಲ್ಲಿಯಿಂದ ಬಂದು ಮೂರು ದಿವಸದೊಳಗೆ ಆಜ್ಞೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಇದರಿಂದ

ಗೊಂದಲಮಯ ವಾತಾವರಣ ನಿರ್ಮಾಣವಾಗಿದೆ. ಸಾಲ ವಸೂಲಾತಿಯನ್ನು ಬಂದ್ ಮಾಡಿ, ಮತ್ತೆ ವಸೂಲು ಮಾಡುತ್ತಿದ್ದಾರೆ. ನಾನು ಕೇಂದ್ರ ಸರ್ಕಾರದ ಅರ್ಥ ಸಚಿವರನ್ನು ಭೇಟಿ ಮಾಡಿದ್ದೆ. ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದು ನಿಜ, ಅದರಂತೆ ಮಾಡುತ್ತೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಅವರ ಪಕ್ಷದ ಎಲೆಕ್ಷನ್ ಮ್ಯಾನಿಫೆಸ್ಟೋ ಬೈಬಲ್ ಇದ್ದಂತೆ ಎಂದು ಹೇಳಿದ್ದರು. ಕೇಂದ್ರದ ಅರ್ಥ ಸಚಿವರು ನಾವು ಕಮಿಟಿ ಮಾಡಿದ್ದೇವೆ, ಅದರ ಪ್ರಕಾರ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ರಿಕವರಿ ಸ್ಟಾಪ್ ಮಾಡಬೇಕಾಗುತ್ತದೆ. ಇವತ್ತು ಸಣ್ಣ ರೈತರು, ಅತಿ ಸಣ್ಣ ರೈತರು, ಕುಶಲ ಕರ್ಮಿಗಳ ಸಾಲವನ್ನು ಬ್ಲಾಕ್ ಮಾಡಿ, ಹೊಸ ಸಾಲವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು, ಇವತ್ತು ಸಣ್ಣ ರೈತರ ಸಾಲವನ್ನು ದೊಡ್ಡ ಮನಸ್ಸು ಮಾಡಿ ವಜಾ ಮಾಡಿದರೆ, ರೈತರಿಗೆ ಹೊಸ ಸಾಲ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಕೂಡ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದವರು. ಕೊಟ್ಟಂಥ ಸಾಲವನ್ನು ಮರುಪಾವತಿ ಮಾಡದೆ ಹೋದರೆ, ಹೊಸ ಸಾಲ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ರೈತ ಡಿಫಾಲ್ಟರ್ ಆದಾಗ ಹೊಸದಾಗಿ ಸಾಲ ಕೊಡುವುದಕ್ಕೆ ಬರುವುದಿಲ್ಲ. ಕೈಗಾರಿಕೆ ನಡೆಸುವವರು ಡಿಫಾಲ್ಟರ್ ಆದಾಗ ಹೊಸದಾಗಿ ಸಾಲ ಕೊಡುವುದಕ್ಕೆ ಬರುವುದಿಲ್ಲ. ಆದರೆ, ಬ್ಲಾಕ್ ಮಾಡಿದರೆ ಮತ್ತೆ ನಬಾರ್ಡ್‌ನಿಂದ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರ ೧೦,೦೦೦ ರೂ. ಸಾಲ ಮನ್ನಾ ಮಾಡುವುದಕ್ಕೆ ಮುಂದೆ ಬಂದಿದೆ. ಕೇಂದ್ರ ಸರ್ಕಾರದವರು ೧೦,೦೦೦ ರೂ.ವರೆಗಿನ ಸಾಲ ಮನ್ನಾ ಮಾಡಿದರೆ ಎಷ್ಟು ಕೋಟಿ ರೂಪಾಯಿಗಳು ಆಗಬಹುದೆಂದು ನಿಮ್ಮನ್ನು ಕೂಡ ಕೇಳಿಗಬಹುದು. ಸರ್ಕಾರದವರು ನಬಾರ್ಡ್ ಜೊತೆ ಅಪ್ರೋಚ್ ಮಾಡಬೇಕು. ಅದನ್ನು ಬಿಟ್ಟು ಕೇಂದ್ರ ಸರ್ಕಾರದ ಮೇಲೆ ಹಾಕುವುದು ಸರಿಯಲ್ಲ ಈ ವಿಚಾರದಲ್ಲಿ ನಾವು ಸಹಕಾರ ಕೊಡುತ್ತೇವೆಂದು ಹೇಳಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ನಬಾರ್ಡ್ ಜೊತೆ ಚರ್ಚೆ ಮಾಡಿ, ರಿಲ್ಯಾಕ್ಸ್ ತೆಗೆದುಕೊಂಡು ಮತ್ತೆ ರೈತರಿಗೆ ಸಹಾಯ ಮಾಡಬಹುದು. ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಉದ್ದೇಶ ಏನಿತ್ತು ? ರೈತರ ಏಳಿಗೆ ಆಗಬೇಕು. ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಬೇಕು. ಆದರೆ, ಇವತ್ತು ಅದು ಬರೀ ಲಾಭ ಮಾಡುವ ಸಂಸ್ಥೆಯಾಗಿದೆ. ಕಳೆದ ಒಂದೂವರೆ ವರ್ಷದಲ್ಲಿ ಕೈಗಾರಿಕೆಗಳಿಗೆ ಕೊಡತಕ್ಕ ಸಹಾಯವನ್ನು ಕಡಿಮೆ ಮಾಡಿದ್ದಾರೆ. ರೈತರಿಗೆ ಅನುಕೂಲ ಮಾಡಿಕೊಡುವ ವಿಶ್ವಾಸ ಇದೆ. ಈ ಒಂದು ಕೆಲಸವನ್ನು ಮಾಡುವುದಕ್ಕೆ ವಿಲ್ ಬೇಕು. ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರಕ್ಕೆ ರೈತರಿಗೆ ಸಹಾಯ ಮಾಡುವ ವಿಲ್ ಇಲ್ಲವೆಂದು ಹೇಳಬೇಕಾಗಿದೆ. ರೈತರ ಸಾಲ ಮನ್ನಾ ಮಾಡುವುದಕ್ಕೆ ಇಷ್ಟೊಂದು ಚರ್ಚೆ ಏತಕ್ಕೆ ? ನಾವುಗಳೆಲ್ಲ ರೈತರೆ. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪುನರ್‌ಪರಿಶೀಲನೆ ಮಾಡಬೇಕು. ಟ್ರೆಜರಿಯಲ್ಲಿರುವಂಥ ಹಣವನ್ನು ಈ ಕಡೆ ತಿರುಗಿಸಿದರೆ, ನಬಾರ್ಡ್ ಸಂಸ್ಥೆಗೆ ಡಿಬೆಂಚರ್ ರಿಲೀಸ್ ಆದರೆ, ಮತ್ತೆ ರೈತರಿಗ ಸಾಲ ಕೊಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ದೀರ್ಘಾವಧಿ ಸಾಲ ಕೊಡುವ ಸಹಕಾರಿ ಸಂಸ್ಥೆ ಅಂದರೆ ಅಗ್ರಿಕಲ್ಚರಲ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್.

ಆ ಒಂದು ಸಂಸ್ಥೆಯಿಂದ ಸಾಲ ಕೊಡಲಿಕ್ಕೆ ಬರಲಿಲ್ಲ ಅಂದರೆ ಯಾವ ಸಂಸ್ಥೆಯೂ ಕೊಡಲಿಕ್ಕೆ ಸಾಧ್ಯವಿಲ್ಲ. ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ವಿಶ್ವನಾಥ್ ಅವರ ಸ್ಟೇಟ್‌ಮೆಂಟ್ ಕೊಟ್ಟನಂತರ ಅದಕ್ಕೆ ಸಚಿವರು ಯಾರಾದರೂ ಉತ್ತರ ಕೊಡಬಹುದಾಗಿತ್ತು, ಆದರೆ ಅದಕ್ಕೆ ಉತ್ತರ ಫೈನಾನ್ಸ್ ಸೆಕ್ರೆಟರಿಯವರಿಂದ ಕೊಡಿಸಿದಿರಿ ಅಂದರೆ ತಾವು ಯಾವ ಮಟ್ಟಕ್ಕೆ ಹೋದಿರಿ ಎಂಬ ಬಗ್ಗೆ ತಾವೇ ವಿಚಾರ ಮಾಡಬೇಕು. ಒಬ್ಬ ಸೆಕ್ರೆಟರಿ ಉತ್ತರವನ್ನು ಕೊಡತಕ್ಕ ಅವಶ್ಯಕತೆ ಏನಿತ್ತು ? ಫೈನಾನ್ಸ್ ಮಿನಿಸ್ಟರ್ ಅಥವಾ ಕೋ ಅಪರೇಷನ್ ಮಿನಿಸ್ಟರ್ ಉತ್ತರ ಕೊಡಬಹುದಾಗಿತ್ತು. ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ, ಒಬ್ಬ ಫೈನಾನ್ಸ್ ಸೆಕ್ರೆಟರಿಯವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ರಾಜಶೇಖರಮೂರ್ತಿ.—ಮುಖ್ಯ ಮಂತ್ರಿಗಳು ಅದಕ್ಕೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ನಾನು ಏತಕ್ಕೆ ಉತ್ತರ ಕೊಟ್ಟರು ಎಂದು ಕೇಳುತ್ತಿಲ್ಲ. ಇದು ಒಳ್ಳೆಯ ಪ್ರೆಸಿಡೆಂಟ್ ಅಲ್ಲ. ಮತ್ತೊಂದು ವಿಚಾರ ಅಂದರೆ ಹೌಸಿಂಗ್ ಸ್ಕೀಮಿನಲ್ಲಿ ರೈತರಿಗೆ ಸಹಾಯ ಆಗುವ ಮತ್ತೊಂದು ಸ್ಕೀಮ್ ಇದೆ. ಅದು ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟುವ ಸ್ಕೀಮ್. ನ್ಯಾಷನಲ್ ಹೌಸಿಂಗ್ ಸ್ಕೀಮ್‌ನಲ್ಲಿ ತಮ್ಮ ಡೈರೆಕ್ಟರ್ ಕೇಳಿದ್ದಾರೆ. ತಾವು ಹೇಳುತ್ತೀರಿ, ನಿಮ್ಮ ಫೈನಾನ್ಸ್ ಸೆಕ್ರೆಟರಿ ಹೇಳುತ್ತಾರೆ. It is under the consideration of the

Government. You have already rejected the proposal. It has reached the Land Bank. But your officers say... It is under the consideration of the Government ಹೀಗಾಗಿ ರೈತರ ಪ್ರತಿಯೊಂದು ವಿಚಾರ ಬಂದಾಗ ಇವೊತ್ತು ಸರ್ಕಾರದಿಂದ ಗದಾಪ್ರಹಾರವಾಗುತ್ತದೆ. ರೈತರಿಗೆ ಅನ್ಯಾಯವಾಗುತ್ತಿದೆ. ರೈತರ ಶೋಷಣೆಯಾಗುತ್ತಿದೆ. ಆದ್ದರಿಂದ, ಆ ಸಲುವಾಗಿ ನಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ, ಅದನ್ನು ತಮ್ಮ ದೃಷ್ಟಿಯಿಂದ ಕೊಟ್ಟಿದ್ದೇವೆ, ಆ ಸಲುವಾಗಿ ತಾವು ಪುನರ್‌ಪರಿಶೀಲನೆ ಮಾಡಬೇಕು. ಇನ್ನು ಮೂರು ಕೋಟಿ ರೂಪಾಯಿ ಹಣ ರೈತರಿಗೆ ಫೇಡವೇ ಸಬ್ಸಿಡಿ ಹಣ ಬಿಡುಗಡೆಯಾಗಬೇಕಾಗಿದೆ. ಆ ಹಣವನ್ನು ಆದಷ್ಟು ಬೇಗ ಬಿಡುಗಡೆ ಮಾಡಿ ರೈತರಿಗೆ ಸಹಾಯ ಮಾಡಲಿಕ್ಕೆ ಸರ್ಕಾರ ಮುಂದೆ ಬರಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ರೈತರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಇಡೀ ಸದನ ರೈತನ ಬಗ್ಗೆ ಚಿಂತನೆ ಮಾಡತಕ್ಕ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ರೈತರ ಸಾಲ ವಸೂಲಾತಿಯನ್ನು ತಡೆಯಾಜ್ಞೆ ಮುಖಾಂತರ ನಿಲ್ಲಿಸಿದರು. ಆದರೆ ಎಲ್ಲಾ ಶಾಸಕರಾಗಲಿ, ಕರ್ನಾಟಕದ ರೈತರಾಗಲಿ, ಈ ಬಗ್ಗೆ ಯೋಚನೆ ಮಾಡತಕ್ಕ ಸಂದರ್ಭದಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಬಲಾತ್ಕಾರದಿಂದ ವಸೂಲಿ ಪ್ರಾರಂಭ ಮಾಡಿ ಒಬ್ಬ ರೈತನನ್ನು ಜೈಲಿಗೆ ಕಳುಹಿಸತಕ್ಕ ಸ್ಥಿತಿಗೆ ಈ ಸರ್ಕಾರ ಬಂದುಬಿಟ್ಟಿದೆ ಅಂದರೆ ಇದಕ್ಕಿಂತಲೂ ನಾಚಿಕೆಗೇಡು ಬೇರೆ ಇಲ್ಲ ಎಂದು ನನಗೆ ಅನಿಸುತ್ತದೆ. ಏಕೆಂದರೆ ಕಳೆದ ಸಲ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಚರ್ಚೆ ಮಾಡುತ್ತಿರಬೇಕಾದರೆ ಪ್ರತಿಯೊಬ್ಬ ಶಾಸಕನ ಬಾಯಲ್ಲಿ ರೈತ ದೇಶದ ಬೆನ್ನೆಲುಬು ಎಂದು ಅನೇಕ ಭಾಷೆಗಳನ್ನು ಉಪಯೋಗಿಸಿ ರೈತನನ್ನು ಹೊಗಳಿದ್ದರು. ಅದೇ ರೈತನನ್ನು ಈಗ ಶೂಲಕ್ಕೆ ತಂದು ನಿಲ್ಲಿಸುವಂಥ ಸ್ಥಿತಿಗೆ ಬಂದಿರುವುದು, ನಿಜವಾಗಿಯೂ ಕೂಡ ಕರ್ನಾಟಕ ರಾಜ್ಯ ರೈತರಿಗೆ ಬಗೆದ ದ್ರೋಹ ಎಂದು ಹೇಳಲಿಕ್ಕೆ ನಾನು ಇಷ್ಟಪಡುತ್ತೇನೆ. ಅದೇರೀತಿ ಅನೇಕ ವ್ಯವಹಾರಗಳನ್ನು ಮಾಡುತ್ತಿರತಕ್ಕ ವ್ಯಕ್ತಿಗಳು ಇರಬಹುದು, ಕೈಗಾರಿಕೆ ನಡೆಸತಕ್ಕ ವ್ಯಕ್ತಿಗಳು ಇರಬಹುದು ಅಥವಾ ಈ ಸದನದಲ್ಲಿರತಕ್ಕ ಅನೇಕ ಶಾಸಕರು ಸಾಲ ಪಡೆದಿರಬಹುದು ಆದರೆ ರೈತ ಮಾತ್ರ ಈ ಒಂದು ಸ್ಥಿತಿಗೆ ಬಂದು ನಾವು ಸ್ವತಃ ಈ ಸ್ಥಾನದಲ್ಲಿ ನಿಂತಿದ್ದರೆ ಇಷ್ಟು ಹೊತ್ತಿಗೆ ಜೈಲಿಗೆ ಹೋಗುವ ಸ್ಥಿತಿ ಬರುತ್ತಿತ್ತಾ ಎಂದು ಯೋಚನೆ ಮಾಡುವ ಸ್ಥಿತಿಗೆ ಸರ್ಕಾರ ಬರಲಿಲ್ಲ. ಇದನ್ನು ಪ್ರತಿಭಟನೆ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಕರ್ನಾಟಕ ರಾಜ್ಯದ ಬಿ.ಜೆ.ಪಿ. ಅಧ್ಯಕ್ಷರಾದ ಬಿ ಎಸ್. ಯಡಿಯೂರಪ್ಪನವರು ಈ ಒಂದು ಸರ್ಕಾರದ ಧೋರಣೆ ವಿರುದ್ಧ ರೈತರ ಸಾಲ ವಸೂಲಾತಿ ಬಗ್ಗೆ ಪ್ರತಿಭಟನೆ ಮಾಡಬೇಕೆಂದು ಈ ಸದನಕ್ಕೆ ಬರಲಿಕ್ಕೆ ಬಹಿಷ್ಕಾರ ಹಾಕಿದ್ದಾರೆ. ಅಲ್ಲದೆ ಇಡೀ ಕರ್ನಾಟಕ ರಾಜ್ಯಾದ್ಯಂತ ಪ್ರವಾಸ ಮಾಡುತ್ತಾ, ಸುಮಾರು ೮೨ ಕಡೆ ಅವರು ರೈತ ಜಾಥಾದಲ್ಲಿ ಭಾಗವಹಿಸಿದ್ದಾರೆ. ಮುಂದಿನ ಈ ಸಭೆಗಳಲ್ಲಿ ಸುಮಾರು ೫ ಸಾವಿರದಿಂದ ೧೦ ಸಾವಿರದ ತನಕ ರೈತರು ಸೇರುತ್ತಾರೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ನಿಲುವಳಿ ಸೂಚನೆಯ ಬಗ್ಗೆ ಇಲ್ಲಿ ಪ್ರಸ್ತಾಪವಾಗುತ್ತಿದೆ. ಆದರೆ ನನ್ನ ಸ್ನೇಹಿತರುಗಳು ಅವರ ಪಕ್ಷದ ಧ್ಯೇಯ ಧೋರಣೆಯನ್ನು ನಮ್ಮ ಮುಂದಿಟ್ಟು ಅದರ ಬಗ್ಗೆ ಮಾತನಾಡುತ್ತಿದ್ದಾರೆ. ಇದು ನಿಲುವಳಿ ಸೂಚನೆ ವ್ಯಾಪ್ತಿಯಲ್ಲಿ ಬರುವುದಿಲ್ಲ, ರೈತರನ್ನು ಜಾಥಾ ಹೊರಡಿಸುವುದಕ್ಕೂ ಇದಕ್ಕೂ.........

ಶ್ರೀ ಪಾಟೀಲ್ ನಾಗರಾಜ್.—ಇದರಲ್ಲಿ ತಪ್ಪೇನು ಇಲ್ಲ. ಹೊರಗಡೆ ಏನು ನಡೆಯುತ್ತಿದೆ ಎಂದು ಇಲ್ಲಿ ಹೇಳುತ್ತಿದ್ದಾರೆ. ರೈತರ ಪರವಾಗಿ ಜಾಥಾ ಹೊರಡಿಸುವುದು ತಪ್ಪೇನು ಅಲ್ಲ. ರೈತರು ಸತ್ಯಾಗ್ರಹ ಮಾಡುತ್ತಿದ್ದಾರೆ. ಇದು ಪ್ರಣಾಳಿಕೆ ಅಲ್ಲ. ರೈತರು ದೊಡ್ಡ ಅಪರಾಧವೇನೂ ಮಾಡಿಲ್ಲವಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ರೈತರ ಸಮಸ್ಯೆಗೆ ನಾವು ವಿರೋಧ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ.—ಈ ಸರಕಾರ ದ್ರೋಹ ಬಗೆದರೂ ಕೂಡ ವಿರೋಧ ಪಕ್ಷದವರು ಅವರ ಜೊತೆಗೆ ಇದ್ದೇವೆ ಎಂಬ ಎಚ್ಚರಿಕೆಯನ್ನು ಈ ಸರ್ಕಾರಕ್ಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಿ.ಜೆ.ಪಿ. ಯವರು ಅವರ ಜೊತೆಯಲ್ಲಿದ್ದೇವೆಂದು ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ.—ಈ ಕರ್ನಾಟಕ ರಾಜ್ಯ ಅನಾಥ ಅಲ್ಲ. ನಾವು ಅವರ ಜೊತೆ ಇದ್ದೇವೆ ಬರುವ ಅಧಿವೇಶನದೊಳಗೆ ಈ ಕುರಿತು ಸರಕಾರದ ಧೋರಣೆ ಬದಲಾಗದಿದ್ದರೆ ಕರ್ನಾಟಕ ರಾಜ್ಯದಾದ್ಯಂತ ಇರುವ ರೈತರನ್ನು ಕರೆತಂದು ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆಂದು ನಮ್ಮ

ರಾಜ್ಯದ ನಮ್ಮ ಪಕ್ಷದ ಅಧ್ಯಕ್ಷರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರಕ್ಕೆ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರಕಾರ ಏನು ಹೇಳುತ್ತದೆ ಎಂಬುದು ನಮಗೆ ಗೊತ್ತಿದೆ.

ಶ್ರೀ ರಮಾನಾಥ ರೈ.—ಅಲ್ಲಿಗೆ ಹೋಗಿ ಮುತ್ತಿಗೆ ಹಾಕಿ. ಜಾಥಾ ಮಾಡಿ.

೫–೦೦ ಪಿ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ.—ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ರೈತರ ಬಗ್ಗೆ ಎಲ್ಲರೂ ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಸರಕಾರ ನಾಳೆ ಉತ್ತರ ಕೊಡುವಾಗ ಬಹಳ ಜವಾಬ್ದಾರಿಯಿಂದ ಉತ್ತರ ಕೊಡಬೇಕು. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ರೈತರು ನಿಮ್ಮ ಸರಕಾರದ ವಿರುದ್ಧ ತಿರುಗಿ ಬಿದ್ದಾರು ಎಂಬ ಎಚ್ಚರಿಕೆಯನ್ನು ಕೊಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇಂತಹ ಗುರುತರವಾದ ಚರ್ಚೆ ನಡೆಯುವಾಗ ನಮ್ಮ ಮುಖ್ಯ ಮಂತ್ರಿಗಳು ಸಭೆಯಲ್ಲಿ ಹಾಜರಿದ್ದರೆ ಬಹಳ ಒಳ್ಳೆಯದು. ಅವರನ್ನು ಕರೆಸಿ ಇಂತಹ ಚರ್ಚೆ ನಡೆಯುವಾಗ ಅವರು ಸಭೆಯಲ್ಲಿದ್ದರೆ ಹೆಚ್ಚು ಮಹತ್ವ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಮಾನ. ದೇಶಪಾಂಡೆಯವರು ಮಾತನಾಡುತ್ತಾ ಹೊಸ ತತ್ವವನ್ನು ಹೇಳಿದರು. ಏನೆಂದರೆ ಹಳೆಯ ಸಾಲ ಬಾಕಿ ಇದ್ದರೂ ಕೂಡ ಹೊಸ ಸಾಲ ಕೊಟ್ಟು ಕೈಗಾರಿಕೆಗಳನ್ನು ಯಾವ ರೀತಿ ಉದ್ಧಾರ ಮಾಡುತ್ತೇವೆ ಅದೇ ರೀತಿ ವ್ಯವಸಾಯಕ್ಕೆ ಏಕೆ ಸಹಾಯ ಮಾಡಬಾರದು ಎಂದು, ಇಂತಹ ತತ್ವವನ್ನು ನಿರೂಪಣೆ ಮಾಡುವುದು ಬಹಳ ಸುಲಭ, ಆದರೆ ಅದನ್ನು ಕಾರ್ಯಗತವನ್ನು ಮಾಡುವುದು ಕಷ್ಟ. ನನಗೆ ತಿಳಿದಿರುವ ಮಟ್ಟಿಗೆ ಹಳೆಯ ಸಾಲ ಚುಕ್ತಾ ಆಗದೆ ಹೊಸ ಸಾಲವನ್ನು ಕೊಟ್ಟು ರೈತನನ್ನು ಉದ್ಧಾರಮಾಡ ತಕ್ಕಂತಹ ಪದ್ಧತಿ ಕರ್ನಾಟಕ ರಾಜ್ಯದಲ್ಲಾಗಲೀ, ಉಳಿದ ರಾಜ್ಯದಲ್ಲಾಗಲೀ ಜಾರಿಗೆ ಬಂದಿಲ್ಲ. ಇದು ನನಗೆ ಗೊತ್ತಿರತಕ್ಕಂತಹ ವಿಷಯ ಭಾಷಣ ಮಾಡಿ ಸರಕಾರವನ್ನು ಒಲಿಸಿಕೊಂಡು ಸಾಲವನ್ನು ಮನ್ನಾ ಮಾಡುವ ಬಗ್ಗೆ ಒತ್ತಡ ತರುತ್ತೇವೆಂದು ಹೇಳಿದರೆ ಅದು ಪ್ರಯೋಜನವಾಗುವುದಿಲ್ಲ. ಮಾನ್ಯ ಬಿಜೆಪಿ ಸ್ನೇಹಿತರು ನಿಲುವಳಿ ಸೂಚನೆಯ ಮೂಲಕ ಈ ವಿಚಾರವನ್ನು ಇಲ್ಲಿ ತಂದು ಸರಕಾರವನ್ನು ಹೆದರಿಸಿ ಅವರ ಕಾರ್ಯಕ್ರಮಕ್ಕೆ ಬೆಂಬಲ ಕೊಡುವ ರೀತಿ ಇಲ್ಲಿ ಭಾಷಣ ಮಾಡಿದರೆ ಏನೂ ಪ್ರಯೋಜನ ವಾಗುವುದಿಲ್ಲ. ಈ ನಿಲುವಳಿ ಸೂಚನೆಗೆ ತಕ್ಕಂತಹ ಪರಿಹಾರ ಏನು ಎಂಬುದನ್ನು ಹೇಳುವುದಕ್ಕೆ ವಿರೋಧ ಪಕ್ಷದವರು ಇನ್ನೂ ಸಮರ್ಥರಾಗಲಿಲ್ಲ. ಇದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಏನು ಉತ್ತರ ಕೊಡಬೇಕು ಅದನ್ನು ಕೊಡುತ್ತಾರೆ. ಹಾಗೂ ಯಾವ ರೀತಿ ಜಾರಿ ಮಾಡಬೇಕೆನ್ನುವ ಬಗ್ಗೆ ಸ್ಪಷ್ಟವಾಗಿ ತಿಳಿಸುತ್ತಾರೆ. ನಿಲುವಳಿ ಸೂಚನೆ ರೂಪದಲ್ಲಿ ಬಂದು ಇಲ್ಲಿ ಚರ್ಚೆಯಾಗುತ್ತಿರುವಾಗ ಏನೇನು ಸಲಹೆ ಬರುತ್ತದೆ ಎನ್ನುವುದನ್ನು ಕಾದು ನೋಡಿ ಅದಕ್ಕೆ ತಕ್ಕಂತೆ ಉತ್ತರವನ್ನು ಕೊಡ ಬೇಕಾಗುತ್ತದೆ,

ಒಟ್ಟಿನಲ್ಲಿ ಹಳೇ ಸಾಲವನ್ನು ಯಾವರೀತಿ ಮನ್ನಾಮಾಡಬೇಕೆಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ...

ಶ್ರೀ ಡಿ.ಬಿ. ಚಂದ್ರೇಗೌಡ.—ನಿಮಗೆ ಹಳೇ ಅಭ್ಯಾಸ ಮರೆತು ಹೋಗಿದೆ ಎಂದು ನಾನು ತಿಳಿದು ಕೊಂಡಿದ್ದೆ. ನೀವು ಮಾತನಾಡುವಾಗ ಮಂತ್ರಿಗಳ ರೀತಿಯಲ್ಲೇ ಉತ್ತರವನ್ನು ಕೊಡುವುದಕ್ಕೆ ಹೋಗು ತ್ತಿದ್ದೀರಿ. ಅದನ್ನು ಬಿಟ್ಟು ರೈತರ ಪರವಾಗಿ ಮಾತನಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಮೊದಲಿನಿಂದಲೂ ರೈತರ ಪರವಾಗಿಯೇ ಕೆಲಸ ಮಾಡುತ್ತಾ ಬಂದಿದ್ದೇನೆ. ಯಾವ ಪಕ್ಷ ಅಧಿಕಾರದಲ್ಲಿರುತ್ತದೋ ಆ ಪಕ್ಷದಲ್ಲಿ ನಾವು ಕೆಲಸ ಮಾಡುವಾಗ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬಿಟ್ಟು ನಮ್ಮ ಆರ್ಥಿಕ ಪರಿಸ್ಥಿತಿ ಏನು? ನಾವು ಎಷ್ಟು ದೂರ ಹೋಗಬಹುದೆಂಬುದನ್ನು ನಾವು ತಿಳಿದುಕೊಂಡು ಮಾತನಾಡುವುದು ಒಳ್ಳೆಯದು. ಮಾನ್ಯ ಅಧ್ಯಕ್ಷರೇ ಮಾನ್ಯ ಚಂದ್ರೇಗೌಡರು ಸ್ವತಃ ರೈತರು. ಆದ್ದರಿಂದ ನಮ್ಮ ಪರಿಮಿತಿ ಎಷ್ಟು ಎಂಬುದನ್ನು ಅವರು ಅರಿತುಕೊಂಡು ಮಾತನಾಡುವುದು ಸೂಕ್ತ. ಅಲ್ಲದೆ ನಾವು ನಮ್ಮ ಪರಿಮಿತಿಯನ್ನು ನೋಡಿಕೊಂಡು ಎಷ್ಟು ಕೆಲಸ ಮಾಡಿದ್ದೇವೆಂಬುದನ್ನು ನಾನು ಪ್ರತ್ಯೇಕವಾಗಿ ಅವರಿಗೆ ಹೇಳಬೇಕಾಗಿಲ್ಲ. ಒಂದು ಪರಮಾಶ್ಚರ್ಯದ ಸಂಗತಿ ಎಂದರೆ ಇಡೀ ರಾಷ್ಟ್ರದಲ್ಲಿ...

ಶ್ರೀ ವಿನಯಕುಮಾರ್ ಸೊರ್ಕೆ.—ಚಂದ್ರೇಗೌಡರು ದೊಡ್ಡ ಕಾಫಿ ಪ್ಲಾಂಟರ್. ರೈತರ ಕಷ್ಟ ಅವರಿಗೇನು ಗೊತ್ತಿದೆ?

ಶ್ರೀ ಡಿ. ಬಿ. ಚಂದ್ರೇಗೌಡ.—ನನಗೆ ರೈತರ ಕಷ್ಟ ಗೊತ್ತಿಲ್ಲವೆಂದು ಹೇಳಬೇಡಿ. ರೈತರು ಚಳುವಳಿಯನ್ನು ಮಾಡಿದಾಗ ೬೦೦ ಕಿಲೋಮೀಟರ್‌ವರೆಗೆ ರೈತರ ಜೊತೆಯಲ್ಲಿ ನಾನು ನಡೆದಿದ್ದೇನೆ. ತುಮಕೂರಿನಲ್ಲಿ ಹುಚ್ಚಮಾಸ್ತಿಗೌಡರೇ ಆ ರೈತರಿಗೆಲ್ಲಾ ಅನ್ನ ಹಾಕಿಸಿದ್ದಾರೆ. ನನ್ನ ವಿಚಾರ ನಿಮಗೇನು ಗೊತ್ತು ಸುಮ್ಮನೆ ಕೂತುಕೊಳ್ಳಿ....

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಇಲ್ಲಿ ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆ. ಆದರೂ ರೈತರಿಗೆ ಏನೇನು ಸೌಕರ್ಯಗಳನ್ನು ಒದಗಿಸಿಕೊಡಬೇಕೋ ಅವುಗಳನ್ನು ಒದಗಿಸಿಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲವೆಂಬುದು ಎಲ್ಲರಿಗೂ ಗೊತ್ತಿದೆ. ಇಲ್ಲಿ ನನಗೆ ಒಂದು ಮಾತು ನೆನಪಿಗೆ ಬರುತ್ತದೆ. ಮಹಾಭಾರತದಲ್ಲಿ ಒಂದು ಪ್ರಸಂಗ ಬರುತ್ತದೆ. ಯಕ್ಷನು ಧರ್ಮರಾಜನನ್ನು ಕುರಿತು ''ಜಗತ್ತಿನಲ್ಲಿ ಪರಮಾಶ್ಚರ್ಯಕರ ವಿಷಯ ಯಾವುದು'' ಎಂದು ಕೇಳುತ್ತಾನೆ, ಅದಕ್ಕೆ ಧರ್ಮರಾಯನು ಉತ್ತರ ಕೊಡುತ್ತಾ ''ಪ್ರತಿದಿನ ಸಾವಿರಾರು ಜನರು ಸಾಯುತ್ತಿರುವುದನ್ನು ನೋಡಿದರೂ ಕೂಡ ನಾನು ಮಾತ್ರ ಶಾಶ್ವತ ಎಂದು ಮನುಷ್ಯ ಭಾವಿಸುತ್ತಾನೆ. ಮನುಷ್ಯನ ಈ ಭಾವನೆಯೇ ಪರಮಾಶ್ಚರ್ಯಕರ ವಾದುದು'' ಎಂದು ಹೇಳುತ್ತಾನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಹಿಂದೆ ಅಂದರೆ ಮೈಸೂರು ಪ್ರಜಾ ಪ್ರತಿನಿಧಿ ಸಭೆ ಇದ್ದಾಗಲೂ ಕೂಡ ಅಲ್ಲಿ ರೈತರ ಪ್ರತಿನಿಧಿಗಳೇ ಬಹುಸಂಖ್ಯೆಯಲ್ಲಿದ್ದರೂ ಕೂಡ ರೈತರ ಸಮಸ್ಯೆಗಳನ್ನು, ರೈತರ ಕಷ್ಟಗಳನ್ನು ಪರಿಹರಿಸುವ ಸಾಮರ್ಥ್ಯ ಅವರಲ್ಲಿರಲಿಲ್ಲ. ಅದೇ ರೀತಿ ನಾವೂ ಕೂಡ ರೈತರ ಪರವಾಗಿ ಇಲ್ಲಿ ಪ್ರತಿನಿಧಿಗಳಾಗಿದ್ದರೂ ಕೂಡ ಅವರ ಕಷ್ಟಗಳನ್ನು ಅವರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ನಮಗೆ ಸಾಧ್ಯವಾಗಿಲ್ಲ. ಅವನನ್ನು ಸಾಲದಿಂದ ಋಣಮುಕ್ತನನ್ನಾಗಿ ಮಾಡುವುದು ಕಷ್ಟವಾಗಿದೆ. ಇವತ್ತು ಕೇಂದ್ರ ಸರ್ಕಾರದಲ್ಲಿ ನಿಮ್ಮ ಪಕ್ಷವೇ ಆಡಳಿತವನ್ನು ನಡೆಸುತ್ತಿದೆ. ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಘೋಷಣೆ ಮಾಡಿದ್ದೀರೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರದವರು ರಾಜ್ಯಕ್ಕೆ ಏನು ಪಾಲನ್ನು ಕೊಡಬೇಕೋ ಅದನ್ನು ಕೊಟ್ಟರೆ ಉಳಿದುದನ್ನು ನಾವು ಹಾಕಿಕೊಳ್ಳುತ್ತೇವೆ. ಆದರೆ ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ಕೇಂದ್ರಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಸಹಾಯ ಬರಲಾರದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಎಸ್. ಕೌಜಲಗಿ (ಪರಸಗಡ).—ಸನ್ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಸರ್ಕಾರ ಒಂದು ಅನಿಶ್ಚಿತ ಧೋರಣೆಯನ್ನು ತಾಳಿರುವ ಸಲುವಾಗಿ ನಮ್ಮ ವಿರೋಧಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ತಮ್ಮ ಮುಖಾಂತರ ತಂದಿದ್ದಾರೆ ಈ ನಿಲುವಳಿ ಸೂಚನೆ ಮೇಲೆ ಇವತ್ತಿನದಿವಸ ತಾವು ಚರ್ಚೆಗೆ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ಇದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ. ಇವತ್ತಿನ ದಿವಸ ಎಲ್ಲರೂ ರೈತರನ್ನು ಹೊಗಳುವವರೇ ಇರುತ್ತಾರೆ. ಎಲ್ಲರೂ ರೈತರನ್ನು ಉಪಯೋಗಿಸಿಕೊಂಡು ಮುಂದುವರಿಯ ಬೇಕೆನ್ನುವ ಒಂದು ಭಾವನೆಯನ್ನು ಇಟ್ಟುಕೊಂಡಿರುತ್ತಾರೆಂದು ನಾನಾದರೂ ಹೇಳಬೇಕಾಗಿದೆ. ಏತಕ್ಕೆಂದರೆ ಮೊನ್ನೆ ನಡೆದಂಥ ಅಸೆಂಬ್ಲಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಚುನಾವಣಾ ಪ್ರಣಾಳಿಕೆ ಒಂದು ಬೈಬಲ್ ಇದ್ದಹಾಗೆಂದು ಹೇಳಿದರು. ಚುನಾವಣೆಯ ಪ್ರಣಾಳಿಕೆಯ ಪ್ರಕಾರ ಯಾವುದೇಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆ ಕೆಲಸ ಮಾಡಬೇಕಾಗುತ್ತದೆಂದು ಹೇಳಿದ್ದರು. ಇವತ್ತಿನ ದಿವಸ ತಮ್ಮ ರಾಷ್ಟ್ರೀಯ ಕಾಂಗ್ರೆಸ್ ಸರ್ಕಾರದವರು ಇದ್ದರೂ ಸಹಿತ ತಮ್ಮ ಚುನಾವಣಾ ಪ್ರಣಾಳಿಕೆ ಯಲ್ಲಿ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ನಮ್ಮ ರಾಜ್ಯದ ರೈತರಿಗೆ ಮೊನ್ನೆ ದಿವಸ ತಪ್ಪು ತಿಳುವಳಿಕೆಯನ್ನು ಕೊಟ್ಟಿರುವ ಬಗ್ಗೆ ಬಹಳ ಮುಖ್ಯವಾಗಿ ಹೇಳುತ್ತಿದ್ದೇನೆ.

ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ಕಾರದವರು ಇದು ನಮಗೆ ಸಂಬಂಧ ಪಟ್ಟಿದ್ದಲ್ಲ, ಇದು ಕೇಂದ್ರಕ್ಕೆ ಸಂಬಂಧಪಟ್ಟಿದ್ದು, ಇದನ್ನು ಕೇಂದ್ರ ಸರ್ಕಾರದವರು ಮಾಡ ಬೇಕಾಗುತ್ತದೆಂದು ಹೇಳುತ್ತಿದ್ದಾರೆ. ನಮ್ಮ ಸರ್ಕಾರದವರು ಅಧಿಕಾರದಲ್ಲಿದ್ದಾಗ ೭ ಪರ್ಸೆಂಟ್ ಬಡ್ಡಿ ಸೂಟಿ ಕೊಟ್ಟಿದ್ದು ಅಲ್ಲದೆ ಇತರ ಸೌಲಭ್ಯಗಳನ್ನು ರೈತರಿಗೆ ಅನುಕೂಲವಾಗುವಂತೆ ಒದಗಿಸಿಕೊಡ ಲಾಯಿತು. ಆಗ ಇದ್ದಂಥ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಅವಲಂಬಿಸಿರಲಿಲ್ಲ. ನಮ್ಮ ಕಾಲಮೇಲೆ ನಾವು ನಿಂತು ರೈತರಿಗೆ ಸಹಾಯ ಮಾಡಿದ್ದೇವೆಂದು ಇವತ್ತಿನದಿವಸ ನಾನು ಹೇಳಬೇಕಾಗಿದೆ. ಅದೇ ಪ್ರಕಾರವಾಗಿ ಇವತ್ತಿನದಿವಸ ರೈತರು ಎಲ್ಲೆಲ್ಲಿ, ಯಾರು ಯಾರಿಂದ ಸಾಲವನ್ನು ಪಡೆಯಬಲ್ಲರೋ ಅಂದರೆ ಸಹಕಾರ ಸಂಘಗಳವರಿಂದ ಪಡೆದಿರತಕ್ಕಂಥ ಸಾಲವನ್ನು ಬಲವಂತವಾಗಿ ವಸೂಲು ಮಾಡುವ ಕೆಲಸ ನಡೆಯುತ್ತಿದೆ, ಹೀಗಾಗಿ ರೈತರಿಗೆ ಬಹಳವಾಗಿ ತ್ರಾಸಾಗುತ್ತಿರುವುದರಿಂದ ಸರ್ಕಾರದವರು

ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ವಿರೋಧಪಕ್ಷದ ನಾಯಕರು ಹೇಳಿದರು. ಹತ್ತು ಸಾವಿರ ರೂಪಾಯಿಗಳ ಸಾಲವನ್ನು ಯಾವ ರೈತರು ತೆಗೆದುಕೊಂಡಿರುತ್ತಾರೋ ಅವರು ಅಕ್ಟೋಬರ್ ೯ ರ ಒಳಗೆ ತೀರಿಸಿದರೆ ಅವರಿಗೆ ಬಡ್ಡಿ ಸೂಟ ಮಾಡುತ್ತೇವೆ ಮತ್ತು ಕೇಂದ್ರ ಸರ್ಕಾರದಿಂದ ಹಣ ಬರದಿದ್ದರೂ ಸಹಿತ ಕೊಡುತ್ತೇವೆ ಎನ್ನುವ ನಿಲುವನ್ನು ಕೂಡಲೇ ತೆಗೆದುಕೊಳ್ಳಬೇಕು. ಮತ್ತು ನಬಾರ್ಡ್‌ಗೆ ಕಟ್ಟತಕ್ಕಂಥ ಹಣವನ್ನು ಕಟ್ಟಿ ಹಣವನ್ನು ಬಿಡುಗಡೆ ಮಾಡಲು ಕಾರ್ಯಕ್ರಮಗಳನ್ನು ಕೈಗೊಂಡು ರೈತರಿಗೆ ಅನುಕೂಲವಾಗುವಂತೆ ಮಾಡಬೇಕು. ಈವತ್ತಿನ ದಿವಸ ನಮ್ಮ ಹಿರಿಯ ಸದಸ್ಯರಾದಂಥ ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಹೆಚ್ಚಿನ ಸಹಾಯವನ್ನು ಕೊಡುತ್ತಿದ್ದ ಹಾಗೆ ಸಿಕ್ ಇಂಡಸ್ಟ್ರೀಸ್‌ಗಳಿಗೂ ನಾನಾ ರೀತಿಯ ಸಹಾಯವನ್ನು ಮಾಡಿರುವಂತೆ ಅಗ್ರಿಕಲ್ಚರ್ ಇಂಡಸ್ಟ್ರೀಸ್‌ಗಳನ್ನು ಪ್ರಾರಂಭ ಮಾಡಿರುವ ರೈತರಿಗೂ ಸಹಿತ ಯಾವ ವಿಧವಾದ ತ್ರಾಸಾಗದಂತೆ ಸಹಾಯ ಮಾಡುವ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಅಲ್ಲದೆ ಸರ್ಕಾರದವರು ರೈತರಿಗೆ ಇನ್ನೂ ಹೆಚ್ಚಿನ ಸಾಲ ಸಿಗುವಂಥ ಒಂದು ವ್ಯವಸ್ಥೆಯನ್ನೂ ಕೂಡ್ರ ಮಾಡಬೇಕು.

ಎರಡನೆಯದಾಗಿ ರೈತರಿಂದ ಸಾಲವನ್ನು ವಸೂಲು ಮಾಡದಂತೆ ಕೇಂದ್ರ ಸರ್ಕಾರದವರು ಬಜೆಟ್‌ನ್ನು ಮಂಡನೆ ಮಾಡುವವರೆಗಾದರೂ ಬಡ್ಡಿಯನ್ನು ಸೂಟಬಿಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಾಟೀಲ್ ಬಾಬಗೌಡ ರುದ್ರಗೌಡ (ಕಿತ್ತೂರು).—ಮಾನ್ಯ ಅಧ್ಯಕ್ಷರೇ, ರೈತರ ಸಾಲವನ್ನು ಮನ್ನಾ ಮಾಡುವ ಸಲುವಾಗಿ ಬೇಕಾದಷ್ಟು ಚರ್ಚೆಯಾಗಿದೆ. ಹೆಚ್ಚು ಕಡಿಮೆ ರೈತರು ಹತ್ತು ಸಾವಿರದವರೆಗೆ ಸಾಲ ಮನ್ನಾ ಆಗಿದೆ ಎಂದು ಭಾವಿಸಿ ಕೊಂಡಿರುತ್ತಾರೆ. ಕೇಂದ್ರ ಸರ್ಕಾರದಲ್ಲಿ ಅಧಿಕಾರಕ್ಕೆ ಬಂದವರು, ಆ ಮೇಲೆ ರಾಜ್ಯಸರ್ಕಾರದ ಅಧಿಕಾರದ ಸೂತ್ರವನ್ನು ಕೈ ಹಿಡಿದವರು ಚುನಾವಣೆಗೆ ಮುನ್ನ. ೧೦ ಸಾವಿರ ರೂಪಾಯಿಗಳವರೆಗೆ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದರೂ ಇದುವರೆಗೆ ಜಾರಿ ಆಗಿಲ್ಲ. ಮಧ್ಯಪ್ರದೇಶ, ಒರಿಸ್ಸಾ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಕೇಂದ್ರ ಸರ್ಕಾರವನ್ನು ಕೇಳದೆಯೇ ೧೦ ಸಾವಿರ ರೂಪಾಯಿಗಳಿಂದ ೧೫ ಸಾವಿರ ರೂಪಾಯಿಗಳವರೆಗೆ ರೈತರಿಗೆ ಸಾಲವನ್ನು ಮನ್ನಾ ಮಾಡುವ ವಿಚಾರ ತೆಗೆದುಕೊಂಡಿದೆ. ಇಲ್ಲಿ ಯಾವ ರೀತಿ ವಸೂಲು ಮಾಡಬೇಕು ಎನ್ನುವ ವಿಚಾರವನ್ನು ಚರ್ಚೆ ಮಾಡಲು ವಸೂಲು ಮಾಡುತ್ತಿರುತ್ತಾರೆ. ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ಮಾಡಿ ಒಂದು ತೀರ್ಮಾನ ಮಾಡಬೇಕು. ಇವತ್ತಿನ ದಿವಸ ೧೦೦ಕ್ಕೆ ೫೦ ಭಾಗದಷ್ಟು ಸಾಲವನ್ನು ಪಡೆದಂಥ ರೈತರು ಕೃಷಿ ಕಾರ್ಮಿಕರು ಸಾಲವನ್ನು ತುಂಬುವಂಥ ಪರಿಸ್ಥಿತಿಯಲ್ಲಿಲ್ಲ. ಇದು ಸರ್ಕಾರಕ್ಕೂ ಮನದಟ್ಟಾಗಿರುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಾಲದ ಬಾಕಿ ವಸೂಲ್ಮಾಡಬೇಕೆಂದರೆ ಅವರನ್ನು ಜೈಲಿಗೆ ಕಳುಹಿಸಬೇಕು, ಅದು ಬಿಟ್ಟು ಗತ್ಯಂತರವೇ ಇಲ್ಲ. ಆ ಕಾರಣ ಜನರನ್ನು ಜೈಲಿಗೆ ಕಳುಹಿಸದೆ ಕೂಡಲೇ ಸಾಲವನ್ನು ಮನ್ನಾ ಮಾಡುವ ವಿಚಾರಕ್ಕೆ ಸರ್ಕಾರ ಬರಬೇಕು. ಆ ರೀತಿ ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕು. ಇಲ್ಲದಿದ್ದರೆ, ಸಾಲವನ್ನು ವಸೂಲ್ಮಾಡುತ್ತೇವೆಂದು ಹಠ ಹಿಡಿದರೆ ಕರ್ನಾಟಕದಲ್ಲಿ ಒಂದು ದೊಡ್ಡ ಕ್ರಾಂತಿ ಆಗಬಹುದು. ಅಂದರೆ ಈಗಾಗಲೇ ರೈತರು ಸಾಲ ಮನ್ನಾ ಆಗಿದೆ ಎಂಬ ವಿಚಾರದಲ್ಲಿರುವಾಗ ಯಾರೋ ಅಧಿಕಾರಿಗಳು ಮತ್ತು ಪೋಲೀಸರು ಹಳ್ಳಿಯಲ್ಲಿ ಬಂದು ಕುಣಿದಾಡಿದರೆ ಹಳ್ಳಿಯ ಜನರು ಸುಮ್ಮನಿರಲಾರರು ಎಂಬ ವಿಚಾರವನ್ನು ನಾನು ಮತ್ತೊಮ್ಮೆ ತಿಳಿಸಿ ನನಗೆ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡ ದೇವನಕೋಟೆ).—ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ಮುಖ್ಯ ಮಂತ್ರಿಗಳು ನಮ್ಮ ಸರ್ಕಾರದಲ್ಲಿ ದುಡ್ಡಿಲ್ಲ, ಪ್ರಣಾಳಿಕೆಯಲ್ಲೂ ಸೇರಿಸಿಲ್ಲ, ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರಸ್ಸು ಮಾಡುತ್ತೇನೆಂದು ಹೇಳಿದರು. ದೆಹಲಿಗೆ ಹೋಗಿಬಂದ ಬಳಿಕ ಸಾಲ ವಸೂಲ್ಮಾಡುವುದಕ್ಕೆ ಆದೇಶ ನೀಡಿದರು. ಈ ಬಗ್ಗೆ ಕೇಂದ್ರ ಸರ್ಕಾರದವರ ಸ್ಪಷ್ಟ ಆದೇಶ ಇಲ್ಲ. ಕೇಂದ್ರ ಸರ್ಕಾರದವರು ಪರಿಹಾರ ಕೊಡತಕ್ಕ ಪರಿಸ್ಥಿತಿಯಲ್ಲಿಲ್ಲವೆಂದು ಹೇಳಿದರು. ಪತ್ರಿಕೆಯಲ್ಲಿ ಹೇಳಿಕೆ ಕೊಡುವುದಕ್ಕೆ ಮೊದಲು ಸದನದಲ್ಲಿ ಚರ್ಚೆ ಮಾಡಿ ಆಮೇಲೆ ವಸೂಲ್ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದರೆ ಚೆನ್ನಾಗಿತ್ತು. ಅಥವಾ ಕೇಂದ್ರ ಸರ್ಕಾರದ ಬಡ್ಜೆಟ್ ಅಧಿವೇಶನವಾದ ಮೇಲಾದರೂ ವಸೂಲ್ಮಾಡಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ಈ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಯಾವ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ಮುಖ್ಯ ಮಂತ್ರಿಗಳ ಹೇಳಿಕೆಯಿಂದ ಪಿಎಲ್‌ಡಿ. ಬ್ಯಾಂಕಿನವರು ವಸೂಲಿಗೆ ಹೋಗುತ್ತಾರೆ. ಆದರೆ ಅಲ್ಲಿ ವಸೂಲಿಯಾಗುವುದಿಲ್ಲ. ಆದರೂ ಹೋಗಿಬಂದುದ್ದಕ್ಕೆ ೫೦೦ ರೂಪಾಯಿ ಚಾರ್ಜ್ ಮಾಡುತ್ತಾರೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಬಾಡಿಗೆ

ಕಾರ್ ಮಾಡಿಕೊಂಡು ಪೆಟ್ರೋಲ್ ಬಿಲ್ ತೋರಿಸುತ್ತಾರೆ ಬಾಡಿಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇದೆಲ್ಲ ಖರ್ಚನ್ನು ಬ್ಯಾಂಕಿನ ಲೆಕ್ಕಕ್ಕೆ ತೋರಿಸುತ್ತಾರೆ. ಇದರಿಂದ ಸುಮಾರು ಲಕ್ಷಾಂತರ ರೂಪಾಯಿ ನಷ್ಟ. ಏತಕ್ಕೆ ಹಣ ವಸೂಲ್ಮಾಡಲಿಲ್ಲವೆಂದರೆ ರೈತರು ಕೊಡಲಿಲ್ಲವೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆಂದು ರೈತರು ದುಡ್ಡು ಕೊಡುವುದಕ್ಕೆ ಮುಂದೆ ಬರುತ್ತಿಲ್ಲ. ಆದ್ದರಿಂದ ಸರ್ಕಾರದವರು ಕೊನೇಪಕ್ಷ ಕೇಂದ್ರ ಸರ್ಕಾರದ ಬಡ್ಜೆಟ್ ಮಂಡನೆ ಆಗುವವರೆಗಾದರೂ ಸಾಲ ವಸೂಲಿ ಮಾಡುವುದನ್ನೇ ನಿಲ್ಲಿಸಬೇಕೆಂದು ಒತ್ತಾಯಿಸುತ್ತೇವೆ. ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳು ಪವರ್ ಇಲ್ಲವೆಂದು ಹೇಳಿದರು ಎಷ್ಟೋ ಕಡೆ ಬಾವಿ ತೋಡಿದ್ದರೂ ವಿದ್ಯುತ್ ಸರ್ವಿಸ್ ಕೊಟ್ಟಿಲ್ಲ. ಆದರ ಹಣ ಕಟ್ಟಿ ಎಂದು ಬ್ಯಾಂಕಿನವರು ಕೇಳುತ್ತಿದ್ದಾರೆ. ವಿದ್ಯುತ್ ಸರಬರಾಜು ಕೊಡುತ್ತೇವೆಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಅದರ ಮೇಲೆ ಪಿಎಲ್‌ಡಿ ಬ್ಯಾಂಕಿನವರು ಸಾಲ ಕೊಟ್ಟಿದ್ದಾರೆ. ಆದರೆ ಇದುವರೆಗೆ ಸರ್ವೀಸ್ ಕೊಟ್ಟಿಲ್ಲ. ಸಾಲ ಮನ್ನಾ ಮಾಡುವುದಕ್ಕೆ ಸರ್ಕಾರದಲ್ಲಿ ದುಡ್ಡಿಲ್ಲ, ಪ್ರಣಾಳಿಕೆಯಲ್ಲಿ ಹೇಳಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಎರಡು ತಿಂಗಳ ಮಟ್ಟಿಗಾದರೂ ಅಂದರೆ ಕೇಂದ್ರದ ಬಡ್ಜೆಟ್ ಅಧಿವೇಶನ ಪ್ರಾರಂಭ ಆಗುವವರೆಗೆ ಸಾಲವನ್ನು ವಸೂಲ್ಮಾಡದಿರುವುದು ಒಳ್ಳೆಯದು. ಇಷ್ಟು ಮಾಡಿದರೆ ಒಳ್ಳೆಯದೆಂದು ನಾನು ಹಿಂದಿನ ಅಧಿವೇಶನದಲ್ಲೇ ಸ್ಪಷ್ಟವಾಗಿ ಹೇಳಿದ್ದೇನೆ. ಈ ದಿಸೆಯಲ್ಲಿ ಅವಸರ ಮಾಡಿದರೆ ರೈತರ ಪರಿಸ್ಥಿತಿ ಕಷ್ಟವಾಗುತ್ತದೆ ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಸರ್ಕಾರ ಸಾಲ ವಸೂಲಿಗೆ ಅವಕಾಶ ಕೊಡದೆ ವಸೂಲಿ ಕಾರ್ಯವನ್ನು ತಡ ಮಾಡಬೇಕೆಂದು ಒತ್ತಾಯಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರು ಈ ಒಂದು ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರೈತರು ಕಳೆದ ೧೯೭೨ ರಿಂದ ಇಲ್ಲಿಯವರೆಗೆ ಬರಗಾಲದ ಬವಣೆಯಿಂದ ಬಳಲುತ್ತಿದ್ದಾರೆ. ರೈತರ ಸಾಲ ಮನ್ನಾ ಮಾಡಬೇಕೆಂದು......

ಶ್ರೀ ವಾಟಾಳ್ ನಾಗರಾಜ್.—ಕಳೆದ ಸಾರಿ ರೈತರ ಬಗ್ಗೆ ಕಳಕಳಿ ವ್ಯಕ್ತಪಡಿಸಿದರು ೪೨ ಜನ ಸದಸ್ಯರಿದ್ದಾರೆ. ಆದರೆ ಅವರಲ್ಲಿ ಬಹುತೇಕ ಜನರು ಈಗ ಕಾಣುತ್ತಿಲ್ಲ, ಖಾಲಿ ಖುರ್ಚಿಗಳು ಕಾಣುತ್ತಿರುವುದು ಅತ್ಯಂತ ಶೋಚನೀಯವಾದುದು ಇಂಥಪರಿಸ್ಥಿತಿ ಬರಬಾರದು. ರೈತರ ಪರವಾಗಿದ್ದವರು ಎಲ್ಲಿ ಹೋದರು ? ರೈತರ ವಿರುದ್ಧವಾಗಿದ್ದವರು ಎಲ್ಲಿ ಹೋದರು ? ಈ ಕಡೆಯ ನಾಯಕರೂ ಇಲ್ಲ, ಆ ಕಡೆ ನಾಯಕರೂ ಇಲ್ಲ. ಏನು ಇದು ? ರೈತರ ಬಗ್ಗೆ ಒಂದು ಕಳಕಳಿಯಾದರೂ ಇರಬೇಕಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಬರಗಾಲದ ಬವಣೆಯಿಂದ ಕಳೆದ ಆರು ವರ್ಷಗಳಿಂದ ಬಳಲಿ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ.

ಶ್ರೀ ವಾಟಾಳ್ ನಾಗರಾಜ್:—ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನಾನು ಈಗ ಗುರುತರವಾದ ವಿಚಾರ ಹೇಳುತ್ತಿದ್ದೇನೆ. ಈಗ ಈ ಸಭೆಯಲ್ಲಿ ರೈತರ ಬಗ್ಗೆ ಗಾಢವಾದ ಚರ್ಚೆ ನಡೆಯುತ್ತಿದೆ. ಬಹಳ ದಿವಸಗಳ ನಂತರ ಸಭೆ ಸೇರಿದೆ. ಈ ಬಗ್ಗೆ ಬಹಳ ದೊಡ್ಡ ಯುದ್ಧವೇ ಆಗಬಹುದು ಎನ್ನುವ ರೀತಿಯಲ್ಲಿ ಪತ್ರಿಕೆಯಲ್ಲಿ ವರದಿ ಬಂತು. ಆದರೆ ಈಗ ಸಭೆಯಲ್ಲಿ ರೈತರ ಪರವಾದರೂ ಇಲ್ಲ. ವಿರೋಧವಾಗಿರುವವರೂ ಇಲ್ಲ. ಎಲ್ಲಾ ಎಲ್ಲಿ ಹೋಗಿದ್ದಾರೆ ? ಇಲ್ಲಿ ೪೨ ಜನ ಕೂತಿದ್ದಾರೆ. ಮುಖ್ಯಮಂತ್ರಿಗಳಿಲ್ಲ. ವಿರೋಧ ಪಕ್ಷದ ನಾಯಕರೂ ಇಲ್ಲ ಆದ್ದರಿಂದ ಮುಖ್ಯಮಂತ್ರಿಗಳನ್ನಾದರೂ ಕರೆಸಿದರೆ ಸಭೆಗೆ ಭೂಷಣ ಇರುತ್ತದೆ: ಮಾನ್ಯ ಸದಸ್ಯರು ಹೇಳುವುದನ್ನು ಕೇಳಿ ನಾಳೆ ಉತ್ತರ ಕೊಡುವುದಕ್ಕೆ ಅವಕಾಶವಾಗುತ್ತದೆ. ಅವರೆಲ್ಲಿದ್ದಾರೆ ಸಾರ್.

ಛೇರ್ಮನ್.—ಅವರು ಹೇಳುವುದನ್ನು ಇಲ್ಲಿ ಬರೆದುಕೊಳ್ಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಯಾರೋ ಗುಮಾಸ್ತರು ಬರೆದುಕೊಳ್ಳುತ್ತಾರೆ. ಅದು ಬೇರೆ ಪ್ರಶ್ನೆ. ಮಂತ್ರಿಗಳು ಕುಳಿತುಕೊಂಡು ಅವರಿಗೆ ಮಾತ ಒಪ್ಪಿಸುವುದು ಬೇಡ. ಮುಖ್ಯಮಂತ್ರಿಗಳು ಎದುರಿಗೆ ಕುಳಿತುಕೊಂಡರೆ ನಮ್ಮ ಕಳಕಳಿ ಅವರಿಗೆ ಅರ್ಥವಾಗುತ್ತದೆ. ಯಾರೋ ಬರೆದುಕೊಂಡು ಮುಖ್ಯಮಂತ್ರಿಗಳಿಗೆ ಒಪ್ಪಿಸಿದರೆ ಅದು ಗಿಳಿಪಾಠವಾಗುತ್ತದೆ. ಅದರ ಬದಲು ನಮ್ಮ ಭಾವನೆಗಳನ್ನು ಅವರು ಅರ್ಥ ಮಾಡಿಕೊಂಡರೆ ಅವರಿಗೆ ಪರಿಸ್ಥಿತಿ ಚೆನ್ನಾಗಿ ಅರ್ಥವಾಗುತ್ತದೆ.

ಛೇರ್ಮನ್.—ಸರಿ.

ಶ್ರೀ ವಾಟಾಳ್ ನಾಗರಾಜ್.—ಸರೀನಾ ಬಿಡಿ. (ನಗು).

ಶ್ರೀ ಪಿ. ಸಿ. ಸಿದ್ದನಗೌಡರ್.—ರೈತ ಈ ದೇಶದಲ್ಲಿ ಬೆನ್ನೆಲುಬು, ರೈತ ಈ ದೇಶದ ಮುಂದಿನ ನಾಯಕ ಎಂದು ಎಲ್ಲರೂ ಹೇಳುತ್ತಿದ್ದೇವೆ. ಕೇಂದ್ರಸರ್ಕಾರವಿರಲಿ, ರಾಜ್ಯ ಸರ್ಕಾರವಿರಲಿ ಎಲ್ಲರೂ ಹೇಳುತ್ತಿದ್ದೇವೆ. ಮಾನ್ಯ ರಾಮಕೃಷ್ಣ ಹೆಗಡೆ ಅವರ ಸರ್ಕಾರದವರು ೧೯೮೩ ರಿಂದ ಇಲ್ಲಿಯವರೆಗೆ ಬಡ್ಡಿ ಮನ್ನಾ ಮಾಡುವ ಅನೇಕ ಯೋಜನೆಗಳನ್ನು ಮಾಡಿದ್ದರು. ೧೦೦ಕ್ಕೆ ೨ ಪರ್ಸೆಂಟ್ ಬಡ್ಡಿಯಂತೆ ಸಹಕಾರ ಸಂಘದಲ್ಲಿ ಯಾವ ರೈತ ಸಾಲ ಪಡೆಯುತ್ತಿದ್ದಾನೋ ಅದನ್ನು ತಪ್ಪಿಸಿ ಆ ಯೋಜನೆಯನ್ನು ರದ್ದುಪಡಿಸಿ ಇವತ್ತಿನ ದಿವಸ ೧೦೦ಕ್ಕೆ ೧೩–೧೪ ಪರ್ಸೆಂಟ್‌ನಂತೆ ಬಡ್ಡಿ ವಸೂಲು ಮಾಡುತ್ತಿದ್ದಾರೆ. ಇದರ ವ್ಯತ್ಯಾಸ ರಾಜ್ಯ ಸರ್ಕಾರಕ್ಕೆ ಬರತಕ್ಕದ್ದು ಕೇವಲ ೧೦ ರಿಂದ ೧೨ ಕೋಟಿ ರೂಪಾಯಿಗಳು. ಆದ್ದರಿಂದ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಪಡಿಸುವುದು ಕೇವಲ ೧೦೦ಕ್ಕೆ ೨ ರಂತೆ ಬಡ್ಡಿ ವಸೂಲು ಮಾಡಬೇಕು. ಏಕೆಂದರೆ ರೈತರು ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ರೈತರ ಸಾಲವನ್ನು ಮನ್ನಾ ಮಾಡಬೇಕೆಂದು ಎಲ್ಲರೂ ಒತ್ತಾಯ ಮಾಡುತ್ತಿದ್ದಾರೆ. ರೈತ ಯಾವಾಗಲೂ ಬೇಡಿಕೆ ಇಟ್ಟವನಲ್ಲ. ರೈತ ದಾನ ಕೊಟ್ಟವನು, ಆದರೆ ಅವನ ಪರಿಸ್ಥಿತಿ ಇವತ್ತಿನ ದಿವಸ ಕೆಟ್ಟಿದೆ. ಅವನು ಬೆಳೆದಂಥ ಮಾಲನ್ನು ಕೂಡ ಮಾರಾಟ ಮಾಡಬೇಕೆಂದರೆ ಮಾರ್ಕೆಟ್ಟಿನಲ್ಲಿ ತೆಗೆದುಕೊಳ್ಳುತ್ತಿಲ್ಲ. ಕಲಘಟಗಿ ಮತ್ತು ಹುಬ್ಬಳ್ಳಿ ಮಾರ್ಕೆಟ್ಟಿನಲ್ಲಿ ಹತ್ತಿ ಇದ್ದರೂ ಕೂಡ ರಾಜ್ಯಸರ್ಕಾರದ ಅನೇಕ ಸಂಸ್ಥೆಗಳು ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು ತೆಗೆದುಕೊಳ್ಳುತ್ತಿಲ್ಲ. ಖಾದಿ ಬೋರ್ಡ್ ಆಗಲೀ ಸ್ಟೇಟ್ ಫೆಡರೇಷನ್ ಆಗಲಿ ಮುಂದೆ ಬರುತ್ತಿಲ್ಲ. ಸಾಲದ ಬವಣೆಯಿಂದ ರೈತ ಬಳಲುತ್ತಿದ್ದಾನೆ. ಇವತ್ತಿನ ದಿವಸ ದನಕರುಗಳಿಗೆ ಕುಡಿಯುವುದಕ್ಕೆ ನೀರಿಲ್ಲ. ಮೇವಿಲ್ಲ. ರೈತರು ಕಟುಕರಿಗೆ ದನ ಮಾರುವಂಥ ಪರಿಸ್ಥಿತಿ ಬಂದಿದೆ. ಇಂಥ ಸಂದರ್ಭದಲ್ಲಿ ಬ್ಯಾಂಕಿನವರು ಹಳ್ಳಿಹಳ್ಳಿಗೆ ಹೋಗಿ ಸಾಲ ವಸೂಲು ಮಾಡುತ್ತಿದ್ದಾರೆ ರೈತರು ಜೈಲಿಗೆ ಹೋಗುವ ಪರಿಸ್ಥಿತಿ ಬಂದಿದೆ. ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋದರೆ ರಾಜ್ಯ ಸರ್ಕಾರ ಉಳಿಯುವುದಿಲ್ಲ. ಈ ಸರ್ಕಾರ ರಚನೆಯಾಗಲು ೧೨೨ ಜನ ಶಾಸಕರನ್ನು ಆರಿಸಿ ಬಹುಮಂತೆ ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ರೈತರ ಕಳಕಳಿಯನ್ನು ಅರ್ಥಮಾಡಿಕೊಂಡು ಅವರ ಬೇಡಿಕೆಯನ್ನು ಸರ್ಕಾರ ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳ ಹಿಂದೆ ಸಾಲ ಮನ್ನಾ ಮಾಡುವ ಬಗ್ಗೆ ಮತ್ತು ವಸೂಲಾತಿಯನ್ನು ಸ್ಥಗಿತಗೊಳಿಸುವ ಬಗ್ಗೆ ಹೇಳಿದ್ದರು, ಈಗ ಸರ್ಕಾರ ಆದೇಶ ಮಾಡಿ ಸಾಲ ವಸೂಲು ಮಾಡುವುದಕ್ಕೆ ಕ್ರಮ ಕೈಗೊಂಡಿರುವುದು ನೋಡಿದರೆ ತೀರಾ ವಿಷಾದ ಎನಿಸುತ್ತದೆ. ಆದ್ದರಿಂದ ಸರ್ಕಾರದವರು ಸಾಲ ಮನ್ನಾ ಮಾಡುವ ಜೊತೆಗೆ ಇಂಡಸ್ಟ್ರೀಸ್‌ಗೆ ಯಾವರೀತಿ ರಿಯಾಯಿತಿ ಕೊಡುವ ಯೋಜನೆಗಳನ್ನು ಜಾರಿ ಮಾಡಿದ್ದಾರೋ ಅಂಥ ಯೋಜನೆಗಳನ್ನು ರೈತರ ಪರವಾಗಿ ಮಾಡಬೇಕು. ಈ ನಿರ್ಣಯವನ್ನು ಮಾಡುವುದಕ್ಕೆ ಸರ್ಕಾರದವರು ಒಪ್ಪುತ್ತಾರೆಂದು ಭಾವಿಸಿ ತಮ್ಮ ಮುಖಾಂತರ ಸಾಲ ಮನ್ನಾ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತಾ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್),— ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯದ ರೈತರು ಎಂದೂ ಕಾಣದೇ ಇರತಕ್ಕ, ಎಂದೂ ರಾಜ್ಯದಲ್ಲಿ ನಡೆಯದೇ ಇರತಕ್ಕ ಕೃತ್ಯವನ್ನು ಕಾಣತಕ್ಕ ಒಂದು ದೌರ್ಭಾಗ್ಯವನ್ನು ಪಡೆದಿದ್ದಾರೆ. ಅಂತಹ ಪರಿಸ್ಥಿತಿ ರೈತರಿಗೆ ಒದಗಿ ಬಂದಿದೆ. ಕೇವಲ ೫೦೦ ರೂಪಾಯಿ ಸಾಲವನ್ನು ಕೊಡದೇ ಇರುವುದಕ್ಕೋಸ್ಕರ ಒಬ್ಬ ರೈತನನ್ನು ಜೈಲಿಗೆ ಕಳುಹಿಸಿದ ನಿದರ್ಶನ ಕರ್ನಾಟಕದ ಇತಿಹಾಸದಲ್ಲಿ...

ಶ್ರೀ ಕಾಗೋಡು ತಿಮ್ಮಪ್ಪ.— ಅದು ಬ್ಯಾಂಕಿನವರದ್ದು...

ಶ್ರೀ ಸಿ. ಬೈರೇಗೌಡ.—ಇದು ನಿಮ್ಮ ಜಿಲ್ಲೆಯ ವಿಷಯವೇ, ೧೯೭೨ ರಿಂದ ನಿಮ್ಮ ಜೊತೆಯಲ್ಲಿ ಇದ್ದು ಇಷ್ಟು ಸಣ್ಣ ವಿಚಾರ ನನಗೆ ಗೊತ್ತಿಲ್ಲದಿದ್ದರೆ ಹೇಗೆ? ತಾವು ದಯವಿಟ್ಟು ಕೇಳಿ. ಇಂತಹ ಒಂದು ದುರ್ಭರ ಕೃತ್ಯ ನಮ್ಮ ಕರ್ನಾಟಕದಲ್ಲಿ ಎಂದೂ ನಡೆದಿದ್ದಿಲ್ಲ. ಬಹುಶಃ ಈ ಸರ್ಕಾರಕ್ಕೆ ಗೊತ್ತಿಲ್ಲವೆಂದು ಕಾಣುತ್ತದೆ. ೧೯೮೩ರಲ್ಲಿ ಆ ಕಡೆ ಇದ್ದವರು ಈ ಕಡೆ ಕುಳಿತುಕೊಳ್ಳಲು ಕಾರಣರು ಯಾರು ಎಂದು ತಮಗೆ ಗೊತ್ತೇ ಇದೆ ಅವತ್ತೂ ಇದಕ್ಕೆ ಕಾರಣರು ರೈತರೇ ಹಾಗೂ ಈಗಲೂ ಸರ್ಕಾರ ಬದಲಾಗಲು ರೈತರೇ ಕಾರಣರು. ಇದನ್ನು ಯಾರು ಮರೆಯಬಾರದು. ನೀವು ಅಧಿಕಾರಕ್ಕೆ ಬಂದು ಕೇವಲ ಒಂದೂವರೆ ತಿಂಗಳು ಆಗಿದೆ. ಈ ರೀತಿಯಾಗಿ ಒಬ್ಬ ರೈತನನ್ನು ಜೈಲಿಗೆ ಕಳುಹಿಸತಕ್ಕ ಘೋರ ಕೃತ್ಯಕ್ಕೆ ಇವತ್ತು ತಾವು ಎಡೆ ಮಾಡಿ ಕೊಟ್ಟಿದ್ದೀರಿ ನಮ್ಮ ಸ್ನೇಹಿತರು ಯಾರು ಎಂದು ಕೇಳುತ್ತಿದ್ದಾರೆ. ಈ ಸಮಸ್ಯೆಗೆ ಕಾರಣರು ಇವರು ಅಥವಾ ಅವರು ಎನ್ನುವ ಪ್ರಶ್ನೆ ನನಗೆ ಬೇಕಾಗಿಲ್ಲ. ಇದನ್ನು ಯಾರೇ ಮಾಡಿರಲಿ, ಇದಕ್ಕೆ ಕಾರಣರು ಕೇಂದ್ರ ಸರ್ಕಾರದ ಅಧೀನದಲ್ಲಿ ಇರುವ ಬ್ಯಾಂಕೇ ಇರಬಹುದು ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಇರುವ ಸಹಕಾರ ಸಂಘವೇ ಇರಬಹುದು. ಆದರೆ ಮುಖ್ಯವಾದ ಸಮಸ್ಯೆ ಏನು ? ರೈತರು ಇವತ್ತು

ಸಾಲವನ್ನು ಹಿಂದಕ್ಕೆ ವಾಪಸಿ ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ. ನಾನೇ ಒಬ್ಬ ರೈತನಾಗಿ ನನಗೂ ಕೂಡಾ ಅನೇಕ ಸಂದರ್ಭಗಳಲ್ಲಿ ಇದು ಬಹಳ ಒಗಟು ಆಗಿತ್ತು. ಎಲ್ಲಿ ನೋಡಿದರೂ ಕೂಡಾ ಹಸಿರು ಕಾಣುತ್ತದೆ, ಎಲ್ಲಿ ನೋಡಿದರೂ ಬೆಳೆ ಇರುತ್ತದೆ. ಆದರೆ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲವಲ್ಲ ಎನ್ನುವ ಚಿಂತೆ ನನಗೂ ಬಂತು. ಇದಕ್ಕೆ ಉತ್ತರ ನಾನು ಒಂದು ಸಂಚಿಕೆ ನೋಡಿದ್ದರಿಂದ ತಿಳಿಯಿತು. ಆಕಸ್ಮಾತ್ತಾಗಿ ಮೊನ್ನೆ ತಾನೇ ಬೆಂಗಳೂರಿನ ವ್ಯವಸಾಯ ವಿಶ್ವವಿದ್ಯಾನಿಲಯದ ರಜತ ಮಹೋತ್ಸವದ ಸಂದರ್ಭದಲ್ಲಿ ಹೊರಡಿಸಿದ ಸ್ಮರಣ ಸಂಚಿಕೆಯನ್ನು ನೋಡುವ ಅವಕಾಶ ಸಿಕ್ಕಿತು. ಅದರಲ್ಲಿ ವಿಜ್ಞಾನಿ ಒಬ್ಬರು ಒಂದು ಮಾತನ್ನು ಹೇಳುತ್ತಾರೆ. ಅವರು ಹೇಳತಕ್ಕ ಮಾತು ನೂರಕ್ಕೆ ಒಂದು ಸಾವಿರದಷ್ಟು ಸತ್ಯವಾಗಿದೆ. ಅದನ್ನು ಓದಿದ ಮೇಲೆ ಇವತ್ತು ಸಾಲ ವಜಾ ಆಗಬೇಕಾದ ಅವಶ್ಯಕತೆ ಇದೆ ಎಂದು ನಾನು ಹೇಳುತ್ತೇನೆ, ಅದನ್ನು ಓದುವುದಕ್ಕೆ ಅವಕಾಶ ಇದೆ ಎಂದು ನಾನು ಇಲ್ಲಿ ಅದನ್ನು ಓದುವುದಕ್ಕೆ ಇಷ್ಟಪಡುತ್ತೇನೆ.—

> 'The share of agriculture to GDP declined from 59% in 1950–51 to 33% in 1987–88 though the percentage of total population dependent on agriculture has more or less remained constant at 72%. This shows the income distribution in this country is getting adversely squelled the ratio between urban income and rural income widening all the time......

ಎನ್ನತಕ್ಕದ್ದನ್ನು ಒಬ್ಬ ವಿಜ್ಞಾನಿ ಆಗಿರುವವರು, ಹೆಬ್ಬಾಳದಲ್ಲಿರುವ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಡೀನ್ ಆಗಿರುವವರು ಬರೆದಿರತಕ್ಕ ಒಂದು ಆರ್ಟಿಕಲ್‌ನಲ್ಲಿ ಈ ರೀತಿ ಹೇಳಿದ್ದಾರೆ.

೫–೩೦ ಪಿ.ಎಂ.

೧೯೫೦–೫೧ರಲ್ಲಿ ಈ ದೇಶದ ವ್ಯವಸಾಯ ರಂಗದ ಸಂಪತ್ತು ಶೇಕಡ ೫೯ರಷ್ಟು ಇದ್ದಿದ್ದು ೧೯೮೭–೮೮ರಲ್ಲಿ ಶೇಕಡ ೩೩ರಷ್ಟಾಗಿದೆ. ಅಂದರೆ ವ್ಯವಸಾಯ ರಂಗದಲ್ಲಿ ಸಂಪತ್ತು ವೃದ್ಧಿ ಆಗುತ್ತಿಲ್ಲ. ಅದಕ್ಕೆ ಬದಲಾಗಿ ಕೃಷಿರಂಗ ಪಾಪರ್ ಆಗತಕ್ಕ ಕಾಲ ಬಂದಿದೆ. ರೈತರು ದಿವಾಳಿಯಾಗತಕ್ಕ ಪರಿಸ್ಥಿತಿ ಬಂದಿದೆ. ದಿವಾಳಿತನ ಹಂಚಿಕೆಯಾಗುತ್ತಿರುವುದರಿಂದ ರೈತ ತಾನು ಮಾಡಿದಂತಹ ಸಾಲವನ್ನು ತೀರಿಸಲಾರದೆ ಜೈಲಿಗೆ ಹೋಗತಕ್ಕ ಪರಿಸ್ಥಿತಿ ಬಂದಿದೆ. ಇದರಲ್ಲಿ ಆ ಸರ್ಕಾರ ಈ ಸರ್ಕಾರ ಎನ್ನುವ ಪ್ರಶ್ನೆಯೇ ಇಲ್ಲ. ದಿವಾಳಿತನವನ್ನು ನಾವು ವ್ಯವಸಾಯ ರಂಗದಲ್ಲಿ ಹಂಚಿಕೆ ಮಾಡುತ್ತಿದ್ದೇವೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸನ್ಮಾನ್ಯ ವೀರೇಂದ್ರ ಪಾಟೀಲರು ಬಹಳ ನಾಜೂಕಾಗಿ ಉತ್ತರ ಕೊಟ್ಟರು. ತಮ್ಮ ಪ್ರಣಾಳಿಕೆಯನ್ನು ಓದಿದರು. ರಾಷ್ಟ್ರೀಯ ರಂಗದ ಪ್ರಣಾಳಿಕೆಯನ್ನು ಓದಿ ತಿಳಿಸಿದರು. ನಮಗೆ ಇದೇ ಸರ್ವಸ್ವ ಎಂದು ಹೇಳಿದರು. ನಾವು ಆ ರೀತಿಯಲ್ಲಿ ಹೇಳಿಲ್ಲ. ಅವರು ಹೇಳಿದ್ದರೆ ಅವರು ಮಾಡಬೇಕೆಂದರು. ಇವತ್ತಿನ ದಿವಸ ನೀವು ಇದರ ಬಗ್ಗೆ ನಿರ್ದಿಷ್ಟವಾಗಿ ನಿಮ್ಮ ನಿಲುವನ್ನು ಹೇಳಬೇಕಾಗಿದೆ. ನಮ್ಮ ಕಣ್ಣು ಮುಂದೆ ಇರತಕ್ಕವರು ನೀವು ನಿಮ್ಮನ್ನು ನಾವು ಕೇಳುತ್ತಿದ್ದೇವೆ, ವಾಸ್ತವಾಂಶವನ್ನು ಇವತ್ತು ನಾವು ಮರೆತಿದ್ದೇವೆ. ಇವತ್ತು ರೈತರಿಗೆ ಸಾಲ ಕೊಡತಕ್ಕ ಕೆಲಸ ನಿಂತುಹೋಗಿದೆ. ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಸಾಲ ಕೊಡತಕ್ಕ ಸಂಸ್ಥೆಗಳ ಕೆಲಸ ಮೊನ್ನೆ ಸೋಮವಾರದಿಂದ ಸ್ಥಗಿತಗೊಂಡಿದೆ. ಇದನ್ನು ಕೇಳಿದರೆ ನಾವಲ್ಲಾ ಮಾಡಿರುವುದು, ನಬಾರ್ಡ್‌ನವರು ಮಾಡಿರುವುದೆಂದು ಹೇಳುತ್ತೀರಿ. ಅದು ನಿಜ, ಇದಕ್ಕೆ ಕಾರಣಕರ್ತರು ಯಾರು ಎಂಬುದನ್ನು ಯೋಚನೆ ಮಾಡಬೇಕು. ನೀವು ಕೊಡಬೇಕಾದ ಹಣ ಅಂದರೆ ಭೂಅಭಿವೃದ್ಧಿ ಬ್ಯಾಂಕುಗಳಿಗೆ ಕೊಡಬೇಕಾದ್ದು ಸುಮಾರು ೪೨–೪೩ ಕೋಟಿ ರೂಪಾಯಿಗಳಾಗುತ್ತದೆ. ಆ ಹಣವನ್ನು ನೀವು ಕೊಡದಿರುವುದರಿಂದ ಈ ಪರಿಸ್ಥಿತಿ ಇವತ್ತು ಉದ್ಭವವಾಗಿದೆ. ನೀವು ಕೊಟ್ಟಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಇದರಿಂದ ಈಗ ರೈತರಿಗೆ ಸಾಲ ಕೊಡುವುದು ನಿಂತು ಹೋಗಿದೆ. ರೈತರಿಗೆ ಈಗ ಸಾಲ ಸಿಕ್ಕುತ್ತಿಲ್ಲ. ಸಾಲಸಿಕ್ಕದೇ ಇರತಕ್ಕಂಥ ಕಷ್ಟದ ಪರಿಸ್ಥಿತಿಯನ್ನು ರೈತರು ಒಂದು ಕಡೆ ಅನುಭವಿಸುತ್ತಿದ್ದಾರೆ. ರೈತನನ್ನು ಜೈಲಿಗೆ ಕಳುಹಿಸತಕ್ಕ ಪರಿಸ್ಥಿತಿ ಮತ್ತೊಂದು ಕಡೆ ಇದೆ. ಇಂತಹ ಭೀಕರವಾದ ಪರಿಸ್ಥಿತಿ ಕರ್ನಾಟಕ ರಾಜ್ಯದ ರೈತವರ್ಗಕ್ಕೆ ಯಾವತ್ತೂ ಬಂದಿರಲಿಲ್ಲ. ಅವರು ಇದನ್ನು ಕೇಳಿಯೂ ಇರಲಿಲ್ಲ, ತಾವು ಕೇಂದ್ರಸರ್ಕಾರದ ನಾಯಕರುಗಳು ಈ ಬಗ್ಗೆ ಮಾತನಾಡಿರುವುದನ್ನು ಹೇಳಿದ್ದೀರಿ. ಆದರೆ ಇದು ಕೇಂದ್ರಸರ್ಕಾರದ ಹೊಣೆಗಾರಿಕೆಯಲ್ಲ. ರಾಜ್ಯಸರ್ಕಾರವು ಸಾಲವನ್ನು ವಜಾ ಮಾಡಬೇಕು, ಎನ್ನುವ ಮಾತನ್ನು ಹಲವಾರು ಜನ

ಹೇಳಿದ್ದಾರೆ. ಕೇಂದ್ರಸರ್ಕಾರವು ಇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಇರತಕ್ಕದ್ದು ಯಾರಿಗೋಸ್ಕರ? ಅವುಗಳು ಇರತಕ್ಕದ್ದು ನಮ್ಮ ಪ್ರಭುಗಳಿಗೋಸ್ಕರ ನಮ್ಮ ನಾಯಕರುಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು ಇದೇನು ದೊಡ್ಡ ವಿಚಾರವಾಗುವುದಿಲ್ಲ. ಈಗ ಇರತಕ್ಕ ಸಾಲವನ್ನು ವಜಾ ಮಾಡಬೇಕಾದರೆ ಸರ್ಕಾರ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು, ಇದೇನು ದೊಡ್ಡ ವಿಷಯವಲ್ಲ ಈಗಾಗಲೇ ಕೆಲವು ರಾಜ್ಯ ಸರ್ಕಾರಗಳವರು ಸಾಲ ಮನ್ನಾ ಮಾಡುವ ಬಗ್ಗೆ ನಿರ್ಣಯ ಮಾಡಿದ್ದಾರೆ. ಏತಕ್ಕೆ ಮಾಡಿದ್ದಾರೆಂದರೆ ಅಲ್ಲಿ ಅವರುಗಳು ಚುನಾವಣೆಗಳನ್ನು ಎದುರಿಸಬೇಕು. ಅದಕ್ಕೋಸ್ಕರ ಈ ನಿರ್ಣಯವನ್ನು ಮಾಡಿದ್ದಾರೆ, ಇಲ್ಲಿ ನೋಡಿಕೊಳ್ಳೋಣ, ಇನ್ನು ಐದು ವರ್ಷಗಳ ಕಾಲ ಇದೆ. ಈಗ ಯಾವುದು ಚುನಾವಣೆಯನ್ನು ಎದುರಿಸಬೇಕಾಗಿಲ್ಲ, ಚುನಾವಣೆ ಎದುರಿಸಬೇಕಾದ ಸಂದರ್ಭದಲ್ಲಿ ಮಾತ್ರ ಇದರ ಬಗ್ಗೆ ನೋಡೋಣ. ಆಗ ಹೇಳಿಕೆ ಕೊಡೋಣವೆಂಬ ಉದ್ದೇಶವನ್ನು ಇಟ್ಟುಕೊಂಡು ಇವರು ಇದರ ಬಗ್ಗೆ ಏನೂ ಮಾಡುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಮುಂದಿನ ಚುನಾವಣೆಯ ಸಂದರ್ಭದಲ್ಲಿ ಮತ್ತೊಂದು ಸಾರಿ ಜನರನ್ನು ಮರಳು ಮಾಡೋಣ ಎಂಬ ಅಭಿಪ್ರಾಯಕ್ಕೆ ಈ ಸರ್ಕಾರ ಬಂದ ಹಾಗೆ ಇದೆ. ಕೇಂದ್ರ ಸರ್ಕಾರದ ವಶದಲ್ಲಿ ನಬಾರ್ಡ್ ಇದೆ. ನಬಾರ್ಡ್‌ನವರಿಗೆ ಕೊಡಬೇಕಾದ ಸಾಲವನ್ನು ನಿಲ್ಲಿಸತಕ್ಕಂಥ ಕೆಲಸವನ್ನು ಮಾಡಲು ಹೋಗಬೇಡಿ.

ಶ್ರೀ ಪಾಟೀಲ್ ನಾಗರಾಜ್.—ಮಾನ್ಯ ಅಧ್ಯಕ್ಷರೇ. ಈ ಸರ್ಕಾರ ಏನಾದರು ಸತ್ತು ಹೋಗಿದೆಯೆ ಎಲ್ಲಿದೆ ಸರ್ಕಾರ ? ಸರ್ಕಾರ ಬದುಕಿಲ್ಲ. ಒಬ್ಬರೇ ಒಬ್ಬರು ರಾಜ್ಯಮಂತ್ರಿಗಳು ಇದ್ದಾರೆ. ಒಬ್ಬ ಸಂಪುಟ ದರ್ಜೆಯ ಮಂತ್ರಿಗಳಿಲ್ಲ. ಈ ಸರ್ಕಾರಕ್ಕೆ ಮಾನವಿಲ್ಲ, ಮರ್ಯಾದೆ ಇಲ್ಲ. ಈ ಸರ್ಕಾರಕ್ಕೆ ಮರ್ಯಾದೆ ಇದೆಯೇ ? ರೈತರ ಬಗ್ಗೆ ಚರ್ಚೆ ನಡೆಯುವಾಗ ಮಂತ್ರಿಗಳು ಇಲ್ಲ. ಇದು ರೈತ ವಿರೋಧಿ ಸರ್ಕಾರ. ಮಾನಗೆಟ್ಟ ಸರ್ಕಾರ. ನಿಮಗೆ ನೀತಿನಿಯಮಗಳು ಇವೆಯೇ ? ಇದು ಯಾವ ಸರ[illegible] ? [illegible] ನ ಮಂತ್ರಿಗಳಲ್ಲಿ ಒಬ್ಬ ಮಂತ್ರಿ ಆದರೂ ಇಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲವೆ ? ನಿಮ್ಮ ಮಂತ್ರಿಗಳು ಎಲ್ಲಿ ಹೋಗಿದ್ದಾರೆಂದು ಕೇಳುತ್ತೇನೆ ? ಸರ್ಕಾರ ಸತ್ತು ಹೋಗಿದೆಯೇ ? ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಎಲ್ಲಿದೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮತ್ತು ಆಹಾರ, ನಾಗರಿಕ ಸರಬರಾಜು ರಾಜ್ಯ ಸಚಿವರು).— ನೀವು ಒಬ್ಬರೆ ಅಲ್ಲ, ನಾವೂ ನೋಡಿದ್ದೇವೆ. ನೀವು ಕುಳಿತುಕೊಳ್ಳಿ.

ಶ್ರೀ ಪಾಟೀಲ್‌ನಾಗರಾಜ್.—ನಿಮ್ಮ ಸರ್ಕಾರ ಸತ್ತುಹೋಗಿದೆ. ಇದು ರೈತ ವಿರೋಧಿ ಸರ್ಕಾರ. ನಾನು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ರೈತ ವಿರೋಧಿ ಸರ್ಕಾರವಿದು. ಒಬ್ಬ ಮಂತ್ರಿಯೂ ಇಲ್ಲ. ಈ ಸರ್ಕಾರಕ್ಕೆ ಧಿಕ್ಕಾರ.

(ಮಾನ್ಯ ಸದಸ್ಯರು ಈ ಹಂತದಲ್ಲಿ ತಮ್ಮ ಪೀಠದಿಂದ ಎದ್ದುಬಂದು ಮಾತನಾಡುತ್ತಿದ್ದರು ಅವರ ಜೊತೆಯಲ್ಲಿ ನಾಲ್ಕಾರು ಸದಸ್ಯರು ಕೂಡಿಕೊಂಡರು)

ಛೇರ್ಮನ್.—ಒಬ್ಬರು ಮಂತ್ರಿಗಳು ಇದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಕೆ. ಜೆ. ಜಾರ್ಜ್.—ಇಲ್ಲಿ ನಿಮಗೆ ಇಷ್ಟಬಂದ ಹಾಗೆ ಹೇಳುವುದಲ್ಲ.

(ಈ ಹಂತದಲ್ಲಿ ಮಾತನಾಡುತ್ತಿದ್ದ ಮಾನ್ಯ ಪಾಟೀಲ್‌ನಾಗರಾಜ್ ಮತ್ತು ನಾಲ್ಕಾರು ಸದಸ್ಯರುಗಳು ಸಭಾತ್ಯಾಗ ಮಾಡಿದರು.)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಛೇರ್ಮನ್‌ರವರೆ, ಒಂದು ವಿಷಯದ ಚರ್ಚೆ ನಡೆಸಬೇಕಾದರೆ ಆ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಸಂಪುಟದರ್ಜೆಯ ಮಾನ್ಯ ಸಚಿವರು ಇರಬೇಕಾದ್ದು ಅವಶ್ಯಕ ಎನ್ನತಕ್ಕದು ಇವತ್ತಿನದಲ್ಲ ಅದು ಮೊದಲಿನಿಂದಲೂ ಒಪ್ಪಿಕೊಂಡಿರತಕ್ಕ ತತ್ವ. ಸಭೆಯಲ್ಲಿ ಮಂತ್ರಿಗಳು ಇರಬೇಕಾದ ಜವಾಬ್ದಾರಿಯಿದೆ. ಆ ಮಾತು ಹೇಳಿದ್ದೇವೆ. ಈಗಲೂ ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ಈ ವಿಷಯ ಬಹಳ ದೊಡ್ಡದು ಎನ್ನುವುದು ಎಲ್ಲರಿಗೂ ಗೊತ್ತಿದೆ, ಇದು ಸಣ್ಣ ವಿಚಾರವಲ್ಲ. ರೈತನ ಸಾಲ ಮನ್ನಾ ಮಾಡತಕ್ಕದ್ದು ವಸೂಲಿ ತಡೆಹಿಡಿಯತಕ್ಕದ್ದು ಸಣ್ಣ ವಿಚಾರವಲ್ಲ. ಈ ವಿಚಾರ ನಮ್ಮ ಪಕ್ಷ ಆ ಪಕ್ಷಗಳಿಗೆ ಸೇರಿದ್ದಲ್ಲ, ರಾಜ್ಯಮಟ್ಟದ ರಾಷ್ಟ್ರಮಟ್ಟದ ಎಲ್ಲ ರಾಜಕೀಯ ಪಕ್ಷಗಳು ಕೂಡ, ನಬಾರ್ಡ್ ಸಂಸ್ಥೆ ಇರಬಹುದು, ರಿಸರ್ವ್‌ಬ್ಯಾಂಕ್ ಇರಬಹುದು, ರಾಷ್ಟ್ರಮಟ್ಟದಲ್ಲಿ ಹಣ ಕೊಡದಿದ್ದರೆ ಫೈನಾನ್ಸ್ ಮಾಡುವುದಿಲ್ಲ. ಇದು ರಾಜ್ಯಗಳಿಗೆ ಮತ್ತು ಕೇಂದ್ರಸರ್ಕಾರಕ್ಕೆ ಸಂಬಂಧಪಟ್ಟಿದ್ದಲ್ಲ. ಇದು ಬಹಳ ದೊಡ್ಡ ವಿಚಾರ. ಈ ಬಗ್ಗೆ ಚಳುವಳಿ ಕೂಡ ನಡೆಯುತ್ತಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಭಾಷಣದ ಮುಖಾಂತರ ತಮ್ಮ ಅನಿಸಿಕೆಗಳನ್ನು ಹೇಳುವ ಹಕ್ಕು ಇದೆ

ಆ ರೀತಿ ಹೇಳತಕ್ಕ ಸಂದರ್ಭದಲ್ಲಿ ತಮ್ಮ ಅಪ್ಪಣೆ ಪಡೆದು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಲಿ ಮಂತ್ರಿಗಳು ಇಲ್ಲಿ ಕುಳಿತುಕೊಳ್ಳಬೇಕಾದ ಅವಶ್ಯಕತೆಯಿದೆ. ಮಾನ್ಯ ಸದಸ್ಯ ಜವಾಬ್ದಾರಿಯಿಂದ ಮಾತನಾಡುತ್ತಾರೆ, ಹಿಂದಿನ ಮಂತ್ರಿಮಂಡಲದ ಮಂತ್ರಿಗಳು ಅವರು ಮಾಡಿದ್ದರು ಆದುದರಿಂದ ನಾವು ಮಾಡುತ್ತೇವೆಂದು ಹೇಳದೆ, ಎಷ್ಟೋ ಸಾರಿ ಮಂತ್ರಿಮಂಡಲದ ಕೆಲಸವನ್ನು ಅಧ್ಯಕ್ಷರು ಎತ್ತಿ ಹಿಡಿದಿರತಕ್ಕ ಘಟನೆಗಳು ಇವೆ. ಮುಖ್ಯಮಂತ್ರಿಗಳು ಎಲ್ಲಿ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಸಂಬಂಧಪಟ್ಟ ಸಚಿವರು ಕೌನ್ಸಿಲ್‌ನಲ್ಲಿದ್ದಾರೋ ಎಲ್ಲಿದ್ದಾರೋ ಗೊತ್ತಿಲ್ಲ. ಕೌನ್ಸಿಲ್ ನಡೆಯುತ್ತಿದೆ. ಅಲ್ಲಿಗೆ ಎಲ್ಲ ಸಚಿವರು ಹೋಗಿದ್ದಾರೆಯೋ ಹೇಗೆ ಎನ್ನುವುದನ್ನು ಸಹ ನಾವು ಗಮನದಲ್ಲಿಟ್ಟುಕೊಂಡು ಹೇಳಬೇಕಾಗುತ್ತದೆ. ಅಪಾದನೆ ಮಾಡುವಾಗ ಮಾನ್ಯ ವಾಟಾಳ್‌ನಾಗರಾಜ್‌ರವರಾಗಲಿ, ಮತ್ತೊಬ್ಬರಾಗಲಿ ಆ ಸದನದಲ್ಲಿ ನೋಡಿದ್ದೇವೆ ಸಚಿವರು ಅಲ್ಲೂ ಇಲ್ಲ, ಇಲ್ಲೂ ಇಲ್ಲವೆಂದು ಹೇಳಿದರೆ ಅದು ಬೇರೆ ವಿಚಾರ. ಅಧಿವೇಶನ ನಡೆಯತಕ್ಕ ಸಂದರ್ಭಗಳಲ್ಲಿ ಸಭೆ ಸಮಾರಂಭ ಮತ್ತೊಂದಕ್ಕೆ ಮಂತ್ರಿಗಳು ಹೋಗಬಾರದು ಎನ್ನುವ ನೀತಿಯ ಬಗ್ಗೆ ಸಹ ಚರ್ಚೆ ಮಾಡಿದ್ದೇವೆ. ಒಂದು ವೇಳೆ ಸಭೆಗೆ ಬರಲು ಅನಿವಾರ್ಯ ಆಗಿದ್ದರೆ ಕಾರಣ ಏನು ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದರೆ ಚೆನ್ನಾಗಿತ್ತು. ಸುಮ್ಮಸುಮ್ಮನೆ ಗೈರುಹಾಜರಾಗಿದ್ದಾರೆ ಎಂದು ಹೇಳಿದರೆ ಸರಿಯಾಗುವುದಿಲ್ಲ. ದಯಮಾಡಿ ತಾವು ಕೂಡ ಸಹಕಾರ ಮಾಡಬೇಕು. ಮಾನ್ಯ ಸಚಿವರಾದ ಶ್ರೀ ಜಾರ್ಜ್‌ರವರು ಇಲ್ಲಿ ಇದ್ದಾರೆ. ನಿಮ್ಮನ್ನು ಮಂತ್ರಿ ಅಂತ ನಾವು ಪರಿಗಣಿಸುವುದಿಲ್ಲ. ಎನ್ನುವ ಮಾತನ್ನು ಆಡಿಬಿಟ್ಟರೆ ನಾಳೆ ದಿವಸ ನೀವು ಸದಸ್ಯರಲ್ಲವೆಂದು ಪರಿಗಣಿಸುವ ಹಕ್ಕನ್ನು ಮತ್ತೊಬ್ಬರಿಗೆ ಕೊಟ್ಟ ಹಾಗೆ ಆಗುತ್ತದೆ. ಅವರು ಚುನಾವಣೆಯಲ್ಲಿ ಚುನಾಯಿತರಾಗಿ ಬಂದಿದ್ದಾರೆ. ಒಂದು ಪಕ್ಷಕ್ಕೆ ಬಹುಮತ ಸಂದಾಯವಾದಮೇಲೆ, ಒಂದು ಮಂತ್ರಿ ಮಂಡಲ ರಚನೆಯಾಗುತ್ತದೆ. ಎಷ್ಟು ಜನ ಮಂತ್ರಿಗಳಿರಬೇಕು ಎನ್ನತಕ್ಕಂಥ ಪ್ರಶ್ನೆ ಪ್ರತ್ಯೇಕ. ಈಗ ತಮ್ಮ ಮಂತ್ರಿಮಂಡಲದ ಪರವಾಗಿ ಜವಾಬ್ದಾರಿ ವಹಿಸಿ ಸಂಪೂರ್ಣ ವಿವರಗಳನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕೆ ಉತ್ತರಕೊಡುವ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಆ ಜವಾಬ್ದಾರಿ ನಿರ್ವಹಣೆ ಮಾಡುವುದಕ್ಕೆ ಈ ಸರ್ಕಾರ ಬದ್ಧವಾಗಿದೆ. ಅದರ ಬಗ್ಗೆ ಅನುಮಾನ ಬೇಡ. ದಯವಿಟ್ಟು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚೆಯನ್ನು ಮುಂದುವರೆಸಿ ವಿಷಯದ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿ. ಇದರ ಮೇಲೆ ಶ್ರೀ ಬೈರೇಗೌಡರು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯವರು ಹೇಳತಕ್ಕದ್ದು ಸಣ್ಣ ವಿಷಯ ಅಲ್ಲ. They have said about how the natioal wealt h contribution from the farming comunity of the country is coming down. ಅದು ೫೦–೬೦ ಪರ್ಸೆಂಟ್ ಇದ್ದದ್ದು ಹೋಗಿ ಸವ್ಯಕೆ ಡ್ರಾಪ್ ಆಗಿರಬೇಕು ಎಂದರೆ ಅದು ಸಣ್ಣ ವಿಷಯ ಅಲ್ಲ. In fact, I have got the details of it ಇದು ದೊಡ್ಡ ಚರ್ಚೆಗೆ ಒಳಪಡಬೇಕಾದ ವಿಷಯ. ಈ ಸಣ್ಣ ಚರ್ಚೆಯಲ್ಲಿ ವಿವರವಾಗಿ ನಾವು ಹೋಗುವುದಕ್ಕೆ ಆಗುವುದಿಲ್ಲ. ನಿಮಗೂ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ ದೊಡ್ಡ ದೊಡ್ಡ ವಿಚಾರಗಳು ಇದರಲ್ಲಿ ಅಡಕವಾಗಿವೆ. ಹಿಂದೆ ಶ್ರೀ ದೇವರಾಜ ಅರಸು ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಆವಾಗ ನಾನು ಕಂದಾಯ ಮತ್ತು ಕೃಷಿ ಇಲಾಖೆಗಳ ಮಂತ್ರಿಯಾಗಿದ್ದೆ. ಆಗ ಇಲ್ಲಿ ಒಳ್ಳೆಯ ಡಿಬೇಟ್ ಆಗಿದೆ. ಕೆಲವು ಅಂಕಿಅಂಶಗಳನ್ನು ಅವರು ಇಟ್ಟರು, ನಾವೂ ಇಟ್ಟೆವು. ಅದರೆ ಎಂದೂ ಕೂಡ ನಮ್ಮ ಚರ್ಚೆಯು ಸ್ಥಿಮಿತವನ್ನು ಕಳೆದುಕೊಂಡಿಲ್ಲ ಆದ್ದರಿಂದ ವಿಷಯದ ಮೇಲೆ ಬೆಳಕು ಚೆಲ್ಲತಕ್ಕಂಥ ಸಮಯದಲ್ಲಿ, ತಾವು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು. ನಾವು ಕೂಡ ನಮ್ಮ ಜವಾಬಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಶ್ರೀಮಾನ್ ಜಾರ್ಜ್ ಅವರು ಇಲ್ಲಿ ಕುಳಿತಿದ್ದಾರೆ, ನಿಜವಾಗಿ ಹೇಳಬೇಕೆಂದರೆ ಈ ಜವಾಬ್ದಾರಿ ನಿರ್ವಹಣೆ ಮಾಡುವುದಕ್ಕೆ ಮಂತ್ರಿಮಂಡಲ ಸಿದ್ಧವಿದೆ. ಇವರೊಬ್ಬರೇ ಮಂತ್ರಿಯಲ್ಲ. ಬೇರೆ ಸಚಿವರು ಇದ್ದಾರೆ. ಅವರಲ್ಲಿ ಕೆಲವರು ಮೇಲ್ಮನೆಗೆ ಹೋಗಿದ್ದಾರೆ. ಅವರು ಬಂದು ಜವಾಬ್ದಾರಿ ನಿರ್ವಹಣೆ ಮಾಡುತ್ತಾರೆ,

SRI QUAMARUL ISLAM —Sir, Mr Bangarappa was also a Minister. We are all elected by the people. In democracy people expect that a detailed debate and discussion should take place on each and every thing. We have spent lakhs of rupees to come here and got elected by the people of our respective constituencies. Let Mr. Bangarappa say from his heart whether it is a good example. Not a single Cabinet Minister is present here. No doubt Mr. Vatal Nagaraj in the emotion he must have said something. In my

opinion at least 25% of the Cabinet Ministers should be presnt when such an important issue is discussed in the Assembly. This is a very bad Precedent. I request the Speaker to summon some of the Ministers who are in the Upper House and ask them to be present here. It four Ministers are in the Upper House let at least two Ministers come to this House. They should not take this House for granted.

ಶ್ರೀ ಕೆ. ಜೆ. ಜಾರ್ಜ್.—ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಸದಸ್ಯರು ಹೇಳಿದಂಥ ಸಲಹೆಯನ್ನು ಒಪ್ಪಿಕೊಳ್ಳೋಣ. ಸಚಿವರು ಮೇಲ್ಮನೆಯಲ್ಲಿದ್ದಾರೆ, ಅವರಿಗೆ ಹೇಳಿ ಕಳಿಸುತ್ತೇನೆ. ಆದರೆ ಒಬ್ಬ ಮಾನ್ಯ ಸದಸ್ಯರು ನಾನು ಮಂತ್ರಿಯೇ ಅಲ್ಲ, ರಾಜ್ಯಮಂತ್ರಿಯೇ ಅಲ್ಲ, ಮಂತ್ರಿಯೆಂದು ನನ್ನನ್ನು ರೆಕಗ್ನೈಸ್ ಮಾಡುವುದಿಲ್ಲ ಎಂದು ಏನು ಹೇಳಿದರು ಅದು ಕಡತಕ್ಕೆ ಹೋಗಿದೆ. ನಾನು ಮೊದಲು ವಿರೋಧಪಕ್ಷದಲ್ಲಿ ಕುಳಿತಿದ್ದೇನೆ. ಆಗ ನಡೆದ ಹಲವಾರು ಚರ್ಚೆಗಳಲ್ಲಿ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳು ಯಾರೂ ಇರಲಿಲ್ಲ, ಮುಖ್ಯಮಂತ್ರಿಗಳು ಕೂಡ ಇರಲಿಲ್ಲ ಆದರೆ ಇವತ್ತು ವಿರೋಧಪಕ್ಷದ ನಾಯಕರು ಮಾತನಾಡುವಾಗ ಅವರು ಇದ್ದರೂ ಅವರೂ ಎಲ್ಲಾ ಬರೆದು ಕೊಂಡಿದ್ದಾರೆ ಮತ್ತು ನನಗೆ ಬರೆದುಕೊಳ್ಳಲಿಕ್ಕೆ ಹೇಳಿದ್ದಾರೆ. ಆದರೆ ಈ ತರಹ ಮಂತ್ರಿಗಳ ವಿಚಾರದಲ್ಲಿ

ಇವರು ಕ್ಯಾಬಿನೆಟ್ ಮಿನಿಸ್ಟರು, ಅಥವಾ ಸ್ಟೇಟ್ ಮಿನಿಸ್ಟರು ಎಂದು ಹೇಳುವುದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಸದನದಲ್ಲಿ ಎಲ್ಲರದ್ದೂ ಜವಾಬ್ದಾರಿ ಇದೆ. ಆದ್ದರಿಂದ ತಾವು ದಯವಿಟ್ಟು ಅದನ್ನು ಕಡತದಿಂದ ತೆಗೆದುಹಾಕಬೇಕು.

ಛೇರ್ಮನ್.—ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಬಂಗಾರಪ್ಪನವರು ಈ ಕಡೆ ಕುಳಿತಿದ್ದಾಗ ಏನೇನು ಮಾತನಾಡಿದ್ದಾರೆ ಎಂಬುದನ್ನು ಕಡತ ತೆಗೆದು ನೋಡಬೇಕಾಗಿದೆ...

ಶ್ರೀ ಎಸ್. ಬಂಗಾರಪ್ಪ.—ನಾನು ಆ ಕಡೆ ಕುಳಿತಿದ್ದಾಗ ಏನು ಮಾತನಾಡಿದ್ದೇನೆಂದು ಹೇಳಿದರೆ, ನೀವು ಈಗ ಆ ಕಡೆ ಕುಳಿತು ಏನು ಮಾತನಾಡುತ್ತೀರೋ ಅದನ್ನೇ ಹೇಳಿದ್ದೆ. ಈ ಕಡೆ ನೀವು ಕುಳಿತು ಏನು ಮಾತನಾಡಿದ್ದರೋ, ಅದನ್ನೇ ನಾನು ಈಗ ಮಾತನಾಡಿದ್ದೇನೆ.

ಶ್ರೀ ಸಿ. ಬೈರೇಗೌಡ.—ಇಲ್ಲಿ ತಾವು ಕುಳಿತಿದ್ದಾಗ ಏನು ಮಾತನಾಡಿದ್ದೀರೆಂದು ಕಡತದಲ್ಲಿ ಇದೆ. ಉತ್ತರ ಕೊಡುತ್ತೇವೆಂದು ಶ್ರೀಮಾನ್ ಜಾರ್ಜ್‌ರವರು ಹೇಳಿದ್ದಾರೆ. ಮಾನ್ಯ ಬಂಗಾರಪ್ಪನವರೂ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ, ನಾನು ಕೂಡ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಹಿಂದೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟರು, ಸನ್ಮಾನ್ಯ ಸದಸ್ಯರನೇಕರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದು ಅಷ್ಟಕ್ಕೇ ಮುಕ್ತಾಯವಾಗುತ್ತದೆಯೇ ವಿನಹ, ಇವತ್ತು ನಡೆಯುತ್ತಿರತಕ್ಕ ಚರ್ಚೆ ಎಂತಾದ್ದು ...

ಶ್ರೀ ಕಾಗೋಡು ತಿಮ್ಮಪ್ಪ.—ನೀವು ವಿಷಯ ಪ್ರಸ್ತಾಪ ಮಾಡುತ್ತಿದ್ದೀರಿ, ಆದರೆ, ಆ ಕಡೆ ವಿರೋಧ ಪಕ್ಷದ ನಾಯಕರೇ ಇಲ್ಲ.

ಶ್ರೀ ಸಿ. ಬೈರೇಗೌಡ,—ಇಲ್ಲಿ ಜವಾಬ್ದಾರಿ ಇರತಕ್ಕಂತಾದ್ದು ಸರ್ಕಾರದ್ದು, ನಮ್ಮದಲ್ಲ. ಸರ್ಕಾರ ನಡೆಸುವವರು ನೀವು, ನಾವಲ್ಲ. ಜವಾಬ್ದಾರಿ ನಿಮ್ಮದು, ಆದ್ದರಿಂದ ಸದನದಲ್ಲಿ ಇರಬೇಕಾದು. ನಿಮ್ಮ ಕರ್ತವ್ಯ. ನಾವು, ನೀವು ಇಲ್ಲಿ ಕುಳಿತಿರಬೇಕಾದ ಅವಶ್ಯಕತೆ ಇದೆ ಯಾರ ದೃಷ್ಟಿಯಿಂದ ಅಂದರೆ, ಜನತೆಯ ಹಿತದೃಷ್ಟಿಯಿಂದ ಕುಳಿತಿರಬೇಕಾದ ಅವಶ್ಯಕತೆ ಇದೆ. ಇಲ್ಲಿ ಉತ್ತರ ಕೊಡತಕ್ಕವರು ಬೇರೆ ಮಂತ್ರಿಗಳು. ಅವರು ಇಲ್ಲಿ ಇದ್ದರೆ, ನಾನು ಇದಕ್ಕೆ ಹೆಚ್ಚಿಗೆ ಮಹತ್ವ ಕೊಡುತ್ತಾ ಇರಲಿಲ್ಲ. ಕೊನೆಯಪಕ್ಷ ಹಣಕಾಸಿನ ಮಂತ್ರಿಗಳಾದರೂ ಕೂಡ ಇಲ್ಲಿರಬೇಕಾಗಿತ್ತು. ಕಾರಣ ಏನೆಂದರೆ, ಅವರು ಮಾತೆತ್ತಿದರೆ ಒಂದು ಸಾವಿರ ಕೋಟಿ ಸಾಲವಿದೆ, ಒಂದು ಸಾವಿರ ಕೋಟಿ ರೂಪಾಯಿಗಳು ಖಜಾನೆಯಲ್ಲಿ ಇಲ್ಲ. ಇವತ್ತು ರಾಜ್ಯದ ಬ್ಯಾಲೆನ್ಸ್ ಮೈನಸ್ ಎಂದು ಹೇಳುತ್ತಿರುತ್ತಾರೆ. ನಮ್ಮ ಕಷ್ಟಪರಿಸ್ಥಿತಿ ಏನೆಂದು ಅವರು ಅರ್ಥಮಾಡಿಕೊಳ್ಳಬೇಕು. ಕೇವಲ ಅಧಿಕಾರಿಗಳು ಹೇಳಿದ್ದನ್ನೇ ಕೇಳಿಕೊಂಡು ಸರ್ಕಾರ ನಡೆಸುವುದಾದರೆ, ನಾವು ಏಕೆ ಇಲ್ಲಿ ಮಾತನಾಡಬೇಕು? ನಾವು ಇಲ್ಲಿ ಕುಳಿತುಕೊಳ್ಳುವಂತಹ ಅವಶ್ಯಕತೆ ಸಹ ಬರುವುದಿಲ್ಲ.

ಚೇರ್ಮನ್.—ಈಗ ವಿಷಯಕ್ಕೆ ಬನ್ನಿ, ಮಾನ್ಯ ಬಸವಲಿಂಗಪ್ಪನವರೂ ಬಂದಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅವರು ಪಂಚಾಯತ್‌ರಾಜ್ ಮಂತ್ರಿಗಳು, ವಸೂಲಿ ಮಂತ್ರಿಗಳು. ನಾವು ಇಲ್ಲಿ ಯಾರಿಗೆ ವಿಷಯ ಹೇಳಬೇಕೆಂಬುದೇ ಸಮಸ್ಯೆ. ಇವತ್ತಿನದಿವಸ ಈ ವಿಷಯದ ಬಗ್ಗೆ ಕೇಂದ್ರಸರ್ಕಾರದವರಾಗಲೀ ಅಥವಾ ರಾಜ್ಯಸರ್ಕಾರದವರಾಗಲೀ ಲಘುವಾಗಿ ವರ್ತನೆ ಮಾಡುತ್ತಿದ್ದಾರೆ. ಇದು ಬಹಳ ಖಂಡನೀಯ. ಮಾರ್ಚ್ ತಿಂಗಳವರೆಗೆ ಬಜೆಟ್‌ವರೆಗೆ ಏಕೆ ಕಾಯಬೇಕಾಗಿದೆ? ನಾನು ಒಂದು ಪ್ರಶ್ನೆ ಕೇಳಬೇಕಾಗಿದೆ. ಕೇಂದ್ರ ಸರ್ಕಾರದವರು ಈ ಬಗ್ಗೆ ರಾಷ್ಟ್ರೀಯರಂಗದ ಸರ್ಕಾರದ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ೧೦ ಸಾವಿರ ರೂಪಾಯಿಗಳ ಒಳಗೆ ಇಂತಹಕ್ಕಂಥ ಸಾಲವನ್ನು "ಸ್ಟ್ಯಾಂಡ್ಸ್ ಕ್ಯಾನ್ಸಲ್" ಎಂದು ಹೇಳಿದ್ದಾರೆ. ಈ ಒಂದು ಸಣ್ಣ ಮಾತನ್ನು ಹೇಳುವುದಕ್ಕೂ ಇವತ್ತು ಜಗ್ಗಾಟ. ನಿನ್ನೆ ಈ ಬಗ್ಗೆ ಕೇಂದ್ರಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ರಾಷ್ಟ್ರೀಯ ಬ್ಯಾಂಕುಗಳು ಇವನ್ನು ಯಾವರೀತಿಯಾಗಿ ಕಾರ್ಯಗತ ಮಾಡಬೇಕೆಂಬ ಬಗ್ಗೆ ಅವರಿಗೆ ನಿರ್ದೇಶನ ಕೊಟ್ಟಿದ್ದಾರೆ, ಇವತ್ತು ರೈತರಿಗೆ ಸಾಲ ಎರಡು ರೀತಿಯಲ್ಲಿ ಅಾದರೆ ಸಹಕಾರಿ ರಂಗದ ಮೂಲಕ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ಸಿಗುತ್ತಿದೆ. ಆದ್ದರಿಂದ ಯಾವ ಹತ್ತು ಸಾವಿರ ರೂಪಾಯಿಗಳು ವಜಾ ಆಗುತ್ತದೆಂದು ಇಲ್ಲಿಯವರೆಗೆ ತೀರ್ಮಾನವಾಗಿಲ್ಲ. ಕಮರ್ಷಿಯಲ್ ಬ್ಯಾಂಕ್‌ನಲ್ಲಿ ಮಾಡಿರತಕ್ಕಂಥ ಸಾಲ ವಜಾ ಆಗುತ್ತದೆಯೋ ಸಹಕಾರ ಸಂಘಗಳಲ್ಲಿ ಮಾಡಿರತಕ್ಕಂಥ ಸಾಲ ವಜಾ ಆಗುತ್ತದೆಯೋ ಯಾವುದು ಎಂದು ಇವತ್ತಿನದಿವಸದವರೆಗೆ ಗೊತ್ತಾಗಿಲ್ಲ, ಇದು ಗೊತ್ತಾಗುವುದು ಸಾಧ್ಯವೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರ ಭಾಷಣಕ್ಕೆ ಅಡ್ಡಿ ಮಾಡುವುದಕ್ಕೆ ನನಗೆ ಇಚ್ಛೆ ಇಲ್ಲ ಎಷ್ಟೇ ಭಾಷಣ ಮಾಡಿದರೂ, ನಾನೇ ಭಾಷಣ ಮಾಡಲಿ, ನೀವೇ ಮಾಡಲಿ ಕೇಂದ್ರ ಸರಕಾರ ಇದರಲ್ಲಿ ಮಧ್ಯಪ್ರವೇಶ ಮಾಡುವವರೆಗೆ ಇದು ಜಾರಿಗೆ ಬರುವ ಹಾಗೆ ಇಲ್ಲ. ಕೆಲವು ರೈತರು ಸಾಲವನ್ನು ಕಮರ್ಷಿಯಲ್ ಬ್ಯಾಂಕ್ಸ್‌ನಿಂದ ತೆಗೆದುಕೊಂಡಿದ್ದಾರೆ. ಬಾವಿ, ಪಂಪ್‌ಸೆಟ್ ಮತ್ತು ಎಂವಕ್ಕೆ ಎಂದು ತೆಗೆದುಕೊಂಡಿದ್ದಾರೆ. ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ಸಾಲವಿದೆ ಸಹಕಾರ ಕ್ಷೇತ್ರದ ಬ್ಯಾಂಕ್‌ಗಳಿಂದ ಸಾಲತೆಗೆದುಕೊಂಡ ಸಾಲ ಬೇರೆ ಇದೆ. There are so many types of loans advanced by the Government through all these financial institutions. ಈ ಸಾಲ ಎಲ್ಲಿಂದ ಬರುತ್ತದೆ. ನಬಾರ್ಡ್‌ನಿಂದ. ನಬಾರ್ಡ್‌ಗೆ ಎಲ್ಲಿಂದ ಹಣ ಬರುತ್ತದೆ. ಈ ಕೋರ್ಸ್ ಪತ್ತೆ ಹಚ್ಚುವುದಕ್ಕೆ ಹೋದ ಹಾಗೆ ಇದು ಇಂಟರ್‌ನ್ಯಾಷನಲ್ ಮಾನಿಟರಿ ಫಂಡ್‌ವರೆಗೆ ಹೋಗುತ್ತದೆ. ನಾಳೆ ಹಣ ಕಡಿಮೆ ಇರುವುದರಿಂದ ನಿಮಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲ, ನಿಮ್ಮ ರಿಕವರೀಸ್ ಇಲ್ಲ ಎಂದು ಅವರು ಹೇಳಿದರೆ ಹೇಗೆ? ಮೊನ್ನೆ ಪೇಪರ್‌ನಲ್ಲಿ ಬಂದಿದೆ. ಅವರು ಪ್ಯಾರೀಸ್‌ನಲ್ಲಿ ಸಭೆ ಸೇರುತ್ತಿದ್ದಾರೆ. ನಿಮಗೆ ಹಣ ಕೊಡುವುದಕ್ಕೆ ಆಗುವುದಿಲ್ಲ. ರಿಕವರೀಸ್ ವೆರಿ ಬ್ಯಾಡ್ ಎಂದು ಹೇಳುತ್ತಿದ್ದಾರೆ, ರಿಕವರೀಸ್ ಬಗ್ಗೆ ಗಮನ ಇಲ್ಲ, ನಿಮಗೆ ರಿ ಫೈನಾನ್ಸ್ ಮಾಡುವ ಪ್ರಶ್ನೆ ಬರುವುದಿಲ್ಲ ಎಂದು ಹೇಳಿದರೆ ಏನು ಮಾಡುವುದು? ಇದು ಸ್ಟೇಟ್ ಗೌರ್ನಮೆಂಟ್ ಕೆಲಸ ಅಲ್ಲ. ಸ್ಟೇಟ್ ಗೌರ್ನಮೆಂಟ್ ಹೆಚ್ಚು ಎಂದರೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬಹುದು. ಯಾವುದೇ ಪಕ್ಷದ ಸರಕಾರ ಇರಬಹುದು. ಕೇಂದ್ರ ಸರಕಾರದ ಬಜೆಟ್ ತಯಾರು ಮಾಡಬೇಕಾದರೆ they will spell out what exactly are the concessions they are going to give to all these small and marginal artisans and agricultural labourers. ಹೇಗೆ ಸಾಲ ಮನ್ನಾ ಮಾಡುತ್ತೇವೆ ಎಂಬುದನ್ನು ಅವರು ಸ್ಪೆಲ್‌ಔಟ್ ಮಾಡುತ್ತಾರೆ. ಕೇಂದ್ರ ಸರಕಾರದವರು ಹೇಳಿದ್ದಾರೆ. ಮೀಟಿಂಗ್ ಮಾಡುತ್ತಿದ್ದಾರೆ. ಪ್ಲಾನಿಂಗ್ ಕಮಿಷನ್, ಅಗ್ರಿಕಲ್ಚರಲ್ ಮಿನಿಸ್ಟರ್, ಫೈನಾನ್ಸ್ ಮಿನಿಸ್ಟರ್, ರೂರಲ್ ಡೆವಲಪ್‌ಮೆಂಟ್ ಮಿನಿಸ್ಟರ್ ಎಲ್ಲರೂ ಸೇರಿ ಕುಳಿತು ಕೊಂಡು ಮಾತನಾಡಬೇಕಾಗುತ್ತದೆ. ಕೇಂದ್ರ ಸರಕಾರ ತೀರ್ಮಾನ ಮಾಡದೇ ಹೋದರೆ ಹೇಗೆ? ತಾವೂ ಹೇಳುವುದು ನಿಜ. ನಾವು ಭಾಷಣ ಮಾಡಿದರೆ ಆಗುವುದಿಲ್ಲ. What would happen to the loans taken from the commercial Banks? Who has to decide that ಬ್ಯಾಂಕಿಂಗ್ ಲಾ ಪ್ರಕಾರ ಮಾಡಬೇಕಾಗುತ್ತದೆ. ರಿಸರ್ವ್ ಬ್ಯಾಂಕ್ ಆಕ್ಟ್ ಇದೆ. ಇದನ್ನು ಯಾರು ಕಂಟ್ರೋಲ್ ಮಾಡುವವರು? Are we have any control over all these commercial banks or any type of bank as a matter of fact. Except co-operative institutions. we don't have control over them. ಆದ್ದರಿಂದ ಇಲ್ಲಿರತಕ್ಕಂಥ ವಿಚಾರದ ಬಗ್ಗೆ ಕೇಂದ್ರ ಸರಕಾರ ಮಧ್ಯಪ್ರವೇಶ ಮಾಡಿ ತೀರ್ಮಾನ ಮಾಡದೇ ಇದ್ದರೆ ನಾವು ಎಷ್ಟು ಭಾಷಣ ಮಾಡಿದರೂ ಉಪಯೋಗಕ್ಕೆ ಬರುವುದಿಲ್ಲ. ದೇವಿಲಾಲ್ ಮಿನಿಸ್ಟ್ರಿಯಲ್ಲಿ ಸಾಲ ವಜಾ ಮಾಡುತ್ತೇವೆಂದು ಹೇಳಿದರು. ಯಡಿಯೂರಪ್ಪನವರು ಈ ವಿಚಾರ ಎತ್ತಿದಾಗ ಹೇಳಿದರು. ಸಾಲ ವಜಾ ಮಾಡುತ್ತೇವೆಂದು ಅವರು ಭಾಷಣ ಮಾಡಿದರು. ಆದರೆ ಎಲ್ಲಿ ಸಾಲ

ವಜಾ ಆಗಿದೆ. ಯಾರು ಹೇಳಿದರು ವಜಾ ಆಗಿದೆ ಎಂದು. ರೆಕವರೀಸ್ ನಿಲ್ಲಿಸಬಹುದೇ ವಿನಃ ವಜಾ ಮಾಡುವುದಕ್ಕೆ ರಿಸರ್ವ್ ಬ್ಯಾಂಕ್‌ನವರು ಒಪ್ಪದಿದ್ದರೆ ಬರುವುದಿಲ್ಲ. ನಾಳೆ ಹರ್ಯಾಣದಲ್ಲಿ ಮತ್ತೊಂದು ಸರಕಾರ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಈ ಬಗ್ಗೆ ಹೀಗೇ ಆಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಬಾಕಿ ಹಣ ಕೊಡದೇ ಹೋದರೆ ರೀಫೆನ್ಸ್ ಮಾಡುವುದಿಲ್ಲ ಸ್ಟಾರ್ಟ್ ರೆಕವರೀಸ್ ಎಂದರೆ they will have to recover the loans that were due at the time of Devi Lal's Ministry. ನಾಳೆ ದಿವಸ ಸಿಕಿಹಾಕಿಕೊಳ್ಳಬೇಕಾಗುತ್ತದೆ, It is a dangerous move. ಅದಕ್ಕೋಸ್ಕರ ಇದು ಬಹಳ ಡೇಂಜರಸ್ ಮೂವ್ ಇದೆ. ಎಲ್ಲರೂ, ಎಲ್ಲಾ ಪಕ್ಷಗಳೂ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಎಲ್ಲರೂ ಸೇರಿ ತೀರ್ಮಾನ ಮಾಡಿದ ಹೊರತು ಇದು ಬಗೆಹರಿಯುವುದಿಲ್ಲ.

ಶ್ರೀ ರುಕ್ಮಯ್ಯ ಪೂಜಾರಿ.—ಬಿಹಾರ ಮತ್ತು ರಾಜಾಸ್ಥಾನದಲ್ಲಿ ಸಾಲ ಮನ್ನಾ ಮಾಡಿದ್ದೇವೆ ಎಂದು ಹೇಳಿದ್ದಾರೆ, ಯಾವ ಆಧಾರದ ಮೇಲೆ ಅವರು ಮಾಡಿದ್ದಾರೆ ?

ಶ್ರೀ ಎಸ್. ಬಂಗಾರಪ್ಪ.—ನಾನೂ ಅದೇ ಹೇಳುವುದು. Your question is a pertinent question.

ಛೇರ್ಮನ್.—ಬೈರೇಗೌಡರು ಪೂರ್ತಿ ಮುಗಿಸಲಿ.

ಶ್ರೀ ಎಸ್. ಬಂಗಾರಪ್ಪ.– ಮಹಾರಾಷ್ಟ್ರದಲ್ಲಿ ಅಂಟುಲೆ ಮುಖ್ಯಮಂತ್ರಿಯಾಗಿದ್ದಾಗ ಸಾಲ ವಜಾ ಮಾಡುತ್ತೇವೆ ಎಂದರು. ಆದರೆ ಕೇಂದ್ರ ಸರಕಾರದವರು ಮತ್ತು ರಿಸರ್ವ್‌ಬ್ಯಾಂಕ್‌ನವರು ಒಪ್ಪಲಿಲ್ಲ. ತಮಗೆ ಇದು ಗೊತ್ತಿದೆ. ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಹೀಗೇ ಯಾರೇ ತೀರ್ಮಾನ ಮಾಡಿದರೂ ಸಹ ಸೇಮ್ ಟೈಪ್ ಆಗುತ್ತದೆ. This is just for information. At best you may stop recovery. But to waive loans taken by the farmers from all these banks including commercial banks or co-operative societies, I am sorry to say that those loans stand against those names in all the records. This is for your information.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕಂಥ ಪರಿಸ್ಥಿತಿ ಆದರೂ ಏನು ? ಸಾಲ ವಜಾ ಮಾಡಿ ಎಂದು ರೈತರು ಹೊಸದಾಗಿ ಕೇಳುತ್ತಿಲ್ಲ. ಇವೊತ್ತು ರಾಷ್ಟ್ರೀಯ ರಂಗದ ಸರ್ಕಾರದವರು ಸಹ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಈ ಮಾತನ್ನು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದವರು ಸಹ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಇದೇ ಮಾತನ್ನು ಹೇಳಿದ್ದರು. ಕಾಂಗ್ರೆಸ್ ಪಕ್ಷದವರು ಕೇಂದ್ರ ಸರ್ಕಾರವನ್ನು ನಾವು ವಿನಂತಿಮಾಡಿ ಸಾಲ ವಜಾಮಾಡಿ ಎಂದು ಕೇಳುತ್ತೇವೆಂದು ಹೇಳಿದ್ದಾರೆ. ಎರಡೂ ಕಡೆಯವರು ಇದೇ ಮಾತನ್ನು ಹೇಳಿರುವುದರಿಂದ ಇವತ್ತಿನ ದಿವಸ ಈ ಪರಿಸ್ಥಿತಿ ಉದ್ಭವವಾಗಿದೆ. ಕೇಂದ್ರ ಸರ್ಕಾರದವರು ಮಾರ್ಚಿ ೨೦ನೇ ತಾರೀಖು ಬಜೆಟ್ ಮಂಡಿಸುವವರಿದ್ದಾರೆ. ಆಗ ರೈತರಿಗೆ ಸ್ವಲ್ಪ ಪರಿಹಾರ ಸಿಗಬಹುದೆಂದು ಹೇಳಿದ್ದಾರೆ. ರಾಜ್ಯದಲ್ಲಿ ರೈತರು ಜೈಲಿಗೆ ಹೋಗುವಂತಹ ಪರಿಸ್ಥಿತಿ ಈಗಾಗಲೇ ಶುರುವಾಗಿದೆ. ಶಿವಮೊಗ್ಗದಲ್ಲಿ ರೈತರು ಜೈಲಿಗೆ ಹೋಗುತ್ತಿರುವುದನ್ನು ನಾವು ಕೇಳಿದ್ದೇವೆ. ಕೇವಲ ೫೦೦ ರೂಪಾಯಿಗಳ ಸಾಲ ಕೊಡಬೇಕಾಗಿದ್ದರಿಂದ ಜೈಲಿಗೆ ಹೋಗಿದ್ದಾರೆ. ಇದು ಹೀಗೆ ಮುಂದುವರಿದರೆ ಪ್ರತಿಯೊಬ್ಬ ರೈತ ಜೈಲಿಗೆ ಹೋಗುವಂತಹ ಪರಿಸ್ಥಿತಿ ಬರಬಹುದು. ಇದಕ್ಕೊಂದು ಪರಿಹಾರವನ್ನು ರಾಷ್ಟ್ರೀಯ ರಂಗ ಸರ್ಕಾರ ಮತ್ತು ನಮ್ಮ ರಾಜ್ಯ ಸರ್ಕಾರ ಸೇರಿ ಹುಡುಕಬೇಕಾಗುತ್ತದೆ. ರಾಷ್ಟ್ರೀಯ ರಂಗ ಸರ್ಕಾರ ತಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ಬಹಳ ಸ್ಪಷ್ಟವಾದ ಭರವಸೆಯನ್ನು ಕೊಟ್ಟಿದೆ. ಇದಕ್ಕೆ ಕಾಂಗ್ರೆಸ್ ಪಕ್ಷದವರ ಜವಾಬ್ದಾರಿ ಕೂಡ ಇರುವುದರಿಂದ ಇವತ್ತು ರಾಜ್ಯದಲ್ಲಿ ಈ ಪರಿಸ್ಥಿತಿ ಉದ್ಭವವಾಗಿದೆ. ರೈತರಿಗೆ ಹೊಸದಾಗಿ ಕೊಡುತ್ತಿರುವ ಸಾಲ ನಿಂತು ಹೋಗಿದೆ. ನಮ್ಮ ಕಡೆ ಬೋರ್‌ವೆಲ್‌ಗಳಿಗೆ ಸಾಲ ಕೊಟ್ಟು ಕೆಲಸ ಅರ್ಧಂಬರ್ಧ ಆಗಿದೆ. ಕೆಲಸ ಪ್ರಾರಂಭವಾಗಿ ಸುಮಾರು ೩ ತಿಂಗಳಾಗಿದೆ. ಬೋರ್‌ವೆಲ್‌ಗಳಿಗೆ ಪಂಪ್ ಹಾಕಿಸಿಕೊಳ್ಳುವುದಕ್ಕೆ ಸಾಲ ಸಿಗುತ್ತಿಲ್ಲ. ಕಳೆದ ಒಂದು ವಾರದಿಂದ ಈ ಪರಿಸ್ಥಿತಿ ರಾಜ್ಯದಲ್ಲಿ ಇದೆ. ರೈತರು ಸಂಪೂರ್ಣವಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಲ ಕೇಳಲು ಬ್ಯಾಂಕ್‌ಗಳಿಗೆ ಹೋದರೆ ಮಾರ್ಚಿ ತಿಂಗಳವರೆಗೆ ಸಾಲ ಕೊಡುವುದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಸರ್ಕಾರದವರು ನಬಾರ್ಡ್‌ಗೆ ಹಣ ಕೊಡಬೇಕಾಗಿದೆ. ಹಿಂದೆ ಯಾರು ಮಾಡಿದರೋ ಆ ಪ್ರಶ್ನೆ ಈಗ ಬೇಡ. ಜನರಿಗೆ ಅನುಕೂಲ ಮಾಡಿ ಕೊಡಬೇಕು. ಅದಕ್ಕೆ ಏನಾದರೊಂದು ಪರಿಹಾರ ಕಂಡು ಹಿಡಿಯಬೇಕು. ರೈತರಿಗೆ ಬಹಳ ತೊಂದರೆಯಾಗಿದೆ. ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ರೈತರಿಗೆ ಪಿ.ಎಲ್.ಡಿ. ಬ್ಯಾಂಕ್ ಮುಖಾಂತರ ಒಂದು ಕಂತು ಸಾಲ ಕೊಟ್ಟು ಇನ್ನೊಂದು ಕಂತು ಸಾಲ

ಕೊಡುವಷ್ಟರಲ್ಲಿ ಈ ನಿರ್ಬಂಧ ಹಾಕಿದ್ದಾರೆ. ಸಾವಿರಾರು ರೈತರಿಗೆ ಇವರಿಂದ ತೊಂದರೆಯಾಗಿದೆ. ಮುಂದೆ ಸಾಲ ಸಿಗುತ್ತದೆ ಎನ್ನುವ ಭರವಸೆ ರೈತರಿಗೆ ಇಲ್ಲ. ರೈತರು ಭೀಕರವಾದ ಕತ್ತಲಲ್ಲಿ ಇದ್ದಾರೆ. ಇದಕ್ಕೆ ರಾಜ್ಯಸರ್ಕಾರದವರೇ ಹೊಣೆ ಎಂದು ನಾನು ಹೇಳಬೇಕಾಗುತ್ತದೆ. ಎಷ್ಟೋ ಜನ ರೈತರು ಕೊಡಬೇಕಾದ ಸಾಲವನ್ನು ವಾಪಸ್ ಕೊಟ್ಟು ಸಾಲ ಪಡೆಯಲು ಹೋದಾಗ ಅವರಿಗೆ ಸಾಲ ಸಿಕ್ಕಿಲ್ಲ. ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ.........

ಶ್ರೀ ಎಸ್. ಬಂಗಾರಪ್ಪ.—ನಬಾರ್ಡ್‌ನವರಿಗೆ ಹಣವನ್ನು ರಾಜ್ಯ ಸರ್ಕಾರ ಕೊಡಬೇಕು. ಅದರ ಡಿಫರೆನ್ಸ್ ಆಫ್ ಇಂಟ್ರೆಸ್ಟ್ ಒಂದು ವೇಳೆ ನೀವೇನಾದರೂ ಮುಖ್ಯಮಂತ್ರಿಯಾದರೆ ನಾವು ದೊಡ್ಡ ದೊಡ್ಡ ಪ್ರಶ್ನೆಗಳನ್ನು ಹಾಕುತ್ತೇವೆ. ನೀವು ಮುಖ್ಯಮಂತ್ರಿಯಾದರೆ ನಮಗೆ ಸಂತೋಷ. ಹಿಂದೆ ಜನತಾ ಸರ್ಕಾರದಲ್ಲಿ ನೀವು ಮಂತ್ರಿಯಾಗಿದ್ದವರು. ಅದಕ್ಕೆ ನಾನು ಈ ಮಾತು ಹೇಳಬೇಕಾಯಿತು. ನೀವು ನಮ್ಮ ಪ್ರಶ್ನೆಗೆ ಉತ್ತರ ಕೊಡುತ್ತೀರಿ, ಅದರಲ್ಲಿ ಅನುಮಾನ ಇಲ್ಲ. ಬಾಕಿ ಡಿಫರೆನ್ಸ್ ಕೊಡ ತಕ್ಕಂಥ ಕಾಲದಲ್ಲಿ ಅದು ನೀವು ಕೊಟ್ಟಿರಬಹುದು, ನಾವು ಕೊಟ್ಟಿರಬಹುದು, ಆ ಪ್ರಶ್ನೆಯಲ್ಲ. ಸುಮಾರು ೪೫ ಕೋಟಿ ರೂಪಾಯಿಗಳಷ್ಟು ಡಿಫರೆನ್ಸ್ ಆಫ್ ಇಂಟ್ರೆಸ್ಟ್ ಕೊಡಬೇಕಾಗಿರಬಹುದು. ಸಬ್ಜಕ್ಟ್ ಟು ಕರೆಕ್ಷನ್. ಅದಕ್ಕೆ ಶ್ರೀ ವಿಶ್ವನಾಥ್‌ರವರು ನೀವು ನಬಾರ್ಡ್‌ಗೆ ಕೊಡಬೇಕಾದಂತಹ ಹಣ ಕೊಡಿ ಇಲ್ಲದಿದ್ದರೆ ನಬಾರ್ಡ್ ನಿಮಗೆ ಹಣ ಕೊಡುವುದಿಲ್ಲವೆಂದು ಹೇಳಿದ್ದು. ಅವರು ಸಾಲ ಕೊಡುವುದಕ್ಕೂ ಆಗುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ.

೬-೦೦ ಪಿ.ಎಂ.

ನೀವು ಡಿಸೆಂಬರ್‌ವರೆಗೆ ಟೈಮ್ ತೆಗೆದುಕೊಂಡಿರಿ. ವೆರಿಫೈ ಯುವರ್ ಸ್ಟೇಟ್‌ಮೆಂಟ್. ಗೋ ಥ್ರೂ ಸ್ಟೇಟ್‌ಮೆಂಟ್. ಆಗಿದ್ದಂತಹ ಸರ್ಕಾರದವರು, ಡಿಸೆಂಬರ್‌ಗೆ ನಮಗೆ ಟೈಮ್ ಕೊಡಿ, ನಾವು ಹಣ ಕಟ್ಟುತ್ತೇವೆಂದು ಹೇಳಿದ್ದರು. ಇಲ್ಲೇ ವ್ಯತ್ಯಾಸ ಆಗಿರುವುದು. ಏಕೆಂದರೆ, ರೈತರು ಕಟ್ಟುವ ದುಡ್ಡನ್ನು ರಾಜ್ಯ ಸರ್ಕಾರದವರು ಕಟ್ಟಬೇಕು. ಆದರೆ, ಇದನ್ನು ರಾಜ್ಯ ಸರ್ಕಾರದವರು ಕೊಡಲಿಲ್ಲ. ಕೊಡದೇ ಇರುವುದಕ್ಕೋಸ್ಕರ ನಬಾರ್ಡ್‌ನವರು ಅನಿವಾರ್ಯವಾಗಿ ಸಾಲ ಅಡ್ವಾನ್ಸ್ ಮಾಡುವುದನ್ನು ನಿಲ್ಲಿಸಬೇಕಾಯಿತು. ಇವತ್ತು ರೈತರ ಸಾಲ ವಜಾ ಆಗಬೇಕು ಅನ್ನತಕ್ಕ ಜನರಲ್ಲಿ ನಾನೂ ಒಬ್ಬನಾಗಿ ಮಾತನಾಡುತ್ತಿದ್ದೇನೆ. ಏಕೆಂದರೆ, ಅಲ್ಲಿ ಬರಗಾಲ ಇದೆ, ಮತ್ತೊಂದು ಇದೆ, ರೈತರಿಗೆ ಅನ್ಯಾಯ ಆಗಿದೆ, ತಮ್ಮ ಅಭಿಪ್ರಾಯವೇ ನಮ್ಮದೂ ಆಗಿದೆ. ನಮ್ಮ ಕಡೆ ಕುಳಿತಿರುವವರಿಗೂ ನಿಮ್ಮೆಲ್ಲರಿಗೂ ಇರುವ ಹಾಗೆಯೇ ಕಳಕಳಿ ಇದೆ. ಇದರ ಬಗ್ಗೆ ಅನುಮಾನ ಬೇಕಾಗಿಲ್ಲ. ಆದರೆ, ಸಾಲವನ್ನು ಕೊಡದಿದ್ದರೆ ನಬಾರ್ಡ್‌ನವರು ಹಣ ಕೊಡುವುದಕ್ಕೆ ಬರುವ ಹಾಗಿಲ್ಲ. ಹಿಂದೆ ಯಾರು ಸರ್ಕಾರವನ್ನು ನಡೆಸಿದ್ದರೋ ಅಂದರೆ, ನಿಮ್ಮನ್ನೂ ಸೇರಿಸಿಕೊಂಡು ನಾನು ಹೇಳುತ್ತಿದ್ದೇನೆ. ನಿಮ್ಮ ಮೇಲೆ ಆಪಾದನೆ ಮಾಡುತ್ತಿದ್ದೇನೆಂದು ತಾವು ತಿಳಿಯಬೇಡಿ. ಆಗ ನೀವು ಏನು ಮಾಡುತ್ತಿದ್ದೀರಿ ? ನೀವು ಏಕೆ ದುಡ್ಡು ಕೊಡಲಿಲ್ಲ ? ಒಂದು ವಿಚಾರಕ್ಕಾಗಿ ನಾನು ಹೆಚ್ಚು ವಿಷಯಗಳನ್ನು ಹೇಳಲು ಹೋಗುವುದಿಲ್ಲ. ದುಡ್ಡನ್ನು ನೀವು ಕೊಡಲಿಲ್ಲ. ಈಗ ನಾವು ದುಡ್ಡು ಕೊಡಬೇಕಾಗುತ್ತದೆ. ನಾವು ಈಗ ದುಡ್ಡನ್ನು ಜೋಡಿಸಬೇಕಾಗಿದೆ. ಈಗ ನಾವು ನಬಾರ್ಡ್‌ನವರಿಗೆ ಸ್ವಲ್ಪ ಟೈಮ್ ಕೊಡಿ ಎಂದು ಕೇಳಿಕೊಂಡಿದ್ದೇವೆ. ಆಮೇಲೆ ಪುನಃ ರೀ ಫೈನಾನ್ಸ್‌ನ್ನು ನಬಾರ್ಡ್‌ನಿಂದ ಪಡೆಯುತ್ತೇವೆ ಎನ್ನುವ ಆಸೆ ನಮಗೂ ಇದೆ.

ವೈಸ್ ಛೇರ್ಮನ್.—ಬೈರೇಗೌಡರೇ, ಬೇಗ ಮುಗಿಸಿ.

ಶ್ರೀ ಸಿ. ಬೈರೇಗೌಡ.—ನನ್ನ ವೇಳೆಯನ್ನು ಬೇರೆಯವರು ತೆಗೆದುಕೊಂಡರೆ ನಾನು ಏನು ಮಾಡಲಿ ?

ಶ್ರೀ ಹೆಚ್ ಏಕಾಂತಯ್ಯ.—ಸನ್ಮಾನ್ಯ ಬಂಗಾರಪ್ಪನವರು ಹೇಳಿದಂತಹ ಚಿತ್ರ ಏನಿದೆ ಅದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಆಮೇಲೆ ಬೇಕಾದರೆ ಅವಕಾಶ ಕೊಡಿ ಅದರ ಬಗ್ಗೆ ನಾನು ಮಾತನಾಡುತ್ತೇನೆ. ಸರ್ಕಾರ ನಬಾರ್ಡ್ ನವರಿಗೆ ಹಣ ಕೊಡಬೇಕಾಗಿಲ್ಲ. ಏನು ಬಡ್ಡಿ ರಿಯಾಯಿತಿ ಬಾಬ್ತು ಅಪೆಕ್ಸ್ ಬ್ಯಾಂಕ್ ಮತ್ತು ಸ್ಟೇಟ್ ಕೋ-ಅಪರೇಟಿವ್ ಲ್ಯಾಂಡ್ ಬ್ಯಾಂಕ್‌ಗಳಿಗೆ ಸರ್ಕಾರ ಹಣ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ. ಈ ರಿಯಾಯಿತಿ ಹಣವನ್ನು ಎಷ್ಟು ಎಂದು ಬಿಲ್ ಮಾಡಿ ಆ ಹಣವನ್ನು ಆ ಬ್ಯಾಂಕ್‌ಗಳಿಗೆ ಕೊಡಬೇಕಾಗುತ್ತದೆ. ಬ್ಯಾಂಕುಗಳಿಗೆ ರಾಜ್ಯ ಸರ್ಕಾರ ಕೊಡಬೇಕಾದ ಹಣವನ್ನು ಕೊಡದೇ ಇರುವುದರಿಂದ ನಾವು ರೀಫೈನಾನ್ಸ್ ಮಾಡುವುದಿಲ್ಲವೆಂದು ನಬಾರ್ಡ್‌ನವರು ಹೇಳಿದ್ದಾರೆಯೇ ಹೊರತು ನಬಾರ್ಡ್‌ನವರಿಗೆ ಹಣ ಬಾಕಿ ಕೊಡಬೇಕಾದುದು ಏನೂ ಇರಲಿಲ್ಲ. ಇಲ್ಲಿ

ಪ್ರಶ್ನೆ ಬಂದಿರುವುದು ಏನೆಂದರೆ, ಕೊಡಬೇಕಾದ ಹಣದಲ್ಲಿ ೧೫೦ ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದೇವೆ, ಅದರಲ್ಲಿ ಅನೇಕ ಕಾರಣಗಳಿಂದ ಅನೇಕ ಸಂದರ್ಭಗಳಲ್ಲಿ ಪ್ರೈಮರಿ ಕೋ-ಅಪರೇಟಿವ್ ಸೊಸೈಟಿಗಳ ಮುಖಾಂತರ ಹಾಗೂ ಅಪೆಕ್ಸ್ ಬ್ಯಾಂಕ್ ಮುಖಾಂತರ ಸ್ಟೇಟ್ ಕೋ-ಅಪರೇಟಿವ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಮುಖಾಂತರ ಸರ್ಕಾರಕ್ಕೆ ಹಣ ಬರುವುದು ತಡಆಗಿರಬಹುದು. ಹೋದ ವರ್ಷದ್ದು ಈವರ್ಷ ಕೊಡಲಾಗುತ್ತದೆ. ಈ ವರ್ಷದ್ದು ಮುಂದಿನ ವರ್ಷ ಕೊಡಲಾಗುತ್ತದೆ. ಈ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ, ಈ ವಿಧಾನ ಸಭೆಯಲ್ಲಿ ಚರ್ಚೆ ಮಾಡೋಣ ಹಾಗೂ ಹೊರಗೆ ಚರ್ಚೆ ಮಾಡೋಣ. ಇಲ್ಲಿ ಯಾವ ಪ್ರಶ್ನೆ ಇದೆ ಎಂದರೆ, ಈ ದೇಶದ ರೈತನ ಸಾಲವನ್ನು ಮನ್ನಾ ಮಾಡಬೇಕೇ ಅಥವಾ ಬೇಡವೇ ? ಅಂದರೆ, ಯಾವುದು ಇರ್‌ರೆಕವರಬಲ್ ಹಣ ಇದೆ. ಅದನ್ನು ನೈಸರ್ಗಿಕ ಕಾರಣಗಳಿಂದಾಗಿ ನಮಗೆ ಹಣವನ್ನು ವಾಪಸ್ ಕೊಡುವಂಥ ಪರಿಸ್ಥಿತಿ ಇದೆ. ಅಂಥವರಿಗೆ ಸಹಾಯ ಮಾಡಬೇಕೆನ್ನುವ ಪ್ರವೃತ್ತಿ ಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ ಎನ್ನುವ ಮಾತನ್ನು ಹೇಳುತ್ತಾರೆ. ಇದು ಕೇವಲ ಒಂದು ರಾಜ್ಯಕ್ಕೆ ಸಂಬಂಧಿಸಿದ ಪ್ರಶ್ನೆ ಅಲ್ಲವೆಂದು ನಾನು ಒಪ್ಪುತ್ತೇನೆ. ಇದು ಒಂದು ರಾಷ್ಟ್ರದ ಸಮಸ್ಯೆ. ಈ ರಾಷ್ಟ್ರದ ಸಮಸ್ಯೆಯನ್ನು ಸಂಬಂಧಪಟ್ಟ ಎಲ್ಲರೂ ಚರ್ಚೆ ಮಾಡಿ ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕೆನ್ನುವ ಮಾತನ್ನು ನಾವೆಲ್ಲರೂ ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ. ಸಾಲ ಮನ್ನಾ ಮಾಡುವ ಬಗ್ಗೆ ಇರುವಂಥ ಆರ್ಥಿಕ ಇತಿಮಿತಿಯೊಳಗೆ ಸಾಮಾನ್ಯವಾದಂಥ ರೈತರುಗಳಿಗೆ ನಮ್ಮ ರಾಜ್ಯ ಸರ್ಕಾರ ಯಾವ ಒಂದು ರಿಯಾಯಿತಿಯನ್ನು ಮಾಡುವುದಕ್ಕೆ ಸಾಧ್ಯ ಇದೆ ಎಂಬುದರ ಬಗ್ಗೆ ಆಲೋಚನೆ ಮಾಡುವುದಕ್ಕೆ ರಾಜ್ಯ ಸರ್ಕಾರಕ್ಕೆ ಸಾಕಷ್ಟು ಅಧಿಕಾರ ಇದೆ. ಈ ಅಧಿಕಾರವನ್ನು ನಾವು ಚಲಾಯಿಸಿ ಯಾವ ರೀತಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ವಸೂಲು ಮಾಡಬೇಕು, ಅಥವಾ ಯಾವ ರೀತಿ ಸಾಲ ಮನ್ನಾ ಮಾಡಬೇಕು ಎಂಬ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆಂದು ಮಾನ್ಯ ವೀರೇಂದ್ರ ಪಾಟೀಲರನ್ನು ಕೇಳಬೇಕಾಗುತ್ತದೆ. ಇಡೀ ಸಾಲವನ್ನು ಮನ್ನಾ ಮಾಡುವುದಕ್ಕೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಾಯವನ್ನು ಪಡೆಯಬಹುದು ಹಾಗೂ ಅವರ ಮಾರ್ಗದರ್ಶನವನ್ನು ಪಡೆಯಬಹುದು. ಇದರ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಪ್ರತಿಯೊಂದು ರೈತರ ಸಮಸ್ಯೆಗಳ ಬಗ್ಗೆಯೂ ಕೇಂದ್ರ ಸರ್ಕಾರದ ಕಡೆ ಕೈತೋರಿಸುವ ಪ್ರವೃತ್ತಿ ಸರಿಯಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಾಜಿ ಸಹಕಾರಿ ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ನಮ್ಮ ಮುಂದಿರುವುದು ಬಹಳ ಸರಳವಾದ ಸಮಸ್ಯೆ. ಒಂದು, ಸಾಲ ನಿಂತಿರತಕ್ಕಂತಾದ್ದನ್ನು ಕೊಡತಕ್ಕಂತ ಏರ್ಪಾಟು ಮಾಡತಕ್ಕಂತದ್ದು. ಇದು ಆಗುತ್ತದೋ ಬಿಡುತ್ತದೋ ಗೊತ್ತಿಲ್ಲ. ಈಗಾಗಲೇ ಶಿಕಾರಿಪುರದಲ್ಲಿ ಬೋಣಿ ಆಗಿದೆ ಅಂದರೆ ಶಿಕಾರಿ ಪುರದಲ್ಲಿ ಸಾಲ ಕೊಡದೇ ಇರುವ ರೈತನೊಬ್ಬನನ್ನು ಜೈಲಿಗೆ ಕಳುಹಿಸಲಾಗಿದೆ. ಹಿಂದೆ ರೈತರುಗಳನ್ನು ಜೈಲಿಗೆ ಕಳುಹಿಸತಕ್ಕಂಥ ಕೆಲಸ ಮಾಡಿರಲಿಲ್ಲ. ಸಾಲ ಕೊಡದೇ ಇರುವ ಕಾರಣಕ್ಕೋಸ್ಕರ ಜೈಲಿಗೆ ಹಾಕಿದ್ದಾರೆ. ಸಾಲ ಕೊಡದೇ ಇರತಕ್ಕಂಥ ಕಾರಣಕ್ಕಾಗಿ ರೈತರನ್ನು ಜೈಲಿಗೆ ಹಾಕಿರತಕ್ಕಂಥ ನಿದರ್ಶನ ಎಲ್ಲಿದೆ ?

ಶ್ರೀ ಕಾಗೋಡು ತಿಮ್ಮಪ್ಪ.—ಸಾಲಗಾರರು ಇಲ್ಲಿಯೇ ಇದ್ದಾರೆ, ಅವರ ಮೇಲೆ ಯಾವ ಸರಕಾರವೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ಸಿ. ಬೈರೇಗೌಡ.—ಶಿಕಾರಿಪುರದಲ್ಲಿ ರೈತರನ್ನು ಜೈಲಿಗೆ ಹಾಕಿದ್ದಾರೆಯೇ ಇಲ್ಲವೇ ಎಂದು ಹೇಳಿ ?

ಶ್ರೀ ಕಾಗೋಡು ತಿಮ್ಮಪ್ಪ.—ಶಿಕಾರಿಪುರದಲ್ಲಿ ರೈತ ಜೈಲಿಗೆ ಹೋಗಿದ್ದರೆ ಅದು ಬ್ಯಾಂಕ್‌ನವರು ಕೊಟ್ಟ ಸಾಲಕ್ಕೆ ಮರುಪಾವತಿ ಮಾಡದಿದ್ದುದಕ್ಕೆ ಬ್ಯಾಂಕ್‌ನವರು ತೆಗೆದುಕೊಂಡು ಕ್ರಮದಿಂದಾಗಿ ಇರಬಹುದು. ಹಾಗೇನಾದರೂ ಬ್ಯಾಂಕ್‌ನವರು ತಪ್ಪು ಮಾಡಿದ್ದರೆ ಅವರನ್ನು ತರಾಟೆಗೆ ತೆಗೆದುಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ.—ಈಗ ರೈತರ ಸಾಲವನ್ನು ವಜಾ ಮಾಡುವ ವಿಚಾರವನ್ನು ಬಜೆಟ್‌ನಲ್ಲಿ ಹೇಳುತ್ತೇವೆ ಎಂದು ಹೇಳುತ್ತಾ ಇದ್ದಾರೆ. ಆದರೆ ಇವೊತ್ತು ಸಾಲಗಾರ ರೈತರನ್ನು ಜೈಲಿಗೆ ಹಾಕುತ್ತಿದ್ದಾರೆ. ಈ ಅಂಶವನ್ನು ಗಮನಿಸ ಬೇಕಾದುದು ಅತ್ಯಾವಶ್ಯಕವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಬೈರೇಗೌಡರು ಮಾತನಾಡುತ್ತಿರುವುದನ್ನು ಕೇಳುತ್ತಾ ಇದ್ದೇನೆ. ಅವರು ಏತಕ್ಕಾಗಿ ಇಷ್ಟು ಶ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ರೈತರ ಬಗ್ಗೆ ಬಹಳಷ್ಟು ಮಾತುಗಳನ್ನು ಹೇಳುತ್ತಾ ಇದ್ದಾರೆ. ರೈತರ ಮನೆ, ಮಠ, ಎಲ್ಲ

ವಿಚಾರಗಳ ಬಗ್ಗೆಯೂ ಹೇಳಿದರು. ಈಗ ಸಾಲ ಕೊಡುವುದು ಬಿಡುವುದು ನಮ್ಮ ಮುಂದಿರುವ ವಿಚಾರ. ತಾವುಗಳೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೀರಿ. ಕೇಂದ್ರ ಸರಕಾರದ ಒಂದು ತೀರ್ಮಾನ ಆಗುವವರೆಗೆ ನಾವು ಏನೂ ಮಾಡುವ ಹಾಗಿಲ್ಲ. ಆದುದರಿಂದ ಬರೇ ಕಂಠಶೋಷಣೆ ಏಕೆ ಮಾಡಿ ಕೊಳ್ಳುತ್ತಿದ್ದೀರಿ ? ಈ ಬಗ್ಗೆ ನಾವೇನೂ ತೀರ್ಮಾನವನ್ನು ತೆಗೆದುಕೊಳ್ಳುವ ಹಾಗಿಲ್ಲ, ದುಡ್ಡು ಕೊಡುವ ಹಾಗೂ ಇಲ್ಲ. ಕೇಂದ್ರ ಸರಕಾರದವರು ೧೪ ಸಾವಿರ ಕೋಟಿ ರೂಪಾಯಿಗಳನ್ನು ಮತ್ತೆ ಅವರಿಗೆ ಕೊಡುವುದು, ಬಿಡುವುದು, ಇದೆಲ್ಲಾ ನಡೆಯುತ್ತದೆ. ಈಗ ನಾವು ಕೊಡುವುದು ಎಂದು ಇಟ್ಟು ಕೊಳ್ಳೋಣ, ಅದನ್ನು ತಿರುಗಿ ಒಂದು ಇನ್‌ಸ್ಟಾಲ್‌ಮೆಂಟ್ ಕೊಟ್ಟಿದ್ದರೆ ಎರಡನೇ ಇನ್‌ಸ್ಟಾಲ್‌ಮೆಂಟ್ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಹೀಗೆ ಸಾಲ ಕೊಡುವುದು. ಮಜಾ ಮಾಡುವುದು ನಂತರ ವಜಾ ಮಾಡುವುದು ಸರಿಯಲ್ಲ ಎಂದು ನನ್ನ ...ಅ......

ಶ್ರೀ ಸಿ. ಬೈರೇಗೌಡ.—ಸಾಲ ತೆಗೆದುಕೊಂಡು ಮಜಾ ಮಾಡುತ್ತಾರೆ ಅಂದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ವಜಾ ಎಂದು ಹೇಳಿದ್ದನ್ನು ಮಜಾ ಎಂದು ಅರ್ಥ ಮಾಡಿಕೊಂಡಿದ್ದಾರೆ ನಾನೇನು ಮಾಡಲಿ ? ಈಗ ನಾವು ಕೇಂದ್ರ ಸರಕಾರದ ಬಜೆಟ್ ಮಂಡನೆ ಆಗುವವರೆಗೂ ಏನೂ ಮಾಡುವಂತಿಲ್ಲ ಮತ್ತು ಈ ವಿಚಾರ ಇತ್ಯರ್ಥ ವಾಗುವುದಿಲ್ಲ. ನಮ್ಮ ಸರಕಾರದಲ್ಲಿ ನೀವು ಬಿಟ್ಟು ಹೋಗಿರುವುದು ಏನೂ ಇಲ್ಲ. ಸಾಕಷ್ಟು ಹಣಕಾಸು ಇಲ್ಲ. ಆದರೆ ನಮ್ಮ ಸರಕಾರ ಅಧಿಕಾರಕ್ಕೆ ಬಂದಮೇಲೆ ಟ್ರೆಜರಿಗೆ ನಾವು ಏನೂ ನಿರ್ದೇಶನಗಳನ್ನು ಕಳುಹಿಸುತ್ತಾ ಇಲ್ಲ, ನೀವು ಇರುವಾಗ ಅವರು ಕೈಬಿಟ್ಟಿದ್ದನ್ನು ನಾವು ಪ್ರಾರಂಭ ಮಾಡಿದ್ದೇವೆ ರೈತರಿಗೆ ಇರುವ ಕಷ್ಟಗಳ ಅರಿವು ನಮಗೆ ಇದೆ. ನನ್ನ ದೃಷ್ಟಿಯಲ್ಲಿ ರೈತರು ಯಾರು ಎಂದು ತಿಳಿಯುತ್ತಾ ಇಲ್ಲ. ಹೊಲ ಉಳುವವನೋ ಹೊಲ ಇಟ್ಟುಕೊಂಡು ಇತರರಿಂದ ಗುಡಿಸಿಕೊಂಡು ಜಮೀನ್ದಾರನಾಗಿರುವವನೋ, ಕೂಲಿಕಾರನೋ, ಎಂದು ಗೊತ್ತಾಗಿಲ್ಲ, ಒಟ್ಟಿನಲ್ಲಿ ಈ ಕುರಿತು ಕಂಠ ಶೋಷಣೆ ಮಾಡಿಕೊಳ್ಳುವುದು ಬೇಡ. ಈ ಬಗ್ಗೆ ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಯವರು ವಿವರವಾಗಿ ಉತ್ತರ ಕೊಡುತ್ತಾರೆ. ದಯಮಾಡಿ ಇವೊತ್ತಿಗೆ ಈ ಕಲಾಪಗಳನ್ನು ಮುಗಿಸೋಣ.

ಶ್ರೀ ಸಿ. ಬೈರೇಗೌಡ.—ಮಾನ್ಯ ಬಸವಲಿಂಗಪ್ಪನವರು ಹೇಳಿದ್ದನ್ನು ಪ್ರಾಮಾಣಿಕವಾಗಿ ತೆಗೆದು ಕೊಳ್ಳುವುದಾದರೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರಿಗೆ ರಾಜ್ಯ ಸರಕಾರದಿಂದ ೪೨–೪೩ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಅದನ್ನು ಕಂತುಗಳ ಮೂಲಕ ಕೊಡುವುದಕ್ಕೆ ಸಾಧ್ಯವಾಗುತ್ತದೆ ಇದನ್ನು ಕೇಂದ್ರ ಸರ್ಕಾರದವರು ಮಾಡುತ್ತಾರೆ ಎಂದು ಹೇಳುತ್ತಾ ಇದ್ದೀರಿ. ರೈತರು ಇದನ್ನು ನಂಬಿಕೊಂಡು ಕುಳಿತಿದ್ದಾರೆ. ಸುಮಾರು ೪೨, ೪೩ ಕೋಟಿಗಳಷ್ಟು ಹಣವನ್ನು ರಾಜ್ಯ ಸರ್ಕಾರದಿಂದ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಕಟ್ಟಬೇಕಾಗಿರುವುದು ಏನು ಬಾಕಿ ಇದೆ, ಅದನ್ನಾದರೂ ನೀವು ಕಟ್ಟಬಹುದಲ್ಲ. ಅದನ್ನು ಕಟ್ಟುವುದಕ್ಕೆ ಏಕೆಹಿಂದೆ ಮುಂದೆ ನೋಡುತ್ತೀರಿ. ಸಾಲ ಕೊಡುವುದನ್ನು ನಿಲ್ಲಿಸಿ ಆಗಲೇ ಒಂದು ವಾರವಾಗಿದೆ.

ಅಧ್ಯಕ್ಷರು.—ಸಾಕು, ಬಹಳ ಚೆನ್ನಾಗಿ ಮಾತನಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಬೈರೇಗೌಡರೇ, ಪದೇ ಪದೇ ಮಾತನಾಡಲಿಕ್ಕೆ ನನಗೆ ಆಸೆಯಿಲ್ಲ. ಪಿಎಲ್‌ಡಿ ಬ್ಯಾಂಕ್‌ದು ಮಾತ್ರ ಕಟ್ಟಬಹುದೆಂದು ನೀವು ಹೇಳಿದಿರಿ. ಆದರೆ ಅದು ಹಾಗೆ ಬರುವುದಿಲ್ಲ. ಹಣ ಕಟ್ಟುವುದು ಪಿಎಲ್‌ಡಿಗೋ ಅಥವಾ ಮತ್ತಾವುದೋ ಸಂಸ್ಥೆಗೋ ಅನ್ನೋ ಪ್ರಶ್ನೆ ಇಲ್ಲಿ ಬರುವುದಿಲ್ಲ. ಹಾಗೆ ನೋಡಿದರೆ ಕೋ–ಆಪರೇಟಿವ್ ಸೊಸೈಟೀಗೂ ಹಣ ಕಟ್ಟಬೇಕಾಗುತ್ತದೆ. ನಮ್ಮ ಹಣಕಾಸಿನ ಸಚಿವರು ಪತ್ರಿಕೆಯಲ್ಲಿ ಒಂದು ಹೇಳಿಕೆ ಕೊಟ್ಟು ಸರ್ಕಾರಕ್ಕೆ ೧ ಸಾವಿರ ಕೋಟಿ ಬಾಕಿ ಇದೆ ಎಂದು ಹೇಳಿರುವುದು ನಿಮಗೆ ಗೊತ್ತಿದೆಯೋ ? ಇದು ಯಾರ ಕೊಡುಗೆ ? ೮೩ರಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರದ ಹುಡುಗಾಟಿಕೆಯ ಫಲ.

ಶ್ರೀ ಸಿ. ಬೈರೇಗೌಡ.—ಅದಕ್ಕೆ ಕಾರಣರು ಯಾರು ಎಂಬುದರ ಬಗ್ಗೆ ಪ್ರತ್ಯೇಕವಾಗಿ ಒಂದು ದಿವಸ ಚರ್ಚೆ ಮಾಡೋಣ. ಈಗಿರುವ ಸಮಸ್ಯೆ ಎಂದರೆ ಸಾಲ ಬಂದ್ ಆಗಿದೆ ಎನ್ನುವುದು. ರೈತರಿಗೆ ಸಾಲ ಸಿಗುತ್ತಿಲ್ಲ. ಮೊದಲನೇ ಕಂತು ಬಟವಾಡೆಯಾಗಿದೆ. ಆದರೆ ಎರಡು ಮತ್ತು ಮೂರನೇ ಕಂತು ಬಟವಾಡೆಯಾಗುತ್ತಿಲ್ಲ. ಅದು ರಿಲೀಜ್ ಆಗಬೇಕಾದರೆ ನಾನು ಹೇಳಿದ ೪೩ ಕೋಟಿ ರೂಪಾಯಿಗಳನ್ನು ವಾಪಸಿ ಮಾಡಬೇಕಾಗುತ್ತದೆ. ಈಗ ಅದನ್ನು ಕೊಡುವ ಏರ್ಪಾಡು ಮಾಡಿ. ರೈತರಿಗೆ ಸಾಲ ಕೊಡಿಸಬೇಕೆಂದಿದ್ದರೆ ನೀವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದಲ್ಲ. ಇದಕ್ಕೆ ನೀವು ಏನು ಹೇಳುತ್ತೀರಿ ಅನ್ನೋದು ಕೂಡ ಗೊತ್ತಿದೆ, ಆದರೆ ಇದು ರಾಜ್ಯ ಸರ್ಕಾರದ ಹೊಣೆ. ರಾಜ್ಯದ ಟ್ರೆಜರಿಯಲ್ಲಿ ಸಾವಿರ ಕೋಟಿ ರೂಪಾಯಿಗಳು ಇಲ್ಲ ಎಂದು ನೀವು ಹೇಳುತ್ತೀರಿ, ಬೇಕಾದರೆ ಅದರ ಬಗ್ಗೆ

ಚರ್ಚೆ ಮಾಡೋಣ. ಏಕೆ ಅಂಥ ಸ್ಥಿತಿ ಬಂತು ಅನ್ನೋದನ್ನು ನೋಡೋಣ. ಯಾರಾದರೂ ತಪ್ಪಿತಸ್ಥರಿದ್ದರೆ ವಿಧಾನಸೌಧದ ಮುಂದೆ ವಿಚಾರಣೆ ಮಾಡಿ ಅವರನ್ನು ಜೈಲಿಗೆ ಹಾಕಿ. ಜನ ಅದಕ್ಕಾಗೇ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿ. ಅಲ್ಲದೆ ನೀವು ಅಧಿಕಾರವನ್ನು ಯಾವ ರೀತಿ ಉಪಯೋಗಿಸುತ್ತಿದ್ದೀರಿ ಎಂಬುದನ್ನೂ ಹೇಳಬೇಕಾಗುತ್ತದೆ. ಆದರೆ ಈಗಲ್ಲ, ಬೇರೊಂದು ಸಂದರ್ಭದಲ್ಲಿ ಹೇಳುತ್ತೇನೆ. ಈಗಿರುವ ಪರಿಸ್ಥಿತಿಗೂ ಅದಕ್ಕೂ ಸಂಬಂಧವಿಲ್ಲ. ಆದ್ದರಿಂದ ಈಗ ಏನು ಸಾಲ ನಿಂತು ಹೋಗಿದೆ ಅದನ್ನು ಕೊಡಿಸುವ ಬಗ್ಗೆ ಸರ್ಕಾರ ಉತ್ತರ ಕೊಡಲಿ. ಅದರ ಬಗ್ಗೆ ತಕ್ಕ ಏರ್ಪಾಡು ಮಾಡಿ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅಂತೂ ಕೊನೆಗಾದರೂ ಹಣಕಾಸಿನ ಸಚಿವರು ಸಾಲದ ಹೊರೆಯನ್ನು ಬೇರೆಯವರ ಮೇಲೆ ಹಾಕಿರುವುದನ್ನು ನೋಡಿ ನೋವಿನಿಂದ ಅವರಿಗೆ ಕೃತಜ್ಞತೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಇಲ್ಲಿಗೆ ಮುಗಿಯಿತು. ಮುಖ್ಯಮಂತ್ರಿಗಳು ನಾಳೆ ಉತ್ತರ ಕೊಡುವರು. ಸದನವು ನಾಳೆ ಬೆಳಿಗ್ಗೆ ೧೦ ಗಂಟೆಗೆ ಸೇರುವುದು.

(ಸದನವು ೬–೧೫ಕ್ಕೆ ಮುಕ್ತಾಯವಾಗಿ ಮತ್ತೆ ಮಂಗಳವಾರ ೨೩ನೇ ಜನವರಿ ೧೯೯೦ ರಂದು ಬೆಳಿಗ್ಗೆ ೧೦–೦೦ ಗಂಟೆಗೆ ಸೇರಲು ನಿಶ್ಚಯಿಸಿತು).